ಸೋಮವಾರ, ಜೂನ್ 20, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


**‘ಮಣ್ಣು ಉಳಿಸಿ’**
ಬೆಂಗಳೂರಿನ ಅರಮನೆ ಮೈದಾನದಲ್ಲಿ ಈಶಾ ಫೌಂಡೇಶನ್ ಭಾನುವಾರ ಆಯೋಜಿಸಿದ್ದ ‘ಮಣ್ಣು ಉಳಿಸಿ’ ಅಭಿಯಾನದಲ್ಲಿ ಪಾಲ್ಗೊಂಡಿದ್ದ ಬಾಲಕಿ






ಸ್ವಾತಂತ್ರ್ಯದ ಅಮೃತಮಹೋತ್ಸವ

ನವ ಭಾರತಕ್ಕಾಗಿ
ನವ ಕರ್ನಾಟಕ



# ಕರ್ನಾಟಕ
## ಪ್ರಗತಿಯ ಹೊಸ ಯುಗಕ್ಕೆ ನಾಂದಿ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಸನ್ಮಾನ್ಯ ಪ್ರಧಾನ ಮಂತ್ರಿ
## ಶ್ರೀ ನರೇಂದ್ರ ಮೋದಿ ಅವರಿಂದ
## ರೂ. 33,000 ಕೋಟಿಗೂ ಹೆಚ್ಚು ಮೊತ್ತದ 19 ಯೋಜನೆಗಳ ಉದ್ಘಾಟನೆ, ರಾಷ್ಟ್ರಕ್ಕೆ ಸಮರ್ಪಣೆ ಹಾಗೂ ಶಂಕು ಸ್ಥಾಪನೆ

— ಘನ ಉಪಸ್ಥಿತಿ —

**ಶ್ರೀ ಥಾವರ್ ಚಂದ್ ಗೆಹ್ಲೋಟ್**
ಸನ್ಮಾನ್ಯ ರಾಜ್ಯಪಾಲರು, ಕರ್ನಾಟಕ ಸರ್ಕಾರ

**ಶ್ರೀ ಬಸವರಾಜ ಎಸ್. ಬೊಮ್ಮಾಯಿ**
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

## ಜೂನ್ 20, 2022 । ಬೆಂಗಳೂರು

**ಸಮಯ: ಮಧ್ಯಾಹ್ನ 01.45 । ಬೆಂಗಳೂರು ವಿಶ್ವವಿದ್ಯಾಲಯದ ಆವರಣ**

### ತಂತ್ರಜ್ಞಾನ ಕೇಂದ್ರಗಳಾಗಿ ಉನ್ನತೀಕರಿಸಿರುವ 150 ಐಟಿಐಗಳು ರಾಷ್ಟ್ರಕ್ಕೆ ಸಮರ್ಪಣೆ

**ರೂ.4,736 ಕೋಟಿ**
- ಈ ಕಾರ್ಯಕ್ರಮದಿಂದ ಪ್ರತಿ ವರ್ಷ 1.2 ಲಕ್ಷ ವಿದ್ಯಾರ್ಥಿಗಳು ತರಬೇತಿ ಪಡೆಯಲಿದ್ದಾರೆ.
- ಐಟಿಐಗಳಲ್ಲಿ ಉತ್ತೀರ್ಣರಾದವರು ಉದ್ಯಮದಲ್ಲಿ ಉದ್ಯೋಗಕ್ಕೆ ಬೇಕಾದ ಕೌಶಲ್ಯಗಳನ್ನು ಹೊಂದಿರುವುದನ್ನು ಖಾತ್ರಿ ಪಡಿಸುತ್ತದೆ.
- ಇತರೆ ತಾಂತ್ರಿಕ ಸಂಸ್ಥೆಗಳ ಒಂದು ಲಕ್ಷ ಅಭ್ಯರ್ಥಿಗಳನ್ನು ತಲುಪುವ ಗುರಿ (ಔಟ್‌ರೀಚ್)
- ಒಟ್ಟಾರೆಯಾಗಿ, ರಾಜ್ಯದ ಯುವಜನರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸಲಿದೆ.

### ಬಾಬಾಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ (BASE) ಉದ್ಘಾಟನೆ ಹಾಗೂ ಬಾಬಾಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಅನಾವರಣ

**ರೂ.201 ಕೋಟಿ**
- 43.35 ಎಕರೆ ವಿಶಾಲವಾದ ಪ್ರದೇಶ ವ್ಯಾಪ್ತಿಯಲ್ಲಿ ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನೊಂದಿಗೆ ನಿರ್ಮಿಸಿರುವ ಆವರಣದ ಉದ್ಘಾಟನೆ.
- ಬೇಸ್ ವಿಶ್ವವಿದ್ಯಾಲಯ ಅರ್ಥಶಾಸ್ತ್ರ ಬೋಧನೆ ಹಾಗೂ ಸಂಶೋಧನೆಯಲ್ಲಿ ಹೊಸ ಮಾದರಿಯನ್ನು ಸ್ಥಾಪಿಸಿ, ನೀತಿ ರಚನೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸಹಕಾರಿಯಾಗಲಿದೆ.

**ಸಮಯ: ಮಧ್ಯಾಹ್ನ 12.30 । ಐಐಎಸ್‌ಸಿ, ಬೆಂಗಳೂರು**

### ಐಐಎಸ್‌ಸಿಯಲ್ಲಿ (IISc) ಸೆಂಟರ್ ಫಾರ್ ಬ್ರೇನ್ ರೀಸರ್ಚ್ (CBR) ಉದ್ಘಾಟನೆ

**ರೂ.280 ಕೋಟಿ**
ಸಿಬಿಆರ್ ಸ್ಥಾಪನೆ ಹಾಗೂ ಗ್ರಾಮೀಣ ಕರ್ನಾಟಕದಲ್ಲಿ ನಡೆಸಲಾಗುತ್ತಿರುವ ಪ್ರಮುಖ ಸಂಶೋಧನೆಗಳು, ಗ್ರಾಮೀಣ ಭಾರತದ ಕಡೆ ಗಮನಕೇಂದ್ರೀಕರಿಸಿ ಡೆಮೆನ್ಷಿಯಾ ಖಾಯಿಲೆಯ ಪ್ರಾರಂಭವನ್ನು ವಿಳಂಬಗೊಳಿಸುವ ಹಾಗೂ ಅದರ ಬೆಳವಣಿಗೆಯನ್ನು ನಿಧಾನಗೊಳಿಸುವ ಸೂಕ್ತ, ಸಾಕ್ಷ್ಯಾಧಾರಿತ ಸಾರ್ವಜನಿಕ ಆರೋಗ್ಯ ಪರಿಹಾರಗಳನ್ನು ಒದಗಿಸುತ್ತದೆ.

### ಬಾಗ್ಚಿ–ಪಾರ್ಥಸಾರಥಿ ಆಸ್ಪತ್ರೆಗೆ ಶಂಕು ಸ್ಥಾಪನೆ

**ರೂ.425 ಕೋಟಿ**
ಚಿಕಿತ್ಸಾ ಸಂಶೋಧನೆಗಾಗಿ ಸ್ಥಾಪಿಸಲಾಗುತ್ತಿರುವ, ಲಾಭದ ಉದ್ದೇಶ ಇಲ್ಲದಿರುವ 832–ಹಾಸಿಗೆಗಳ ಆಸ್ಪತ್ರೆಯು, ವಿಜ್ಞಾನ ಹಾಗೂ ಇಂಜಿನಿಯರಿಂಗ್‌ನಲ್ಲಿನ ಐಐಎಸ್‌ಸಿಯ ಶತಮಾನದಷ್ಟು ಹಳೆಯ ನೈಪುಣ್ಯತೆಯ ಸಂಪೂರ್ಣ ಲಾಭವನ್ನು ಪಡೆದುಕೊಂಡು ಒಂದೇ ಆವರಣದಲ್ಲಿ ಒಟ್ಟುಗೂಡಿಸಲಿದೆ.

**ಸಮಯ: ಮಧ್ಯಾಹ್ನ 02.45 । ಕೊಮ್ಮಘಟ್ಟ, ಬೆಂಗಳೂರು**

### ಪೂರ್ಣಗೊಂಡ ರೈಲ್ವೆ ಯೋಜನೆಗಳು ರಾಷ್ಟ್ರಕ್ಕೆ ಸಮರ್ಪಣೆ

**ಕೊಂಕಣ್ ರೈಲು ಮಾರ್ಗದ 100% ವಿದ್ಯುದೀಕರಣ**



**ರೂ.1,287 ಕೋಟಿ**
- ಇಂಧನ ವೆಚ್ಚದಲ್ಲಿ 70% ಉಳಿತಾಯ ಹಾಗೂ ಮಾಲಿನ್ಯ ನಿಯಂತ್ರಣ

**ಬೆಂಗಳೂರಿನಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್**

**ರೂ.314 ಕೋಟಿ**
- ಕೇಂದ್ರೀಯವಾಗಿ ಹವಾ ನಿಯಂತ್ರಿತ ಟರ್ಮಿನಲ್ – ದಕ್ಷಿಣ ಭಾರತದಲ್ಲೇ ಮೊದಲನೆಯದು
- ಕೆಎಸ್‌ಆರ್–ಬೆಂಗಳೂರು ಹಾಗೂ ಯಶವಂತಪುರ ರೈಲು ನಿಲ್ದಾಣಗಳ ಮೇಲಿನ ಒತ್ತಡವನ್ನು ಕಡಿಮೆಯಾಗಿಸಲಿದೆ.
- ಹೊಸ ರೈಲುಗಳನ್ನು ಆರಂಭಿಸಲು ಅನುಕೂಲ ಕಲ್ಪಿಸುತ್ತದೆ.

**ಅರಸೀಕೆರೆ–ತುಮಕೂರು ಜೋಡಿ ರೈಲು ಮಾರ್ಗ ಹಾಗೂ ಹೊಸ ರೈಲು ಸೇವೆಗಳಿಗೆ ಚಾಲನೆ**

**ರೂ.758 ಕೋಟಿ**
- ಹೆಚ್ಚು ರೈಲುಗಳನ್ನು ಆರಂಭಿಸಲು ಅನುಕೂಲ
- ಅರಸೀಕೆರೆ ಹಾಗೂ ಸ್ಮಾರ್ಟ್ ಸಿಟಿಯಾಗಿ ಅಭಿವೃದ್ಧಿ ಹೊಂದುತ್ತಿರುವ ತುಮಕೂರಿನ ನಡುವಿನ ಸಂಪರ್ಕ ವೃದ್ಧಿ

**ಯಲಹಂಕ–ಪೆನುಕೊಂಡ ಜೋಡಿ ರೈಲು ಮಾರ್ಗ ಉದ್ಘಾಟನೆ ಹಾಗೂ ಹೊಸ ರೈಲು ಸೇವೆಗಳಿಗೆ ಚಾಲನೆ**

**ರೂ.1,104 ಕೋಟಿ**
- ಸಮಯಪಾಲನೆ ಸುಧಾರಣೆ ಹಾಗೂ ಪ್ರಯಾಣಿಕ/ ಗೂಡ್ಸ್ ರೈಲುಗಳ ಸಂಖ್ಯೆ ಹೆಚ್ಚಳ

### ಬೆಂಗಳೂರು ಉಪನಗರ ರೈಲು ಯೋಜನೆಗೆ ಶಂಕು ಸ್ಥಾಪನೆ

**ರೂ.15,767 ಕೋಟಿ** ಮಾರ್ಗದ ಉದ್ದ: 148 ಕಿ.ಮೀ.



- ಬೆಂಗಳೂರು ನಗರವನ್ನು ಉಪನಗರ ಪ್ರದೇಶಗಳು ಹಾಗೂ ನೆರೆಯ ಪಟ್ಟಣಗಳೊಂದಿಗೆ ಸಂಪರ್ಕ ಕಲ್ಪಿಸಿ, ವಾಹನ ಸಂಚಾರದಟ್ಟಣೆಯನ್ನು ಕಡಿಮೆಗೊಳಿಸಲಿದೆ.
- ಬೆಂಗಳೂರಿನ ನಾಗರಿಕರ ಸುಲಭ ಸಂಚಾರಕ್ಕೆ ನೆರವಾಗುತ್ತದೆ.
- ಸಂಚಾರ ಮಾಡುವ ಸಮಯವನ್ನು ಕಡಿಮೆಗೊಳಿಸುತ್ತದೆ ಹಾಗೂ ಕೆಲಸ ಮಾಡುವ ಸಮಯ ಪೋಲಾಗುವುದನ್ನು ಸಾಕಷ್ಟು ಉಳಿಸುತ್ತದೆ
- ಮಲ್ಟಿ ಮೋಡಲ್ ಸಾರಿಗೆ ವ್ಯವಸ್ಥೆ – ಭಾರತೀಯ ರೈಲ್ವೆ ಹಾಗೂ ಮೆಟ್ರೊ ನಿಲ್ದಾಣಗಳಿಗೆ ಸಂಪರ್ಕ ಕಲ್ಪಿಸಿ, ಪ್ರಯಾಣಿಕರಿಗೆ ತಡೆರಹಿತ ಸಂಚಾರಕ್ಕೆ ಅನುಕೂಲ ಮಾಡಿಕೊಡುತ್ತದೆ
- ಪೂರ್ಣಗೊಂಡ ನಂತರ, ಪ್ರತಿ ದಿನ ಅಂದಾಜು 10 ಲಕ್ಷಕ್ಕೂ ಹೆಚ್ಚಿನ ಪ್ರಯಾಣಿಕರು ಈ ಸೌಕರ್ಯವನ್ನು ಬಳಸಿಕೊಳ್ಳಲಿದ್ದಾರೆ.

### ನೂತನ ರೈಲ್ವೆ ಯೋಜನೆಗಳಿಗೆ ಶಂಕು ಸ್ಥಾಪನೆ

**ರೂ.470 ಕೋಟಿ** ವೆಚ್ಚದಲ್ಲಿ ಬೆಂಗಳೂರು ಕಂಟೋನ್‌ಮೆಂಟ್ ನಿಲ್ದಾಣ ಹಾಗೂ **ರೂ.400 ಕೋಟಿ** ವೆಚ್ಚದಲ್ಲಿ ಯಶವಂತಪುರ ನಿಲ್ದಾಣಗಳ ಪುನರಾಭಿವೃದ್ಧಿ
- ವಿಮಾನ ನಿಲ್ದಾಣಗಳನ್ನು ಹೋಲುವ ಅತ್ಯಾಧುನಿಕ ಸೌಕರ್ಯಗಳಿರುವ ನಿಲ್ದಾಣಗಳು

### 5 ರಾಷ್ಟ್ರೀಯ ಹೆದ್ದಾರಿ ಯೋಜನೆಗಳು ಹಾಗೂ ಬೆಂಗಳೂರಿನಲ್ಲಿ ಮಲ್ಟಿ ಮೋಡಲ್ ಲಾಜಿಸ್ಟಿಕ್ಸ್ ಪಾರ್ಕ್ ಅಭಿವೃದ್ಧಿಗೆ ಶಂಕು ಸ್ಥಾಪನೆ

**ರೂ.7,231 ಕೋಟಿ । ಒಟ್ಟು ಉದ್ದ: 186 ಕಿ.ಮೀ.**

**ಮಲ್ಟಿ ಮೋಡಲ್ ಲಾಜಿಸ್ಟಿಕ್ ಪಾರ್ಕ್**
- ರಾಷ್ಟ್ರದ ಆರ್ಥಿಕ ಬೆಳವಣಿಗೆ ಹಾಗೂ ವ್ಯಾಪಾರ ಸ್ಪರ್ಧಾತ್ಮಕತೆಯ ವರ್ಧನೆ

## ಮೈಸೂರು

**ಸಮಯ: ಸಂಜೆ 05:30 । ಮಹಾರಾಜ ಕಾಲೇಜು ಮೈದಾನ**

### ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ (AIISH) ಶ್ರೇಷ್ಠತಾ ಕೇಂದ್ರ (Centre of Excellence) ರಾಷ್ಟ್ರಕ್ಕೆ ಸಮರ್ಪಣೆ ಹಾಗೂ ವಿವಿಧ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ

**ರೂ.155.49 ಕೋಟಿ**
ಈ ಕೇಂದ್ರವು, ಸಂವಹನಾ ಸಮಸ್ಯೆಗಳಿರುವ ಜನಸಂಖ್ಯೆಯ ಸಮಗ್ರ ತಿಳುವಳಿಕೆಯನ್ನು ವೃದ್ಧಿಸಲು ಜ್ಞಾನದ ಸೃಷ್ಟಿಯ ಕಡೆ ಗಮನಕೇಂದ್ರೀಕರಿಸುವುದರ ಜೊತೆಗೆ, ಅವರ ಅನಾನುಕೂಲಗಳನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಿದೆ.

### ನಾಗನಹಳ್ಳಿ ಹಾಗೂ ಮೈಸೂರು ಹೊಸ ಕೋಚಿಂಗ್ ಕಾಂಪ್ಲೆಕ್ಸ್‌ಗೆ ಶಂಕು ಸ್ಥಾಪನೆ

**ರೂ.487 ಕೋಟಿ**
- ಮೈಸೂರು ಯಾರ್ಡ್ ಮೇಲಿನ ಒತ್ತಡವನ್ನು ಕಡಿಮೆಗೊಳಿಸಿ, ದೂರದ ಊರುಗಳಿಗೆ ಪ್ರಯಾಣಿಸುವವರ ಬೇಡಿಕೆಗಳನ್ನು ಈಡೇರಿಸಲಿದೆ.

“ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು.” -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ದೂರದರ್ಶನದ ಸುದ್ದಿವಾಹಿನಿಯಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ವೀಕ್ಷಿಸಿ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಜಲ ಆಯೋಗದ ಷರತ್ತು • ಬಗೆಹರಿಯದ ಕಗ್ಗಂಟು • ಅನುಮತಿಗೆ ಕೇಂದ್ರದ ಮೇಲೆ ಒತ್ತಡ

# ಮಹದಾಯಿ ಯೋಜನೆ ಸ್ವರೂಪ ಬದಲು?

• ಮಂಜುನಾಥ ಹೆಬ್ಬಾರ್

**ನವದೆಹಲಿ:** ಮುಂದಿನ ವಿಧಾನಸಭಾ ಚುನಾವಣೆಯ ದಿನಾಂಕ ಘೋಷಣೆಯಾಗುವ ಮುನ್ನವೇ ಮಹದಾಯಿ (ಕಳಸಾ– ಬಂಡೂರಿ) ಯೋಜನೆಗೆ ಚಾಲನೆ ನೀಡಲು ಉದ್ದೇಶಿಸಿರುವ ಕರ್ನಾಟಕ ಸರ್ಕಾರ, ಯೋಜನೆಯ ಸ್ವರೂಪ ಬದಲಿಸಿ ಅನುಷ್ಠಾನಗೊಳಿಸಲು ಮುಂದಾಗಿದೆ.

ಈ ಯೋಜನೆಯು ಅವಳಿ ನಗರಗಳಾದ ಹುಬ್ಬಳ್ಳಿ-ಧಾರವಾಡ, ಗದಗ, ಸುತ್ತಮುತ್ತಲಿನ ಪಟ್ಟಣಗಳು ಹಾಗೂ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಗುರಿ ಹೊಂದಿದೆ.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಮಹದಾಯಿ ಯೋಜನೆ ಅನುಷ್ಠಾನಗೊಳಿಸುತ್ತೇವೆ ಎಂದು ಕಮಲ ಪಾಳಯದ ನಾಯಕರು ವಿಧಾನಸಭೆ ಚುನಾವಣೆಯ ಪ್ರಚಾರದ ವೇಳೆ ವಾಗ್ದಾನ ನೀಡಿದ್ದರು. ಆದರೆ ಅಧಿಕಾರಕ್ಕೆ ಬಂದು ಮೂರು ವರ್ಷಗಳು ಕಳೆದರೂ, ಯೋಜನೆಯಲ್ಲಿ ಯಾವುದೇ ಪ್ರಗತಿಯಾಗಿಲ್ಲ. ಯೋಜನೆ ಅನುಷ್ಠಾನವಾಗದಿದ್ದರೆ ಮುಂದಿನ ಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆ ಆಗಬಹುದು ಎಂಬ ಆತಂಕ ಬಿಜೆಪಿ ನಾಯಕರನ್ನು ಕಾಡುತ್ತಿದೆ.

ಯೋಜನೆಗೆ ಬಾಕಿ ಇರುವ ಅನುಮತಿಗಳನ್ನು ನೀಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರ ಮೇಲೆ ಒತ್ತಡ ಹೇರಿದ್ದಾರೆ.

**ಜಲ ಆಯೋಗದ ವಾದವೇನು:** ಮಹದಾಯಿ ನದಿ ನೀರು ವಿವಾದ ನ್ಯಾಯಾಧಿಕರಣವು 2018ರ ಆಗಸ್ಟ್ 14ರಂದು ಕಳಸಾ – ಬಂಡೂರಿ ಯೋಜನೆಗೆ ನೀರಿನ ಹಂಚಿಕೆ ಮಾಡಿದೆ. ಬಳಿಕ ಕರ್ನಾಟಕ ಸರ್ಕಾರವು ಯೋಜನೆಯ ಪೂರ್ವ-ಕಾರ್ಯಸಾಧ್ಯತಾ ವರದಿಗಳನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಿತ್ತು. ಇದನ್ನು ಪರಿಶೀಲಿಸಿದ ಆಯೋಗವು, ‘ನ್ಯಾಯಮೂರ್ತಿ ಬಚಾವತ್ ಆಯೋಗದ ವರದಿಯ ಪ್ರಕಾರ, ಈ ಯೋಜನೆಗೆ ಕೃಷ್ಣಾ ನದಿ ತೀರದ ಇತರ ರಾಜ್ಯಗಳ ಅನುಮತಿ ಕೂಡ ಅಗತ್ಯ’ ಎಂದು ಸ್ಪಷ್ಟಪಡಿಸಿದೆ.

‘ಇತರ ಯಾವುದೇ ನದಿಗಳ ತಿರುವಿನಿಂದ ಕೃಷ್ಣಾ ನದಿಯ ನೀರಿನ ಪ್ರಮಾಣ ಏರಿಕೆಯಾದರೆ, ಯಾವುದೇ ರಾಜ್ಯಗಳು ಯಾವುದೇ ಪ್ರಾಧಿಕಾರ ಅಥವಾ ನ್ಯಾಯಾಧಿಕರಣದ ಎದುರು ಅದರ ಹಕ್ಕು ಕೇಳುವುದರಿಂದ ತಡೆಯುವಂತಿಲ್ಲ. ಅದನ್ನು ಪ್ರಶ್ನಿಸುವುದರಿಂದ ಕೂಡ ಯಾವುದೇ ರಾಜ್ಯವನ್ನು ತಡೆಯುವಂತಿಲ್ಲ’ ಎಂದು ಬಚಾವತ್ ಆಯೋಗ ಸ್ಪಷ್ಟಪಡಿಸಿದೆ. ಈ ಕಾರಣ ಮುಂದಿಟ್ಟುಕೊಂಡು ಕೇಂದ್ರ ಜಲ ಆಯೋಗವು ಪೂರ್ವ ಕಾರ್ಯಸಾಧ್ಯತಾ ವರದಿಗೆ ಇನ್ನೂ ಒಪ್ಪಿಗೆ ನೀಡಿಲ್ಲ.

‘ಒಂದು ವೇಳೆ ಇಂತಹ ಪರಿಸ್ಥಿತಿ ಎದುರಾದರೆ ಕರ್ನಾಟಕ ಸರ್ಕಾರ ಅದನ್ನು ಪರಿಣಾಮಕಾರಿಯಾಗಿ ನಿಭಾಯಿಸಲಿದೆ. ಬಚಾವತ್ ಅಯೋಗದ ಷರತ್ತಿನ ಪ್ರಕಾರ, ಮಹದಾಯಿ ಯೋಜನೆಗೆ ನದಿ-ತೀರದ ಇತರ ರಾಜ್ಯಗಳ ಅನುಮತಿ ಪಡೆಯುವುದು ಕಡ್ಡಾಯವಲ್ಲ. ಈ ಅಂಶವನ್ನು ಪರಿಗಣಿಸಿ ಜಲ ಆಯೋಗವು ವರದಿಗೆ ಒಪ್ಪಿಗೆ ನೀಡಬೇಕು’’ ಎಂದು ಕರ್ನಾಟಕ ಸರ್ಕಾರವು ಒತ್ತಾಯಿಸಿದೆ.

ಈ ಯೋಜನೆಗೆ 499 ಹೆಕ್ಟೇರ್ ಅರಣ್ಯ ಭೂಮಿ ಸ್ವಾಧೀನಪಡಿಸಿಕೊಳ್ಳಬೇಕಿದೆ. ಇದು ಕುಡಿಯುವ ನೀರಿನ ಯೋಜನೆ ಆಗಿರುವುದರಿಂದ ‘ಪರಿಸರ ಪರಿಣಾಮ ಅಧ್ಯಯನ ಅಧಿಸೂಚನೆ–2006’ರ ವ್ಯಾಪ್ತಿಗೆ ಬರುವುದಿಲ್ಲ. ಹೀಗಾಗಿ, ಯೋಜನೆ ಅನುಷ್ಠಾನಕ್ಕೆ ತಕರಾರು ಇಲ್ಲ ಎಂದು ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯ 2019ರಲ್ಲೇ ಸ್ಪಷ್ಟಪಡಿಸಿದೆ. ಭಾರಿ ಪ್ರಮಾಣದ ಅರಣ್ಯ ಭೂಮಿ ಸ್ವಾಧೀನಪಡಿಸಿಕೊಳ್ಳುವ ವೇಳೆ ಪರಿಸರ ಹೋರಾಟಗಾರರಿಂದ ತಕರಾರು ಎದುರಾಗುವ ಸಾಧ್ಯತೆ ಇದೆ. ಹೀಗಾಗಿ, 49 ಹೆಕ್ಟೇರ್‌ನಷ್ಟೇ ಅರಣ್ಯ ಭೂಮಿ ಸ್ವಾಧೀನಪಡಿಸಿಕೊಳ್ಳಲು ಯೋಜಿಸಲಾಗಿದೆ. ಇದರಿಂದಾಗಿ, ಯೋಜನಾ ವೆಚ್ಚವು ₹700 ಕೋಟಿಯಷ್ಟು ಕಡಿಮೆ ಆಗಲಿದೆ. ಕೆಲವು ಕಡೆಗಳಲ್ಲಷ್ಟೇ ಕಾಲುವೆ ನಿರ್ಮಿಸಿ ಉಳಿದ ಕಡೆ ಪೈಪ್‌ಲೈನ್ ಮೂಲಕ ನೀರು ಹಾಯಿಸುವ ಬಗ್ಗೆಯೂ ಚರ್ಚಿಸಲಾಗಿದೆ ಎಂದು ಅಧಿಕೃತ ಮೂಲಗಳು ಹೇಳಿವೆ.

‘ಯೋಜನೆಗೆ ಗೋವಾದಿಂದ ತಕರಾರು ಎದುರಾಗುವುದು ಸಹಜ. ಅಲ್ಲಿಯೂ ಬಿಜೆಪಿ ಸರ್ಕಾರ ಇದೆ. ಗೋವಾ ಸರ್ಕಾರದ ಜತೆಗೆ ಮಾತುಕತೆ ನಡೆಸಿ ಸೌಹಾರ್ದಯುತವಾಗಿ ವಿವಾದ ಬಗೆಹರಿಸುವ ವಿಶ್ವಾಸ ಇದೆ. ಶೀಘ್ರದಲ್ಲೇ ಯೋಜನೆಗೆ ಚಾಲನೆ ಸಿಗಲಿದೆ’ ಎಂದು ಮೂಲಗಳು ಹೇಳಿವೆ.

### ಯೋಜನೆಗೆ ಇರುವ ಅಡ್ಡಿ ಏನು?

- ಯೋಜನೆಗೆ ಗೋವಾ ಸರ್ಕಾರ ತಗಾದೆ ಎತ್ತಿದೆ. ಮಾತುಕತೆಯ ಮೂಲಕ ಗೋವಾ ಸರ್ಕಾರದ ಮನವೊಲಿಸಬೇಕಿದೆ.
- ಜಲ ಆಯೋಗವು ಪೂರ್ವ ಕಾರ್ಯ ಸಾಧ್ಯತಾ ವರದಿಗೆ ಒಪ್ಪಿಗೆ ನೀಡಬೇಕು.
- ಭೀಮಗಡ ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿ ಸಹ ಯೋಜನೆ ಹಾದುಹೋಗಲಿದೆ. ಹೀಗಾಗಿ, ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಒಪ್ಪಿಗೆ ಪಡೆಯಬೇಕಿದೆ.

### ಅಂಕಿ-ಅಂಶಗಳು

**₹840.92 ಕೋಟಿ** 2012ರಲ್ಲಿ ಯೋಜನಾ ವೆಚ್ಚ

**₹500 ಕೋಟಿ** ಬಜೆಟ್‌ನಲ್ಲಿ ಮೀಸಲಿಟ್ಟ ಮೊತ್ತ

**3.90 ಟಿಎಂಸಿ ಅಡಿ** ಯೋಜನೆಯಲ್ಲಿ ಕುಡಿಯುವ ನೀರಿಗಾಗಿ ಮೀಸಲಿಟ್ಟಿರುವುದು

**499.13 ಹೆಕ್ಟೇರ್** ಯೋಜನೆಗೆ ಬಳಕೆಯಾಗುವ ಅರಣ್ಯ ಪ್ರದೇಶ

**₹1,677 ಕೋಟಿ** ರಾಜ್ಯ ಸರ್ಕಾರ 2021-22ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದ ಮೊತ್ತ

## ‘ಅಗ್ನಿಪಥ’: ದಾಂದಲೆ ಅರ್ಥಹೀನ

**ಮೈಸೂರು:** ‘ಅಗ್ನಿಪಥ’ ಬಹಳ ಒಳ್ಳೆಯ ಯೋಜನೆ. ಇದನ್ನು ಪ್ರಕಟಿಸುತ್ತಿದಂತೆಯೇ ಯುವಜನರು ಪ್ರಧಾನಿ ಮೋದಿ ಅವರಿಗೆ ಎದ್ದುನಿಂತು ಗೌರವ ಸೂಚಿಸಬೇಕಿತ್ತು. ಅದನ್ನು ಬಿಟ್ಟು ಅರ್ಥವಿಲ್ಲದೆ ದಾಂದಲೆ ಮಾಡುತ್ತಿದ್ದಾರೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಭಾನುವಾರ ಆಕ್ರೋಶ ವ್ಯಕ್ತಪಡಿಸಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ದೇಶ ಕಾಯು ವುದಕ್ಕೆ ಹೋಗುವವರು ಸಾರ್ವಜನಿಕ ಆಸ್ತಿ–ಪಾಸ್ತಿಗೆ ಬೆಂಕಿ ಹಚ್ಚುತ್ತಾರೆಯೇ? ದಾಂದಲೆಗೆ ಕಾಂಗ್ರೆಸ್ ಪಕ್ಷ ನೇರವಾಗಿಯೇ ಬೆಂಬಲ ಕೊಡುತ್ತಿದೆ. ಅಗ್ನಿಪಥ ಯೋಜನೆಯಡಿ ಆಯ್ಕೆಯಾಗಿ ಕಾರ್ಯನಿರ್ವಹಿಸಿ ವಾಪಸಾದವರಿಗೆ ಅಗ್ನಿಶಾಮಕ ದಳ, ಗೃಹ ರಕ್ಷಕ ದಳ, ಇನ್ನಿತರ ಭದ್ರತಾ ಏಜೆನ್ಸಿಗಳಲ್ಲಿ ನೇಮಕ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ’ ಎಂದರು.

## ಸಿಡಿಲು ಬಡಿದು ಸಾವು

**ಕಮಲನಗರ (ಬೀದರ್ ಜಿಲ್ಲೆ):** ತಾಲ್ಲೂಕಿನ ಮುಧೋಳ (ಬಿ) ಗ್ರಾಮದಲ್ಲಿ ಶನಿವಾರ ತಡರಾತ್ರಿ ಮಳೆ, ಗಾಳಿ ಮತ್ತು ಸಿಡಿಲು ಬಡಿದು ಗ್ರಾಮದ ಬಾಬು ನಾಗೇಶ (60) ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿದ್ದಾರೆ.

ಮೈದುನ ಧನರಾಜ ನಾಗೇಶ ಮತ್ತು ಸಹೋದರ ಸಂಬಂಧಿಕರಾದ ಕಾಶಿನಾಥ ಕಲ್ಲಪ್ಪ ಗಾಯಗೊಂಡರು.

# ಬಂಜರು ಭೂ ಪ್ರದೇಶ ಪುನಶ್ಚೇತನಕ್ಕೆ ಕ್ರಮ

ಅರಣ್ಯ ಪ್ರದೇಶ ಶೇ 30ಕ್ಕೆ ಏರಿಸಲು ಕ್ರಮ • ‘ಮಣ್ಣು ಉಳಿಸಿ’ ಅಭಿಯಾನದಲ್ಲಿ ಸಿ.ಎಂ ಹೇಳಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ರಾಜ್ಯದಲ್ಲಿ 2.50 ಲಕ್ಷ ಹೆಕ್ಟೇರ್ ಭೂ ಪ್ರದೇಶವು ಬಂಜರಾಗಿದ್ದು, ಆ ಭೂಮಿಯ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಲಾಗುವುದು‘ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ಅರಮನೆ ಮೈದಾನದಲ್ಲಿ ಭಾನುವಾರ ಈಶಾ ಫೌಂಡೇಶನ್ ಆಯೋಜಿಸಿದ್ದ ‘ಮಣ್ಣು ಉಳಿಸಿ’ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ರಾಜ್ಯದಲ್ಲಿ ಅರಣ್ಯ ಪ್ರದೇಶದ ವ್ಯಾಪ್ತಿ ಶೇ 33 ರಿಂದ ಶೇ 24ಕ್ಕೆ ಕುಗ್ಗಿದೆ. ಐದು ವರ್ಷಗಳಲ್ಲಿ ಅರಣ್ಯ ಪ್ರದೇಶವನ್ನು ಶೇ 30ಕ್ಕೆ ಹೆಚ್ಚಿಸಲು ಪ್ರಯತ್ನಿಸಲಾಗುವುದು. ರೈತರೊಂದಿಗೆ ನಗರವಾಸಿಗಳು ಕೈಜೋಡಿಸಬೇಕಾಗಿದೆ. ತಿಂಗಳಲ್ಲಿ ನಾಲ್ಕು ದಿನ ನಗರ ಜನರು ರೈತರೊಂದಿಗೆ ಕಾಲಕಳೆಯಬೇಕು’ ಎಂದು ಸಲಹೆ ನೀಡಿದರು.

‘ಬಿಎಸ್‌ವೈ ನೇತೃತ್ವದ ಸರ್ಕಾರದ ಅವಧಿಯಲ್ಲಿ ಮಣ್ಣಿನಲ್ಲಿ ಪೋಷಕಾಂಶ ವೃದ್ಧಿಗೆ ಭೂಚೇತನ ಯೋಜನೆ ತಂದಿತ್ತು. ನಮ್ಮ ಸರ್ಕಾರ ಮಣ್ಣು ಉಳಿಸಲು ಮೊದಲ ಆದ್ಯತೆ ನೀಡಲಿದೆ. ಪರಿಸರ ರಕ್ಷಣೆಗೆ ಬಜೆಟ್‌ನಲ್ಲಿ ₹ 100 ಅನುದಾನ ಮೀಸಲಿಡಲಾಗಿದೆ’ ಎಂದರು.

ಶಾಸಕ ಬಿ.ಎಸ್.ಯಡಿಯೂರಪ್ಪ ಅವರು, ‘ಶುದ್ಧ ಗಾಳಿ, ನೀರು ಸಿಗುತ್ತಿಲ್ಲ. ಕುಡಿಯಲು ಲಭ್ಯವಿರುವ ನೀರಿನ ಪ್ರಮಾಣ ಕಡಿಮೆಯಾಗಿದೆ. ಮನುಷ್ಯ ಕ್ಷಣಿಕ ಆಸೆಗೆ ಪ್ರಕೃತಿ ಹಾಳು ಮಾಡುತ್ತಿದ್ದಾನೆ. ಪ್ರಾಕೃತಿಕ ಸಂಪತ್ತು ಉಳಿಸಲು ಒಗ್ಗಟ್ಟಾಗಿ ಯತ್ನಿಸಬೇಕಿದೆ’ ಎಂದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, ‘ಮಣ್ಣು ಉಳಿಸುವ ವಿಚಾರದಲ್ಲಿ ಸದ್ಗುರು ಅವರು ವಿಶ್ವಕ್ಕೇ ರಾಯಭಾರಿ. 100 ದಿನದಲ್ಲಿ, 24 ದೇಶಗಳ 30 ಸಾವಿರ ಕಿ.ಮೀ ಬೈಕ್‌ನಲ್ಲೇ ಸಂಚರಿಸಿ ಈ ಕುರಿತು ಜಾಗೃತಿ ಮೂಡಿಸಿದ್ದಾರೆ. ಇದು, ಸಾಮಾನ್ಯವಾದ ಸಂಗತಿಯಲ್ಲ’ ಎಂದರು.

ಈಶಾ ಫೌಂಡೇಶನ್‌ನ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್ ಅವರು, ‘ಮಣ್ಣಿನ ಮಹತ್ವ ಬಹಳ ದೊಡ್ಡದು. ಮಣ್ಣಿನ ಫಲವತ್ತತೆ ಉಳಿಸಲು ಎಲ್ಲರೂ ಪ್ರಯತ್ನಿಸಬೇಕು. ಮಣ್ಣು ಉಳಿಸಿ ಅಭಿಯಾನಕ್ಕೆ ವಿವಿಧ ದೇಶಗಳ ಬೆಂಬಲ ಸಿಕ್ಕಿದೆ. ಮಣ್ಣಿನ ಫಲವತ್ತತೆ ಉಳಿದರೆ ರೈತರು ಉಳಿಯಲಿದ್ದಾರೆ. ನಮ್ಮ ಸುಂದರ ಕನಸುಗಳು ಉಳಿಯಲಿವೆ’ ಎಂದು ನುಡಿದರು.

‘ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಮಣ್ಣು ಉಳಿಸಲು ಸ್ವಯಂ ಸೇವಕರು ಸಾಕಷ್ಟು ಶ್ರಮ ಹಾಕಿದ್ದಾರೆ. ನಾವು ಇದುವರೆಗೂ 320 ಕೋಟಿ ಜನರನ್ನು ತಲುಪಿದ್ದೇವೆ’ ಎಂದರು. ಇದೇ ವೇಳೆ ವಿವಿಧ ಯೋಜನೆಗೆ ಒಡಂಬಡಿಕೆ ಮಾಡಿಕೊಳ್ಳಲಾಯಿತು.



‘ಮಣ್ಣು ಉಳಿಸಿ ಅಭಿಯಾನ’ ಕಾರ್ಯಕ್ರಮದಲ್ಲಿ (ಎಡದಿಂದ) ಶಾಸಕ ಬಿ.ಎಸ್‌.ಯಡಿಯೂರಪ್ಪ, ಈಶಾ ಫೌಂಡೇಶನ್ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಡಾ.ಕೆ.ಸುಧಾಕರ್, ಬಿ.ಸಿ. ನಾಗೇಶ್ ‘ಮಣ್ಣು ಉಳಿಸಿ’ ಭಿತ್ತಿಪತ್ರವನ್ನು ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

### ಪಠ್ಯಕ್ಕೆ ಮಣ್ಣಿನ ಸಂರಕ್ಷಣೆ ವಿಷಯ: ನಾಗೇಶ್

‘ಮುಂದಿನ ಶೈಕ್ಷಣಿಕ ವರ್ಷದಿಂದ ‘ಮಣ್ಣಿನ ಸಂರಕ್ಷಣೆ’ ಕುರಿತು ಪಠ್ಯಪುಸ್ತಕದಲ್ಲಿ ಪಾಠ ಸೇರ್ಪಡೆ ಮಾಡಲಾಗುವುದು’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದರು.

‘ಕೀಟನಾಶಕ, ರಾಸಾಯನಿಕಗಳ ಅತಿಯಾದ ಬಳಕೆಯಿಂದ ದಿನದಿಂದ ದಿನಕ್ಕೆ ಮಣ್ಣಿನ ಗುಣಮಟ್ಟ ಹಾಳಾಗುತ್ತಿದೆ. ಪಂಚಭೂತಗಳು ದೇವರೆಂದು ನಂಬಿರುವ ದೇಶ ನಮ್ಮದು. ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಸಾವಯವ ಕೃಷಿಗೆ ಉತ್ತೇಜನ ನೀಡಿದ್ದರು’ ಎಂದು ತಿಳಿಸಿದರು.

## ಪಠ್ಯ ಬದಲಾವಣೆಗೆ ಮುಕ್ತ ಮನಸ್ಸು: ಸಿ.ಎಂ

**ಬೆಂಗಳೂರು:** ಪರಿಷ್ಕೃತ ಪಠ್ಯಕ್ಕೆ ಆಕ್ಷೇಪಗಳಿದ್ದರೆ ಅದನ್ನು ನಿವಾರಿಸಲು ಸರ್ಕಾರ ಸಿದ್ಧವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಲ್ಲಿ ಭಾನುವಾರ ಹೇಳಿದರು.

ಸರ್ಕಾರವು ಪ್ರತಿಷ್ಠೆಗೆ ಬಿದ್ದಿಲ್ಲ. ಪಠ್ಯದಲ್ಲಿ ಏನೆಲ್ಲಾ ಬದಲಾವಣೆ ಮಾಡಬೇಕೋ ಅದನ್ನು ಮುಕ್ತ ಮನಸ್ಸಿನಿಂದ ಮಾಡಲಾಗುವುದು ಎಂದು ನಗರದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ದೇಶ, ರಾಜ್ಯ ಕಟ್ಟಲು ಶ್ರಮಿಸಿರುವ ಹಿರಿಯರು, ರಾಜಮಹಾರಾಜರು, ಸಾಹಿತಿಗಳು, ಕಲಾಕಾರರು, ಜ್ಞಾನಪೀಠ ಪುರಸ್ಕೃತರ ಬಗ್ಗೆ ಅಪಾರ ಗೌರವ ಇದೆ. ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹಾಗೂ ಸ್ವಾಮೀಜಿಗಳ ಮನವಿ ಪರಿಶೀಲಿಸಿ ಬದಲಾವಣೆಯನ್ನು ಮುಕ್ತ ಮನಸ್ಸಿನಿಂದ ಮಾಡುತ್ತೇವೆ’ ಎಂದರು.

‘ಮಹನೀಯರ ಗೌರವ ಉಳಿಸಲು, ಮುಂದಿನ ಪೀಳಿಗೆಗೆ ಅವರ ಇತಿಹಾಸ ತಿಳಿಸಲು ಯಾವುದೇ ಕ್ರಮಕ್ಕೂ ಸಿದ್ಧ’ ಎಂದು ಬೊಮ್ಮಾಯಿ ಹೇಳಿದರು.

### ‘ಕತ್ತರಿ ಹಾಕಿದ್ದೇ ಸಿದ್ದರಾಮಯ್ಯ ಸರ್ಕಾರ’

**ತುಮಕೂರು:** ಕುವೆಂಪು ಪಠ್ಯ ವಿಚಾರ ಕುರಿತು ದೊಡ್ಡ ಮಟ್ಟದಲ್ಲಿ ಸದ್ದು ಮಾಡುತ್ತಿದ್ದಾರೆ. ಕುವೆಂಪು ಅವರ ವಿಚಾರವುಳ್ಳ ಪಠ್ಯಕ್ಕೆ ಕತ್ತರಿ ಹಾಕಿದ್ದೇ ಸಿದ್ದರಾಮಯ್ಯ ಸರ್ಕಾರ’ ಎಂದು ಸಚಿವ ಆರ್.ಅಶೋಕ ಹೇಳಿದರು.

‘ಆಗ ಇದರ ವಿರುದ್ಧ ಯಾರೂ ಧ್ವನಿ ಎತ್ತಲಿಲ್ಲ. ಈಗ ಬಿ.ಸಿ.ನಾಗೇಶ್ ಸಚಿವರಾದ ನಂತರ ಕುವೆಂಪು ಪಠ್ಯಕ್ಕೆ ಮತ್ತಷ್ಟು ಸೇರಿಸಲಾಗಿದೆ. ಇದರ ಬಗ್ಗೆ ಯಾರೂ ಮಾತಾಡಲಿಲ್ಲ’ ಎಂದು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಟಿಪ್ಪು ಎಂದೂ ಕನ್ನಡವನ್ನು ಒಪ್ಪಿಕೊಂಡಿಲ್ಲ. ಜನರನ್ನು ಮತಾಂತರ ಮಾಡಿದ್ದ ಅವರನ್ನು ವೈಭವೀಕರಿಸಲಾಗಿತ್ತು. ಈಗ ಪಠ್ಯದಲ್ಲಿ ಕೆಂಪೇಗೌಡರ ಬಗ್ಗೆ ಸೇರಿಸಲಾಗಿದೆ ಎಂದು ಹೇಳಿದರು.

### ಸ್ವಾಮೀಜಿಗಳು ಧ್ವನಿ ಎತ್ತಲಿ: ಡಿಕೆಶಿ

**ಬೆಂಗಳೂರು:** ‘ಪಠ್ಯಪುಸ್ತಕ ಪರಿಷ್ಕರಣೆಯಂಥ ವಿಚಾರಗಳಿಗೆ ಸಂಬಂಧಿಸಿ ಸ್ವಾಮೀಜಿಗಳು ಧ್ವನಿ ಎತ್ತಬೇಕು. ಸಮಾಜಕ್ಕೆ ಆಗುವ ಅನ್ಯಾಯವನ್ನು ಪ್ರಶ್ನಿಸಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

‘ಪರಿಷ್ಕೃತ ಪಠ್ಯಕ್ಕೆ ವಿರೋಧವೆಂದರೆ ಅದು ನಮ್ಮ ರಾಜಕಾರಣಕ್ಕೆ ಬೆಂಬಲವಲ್ಲ. ಒಂದು ಜಾತಿ, ಸಮುದಾಯದ ವಿಚಾರವೂ ಅಲ್ಲ. ಒಟ್ಟು ಸಮಾಜದ ವಿಚಾರ’ ಎಂದು ಅವರು ಪ್ರತಿಪಾದಿಸಿದರು.

## ಚಕ್ರತೀರ್ಥ ‘ಪೋಸ್ಟ್’ ಬೆನ್ನತ್ತಿದ ಸಿಐಡಿ

• ರಾಜೇಶ್ ರೈ ಚಟ್ಲ

**ಬೆಂಗಳೂರು:** ನಾಡಗೀತೆಯ ಸಾಲುಗಳನ್ನು ತಿರುಚಿ, ರಾಷ್ಟ್ರಕವಿ ಕುವೆಂಪು ಅವರನ್ನು ಅವಮಾನಿಸಿ ಸಾಮಾಜಿಕ ಜಾಲತಾಣದಲ್ಲಿ ‘ಪೋಸ್ಟ್’ ಹಂಚಿದ ಆರೋಪ ಎದುರಿಸುತ್ತಿರುವ ಪಠ್ಯ ಪುಸ್ತಕ ಪರಿಷ್ಕರಣ ಸಮಿತಿಯ ಅಧ್ಯಕ್ಷ ರೋಹಿತ್ ಚಕ್ರತೀರ್ಥ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂಬ ಒತ್ತಡ ಹೆಚ್ಚುತ್ತಿರುವ ಮಧ್ಯೆಯೇ, ಈ ‘ಪೋಸ್ಟ್’ನ ಮೂಲ ಪತ್ತೆ ಹಚ್ಚಲು ರಾಜ್ಯ ಸರ್ಕಾರ ಮುಂದಾಗಿದೆ.

ರೋಹಿತ್ ಚಕ್ರತೀರ್ಥ ಸಮಿತಿ ಪರಿಷ್ಕರಿಸಿದ ಪಠ್ಯಗಳಿಗೆ ಸಾಹಿತಿಗಳು, ನಾನಾ ಸಂಘಟನೆಗಳು, ಮಠಾಧೀಶರು, ರಾಜಕಾರಣಿಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಪರಿಷ್ಕೃತ ಪಠ್ಯ ವಾಪಸು ಪಡೆಯಬೇಕೆಂದು ಧ್ವನಿ ಎತ್ತಿದ್ದಾರೆ. ಆ ಬೆನ್ನಲ್ಲೇ ಐದು ವರ್ಷಗಳ ಹಿಂದಿನ ಈ ಫೇಸ್‌ಬುಕ್ ‘ಪೋಸ್ಟ್’ ಮುನ್ನೆಲೆಗೆ ಬಂದಿತ್ತು.

‘ನಾಡಗೀತೆಯಲ್ಲಿನ ಸಾಲುಗಳನ್ನು ಅಶ್ಲೀಲ, ಅನುಚಿತ ಹಾಗೂ ಅಸಂಬದ್ಧ ಅರ್ಥ ಬರುವಂತೆ ತಿರುಚಿ, ರಾಷ್ಟ್ರಕವಿ ಕುವೆಂಪು ಮತ್ತು ಕನ್ನಡಿಗರ ಭಾವನೆಗಳಿಗೆ ಹಾಗೂ ನಾಡಗೀತೆಯ ಪಾವಿತ್ರ್ಯತೆಗೆ ಧಕ್ಕೆ ತರುವ ಹಾಗೂ ತಿರುಚಲಾಗಿದೆ. ಆ ಪೋಸ್ಟ್ ಅನ್ನು ಆ ದಿನದಂದು ರೋಹಿತ್ ಚಕ್ರತೀರ್ಥ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಹಂಚಿದ್ದಾರೆ. ಈ ಕೃತ್ಯ ಎಸಗಿದ ಆರೋಪಿಗಳ ವಿರುದ್ಧ ದೂರು ದಾಖಲಿಸಿ, ಕಾನೂನು ರೀತ್ಯಾ ಕ್ರಮ ಜರುಗಿಸಬೇಕು’ ಎಂದು ಸಿಐಡಿ ಸೈಬರ್ ಕ್ರೈಮ್ ಪೊಲೀಸ್ ಠಾಣೆಗೆ ಕರ್ನಾಟಕ ಪಠ್ಯ-ಪುಸ್ತಕಗಳ ಸಂಘದ ವ್ಯವಸ್ಥಾಪಕ ನಿರ್ದೇಶಕ ಎಂ.ಪಿ. ಮಾದೇಗೌಡ ದೂರು ನೀಡಿದ್ದಾರೆ.

ಈ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಗೃಹ ಸಚಿವ ಆರಗ ಜ್ಞಾನೇಂದ್ರ, ‘ನಾಡಗೀತೆಯ ಸಾಲುಗಳನ್ನು ತಿರುಚಿದ ಮತ್ತು ಕುವೆಂಪು ಅವರನ್ನು ಗೇಲಿ ಮಾಡಿದ ಕೃತ್ಯದಲ್ಲಿ ರೋಹಿತ್ ಚಕ್ರತೀರ್ಥ ಅವರ ತಪ್ಪಿಲ್ಲ. ಅವರು, ಆ ಪೋಸ್ಟ್ ಹಂಚಿಕೊಂಡಿದ್ದಾರೆ ಅಷ್ಟೆ. ರೋಹಿತ್ ಚಕ್ರತೀರ್ಥ ವಿರುದ್ಧ 2017ರಲ್ಲೇ ತನಿಖೆ ನಡೆಸಿದ್ದ ಪೊಲೀಸರು ‘ಬಿ’ ರಿಪೋರ್ಟ್ ಸಲ್ಲಿಸಿದ್ದರು. ಹೀಗಾಗಿ, ಈ ಕೃತ್ಯ ಎಸಗಿದ ಮೂಲ ವ್ಯಕ್ತಿಯನ್ನು ಪತ್ತೆಗೆ ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ್ದೇವೆ’ ಎಂದರು.

‘ಈ ಪ್ರಕರಣಕ್ಕೆ ಸಂಬಂಧಿಸಿ ಫೇಸ್‌ಬುಕ್‌ನಿಂದ ಮಾಹಿತಿ ಪಡೆಯಲಾಗುತ್ತಿದೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ.

### ಎಫ್‌ಐಆರ್‌ನಲ್ಲಿ ಏನಿದೆ?

‘ಕನ್ನಡ ನಾಡಿನ ನಾಡಗೀತೆಯಲ್ಲಿನ ಸಾಲುಗಳನ್ನು ತಿರುಚಿ ಅಶ್ಲೀಲ, ಅನುಚಿತ ಹಾಗೂ ಅಸಂಬದ್ಧ ಅರ್ಥ ಬರುವಂತೆ ಮಾಡಲಾಗಿದೆ. ಈ ಮೂಲಕ ರಾಷ್ಟ್ರಕವಿ ಕುವೆಂಪು ಅವರಿಗೆ, ಅವರ ಅನುಯಾಯಿಗಳಿಗೆ, ಸಮಸ್ತ ಕನ್ನಡಿಗರ ಭಾವನೆಗಳಿಗೆ ಹಾಗೂ ನಾಡಗೀತೆಯ ಪಾವಿತ್ರ್ಯತೆಗೆ ಧಕ್ಕೆ ತರುವ ಹಾಗೂ ತಿರುಚಿದ ಸಾಹಿತ್ಯದ ಬಗ್ಗೆ, ಸಾಮಾಜಿಕ ಜಾಲತಾಣದಲ್ಲಿ ಪ್ರಕಟವಾದ ಹಿನ್ನೆಲೆಯಲ್ಲಿ ವಿವಿಧ ರೀತಿಯ ವಿಮರ್ಶೆಗಳು ನಿರಂತರ ಕಂಡುಬರುತ್ತಿದೆ. ಇದರಿಂದ ಸಾಮರಸ್ಯ ಕದಡುವ ಸಾಧ್ಯತೆಗಳಿವೆ. ಈ ಕೃತ್ಯ 2017 ರ ಮಾರ್ಚ್ 16 ರ ಹಿಂದೆ ಘಟಿಸಿದ್ದು ಕಂಡುಬಂದಿದೆ. ಅದೇ ದಿನ ರೋಹಿತ್ ಚಕ್ರತೀರ್ಥ ತಮ್ಮ ಫೇಸ್‌ಬುಕ್ ಖಾತೆ https://www.facebook.com/rohithmath ಯಲ್ಲಿ ಹಂಚಿಕೊಂಡು, ಅದರ ಕೆಳಗೆ ‘ವಾಟ್ಸ್‌ಆ್ಯಪ್ ಬಂದಿದೆ, ಮೂಲ ಕವಿಗಳು ಇದ್ದರೆ ಮುಂದೆ ಬನ್ನಿ ಬುರ್ಜ್ ಖಲೀಫಾ ಕೊಡುತ್ತೇನೆ’ ಎಂಬುದಾಗಿ ಉಲ್ಲೇಖಿಸಿರುವಂತೆ ಸಾಮಾಜಿಕ ಜಾಲತಾಣದಲ್ಲಿ, ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವುದನ್ನು ಗಮನಿಸಲಾಗಿದೆ. ಆದ್ದರಿಂದ ಕ್ರಮ ತೆಗೆದುಕೊಳ್ಳಬೇಕು’ ಎಂದು ದೂರಿನಲ್ಲಿ ಮಾದೇಗೌಡ ಉಲ್ಲೇಖಿಸಿದ್ದಾರೆ.

## ವ್ಯಕ್ತಿ ಹತ್ಯೆ: ಗೌಂಡವಾಡ ಉದ್ವಿಗ್ನ

ದೇವಸ್ಥಾನ ಜಮೀನು ವಿವಾದ • 20 ವಾಹನಗಳಿಗೆ ಬೆಂಕಿ

ಪ್ರಜಾವಾಣಿ ವಾರ್ತೆ

**ಗೌಂಡವಾಡ (ಬೆಳಗಾವಿ ತಾ.):** ದೇವಸ್ಥಾನದ ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಗೌಂಡವಾಡ ಗ್ರಾಮದಲ್ಲಿ ಶನಿವಾರ ರಾತ್ರಿ ವ್ಯಕ್ತಿಯೊಬ್ಬರನ್ನು ಕೊಲೆ ಮಾಡಲಾಗಿದೆ. ಇದಕ್ಕೆ ಪ್ರತೀಕಾರವಾಗಿ ಇನ್ನೊಂದು ಗುಂಪು 20 ವಾಹನಗಳು ಹಾಗೂ ಮೂರು ಬಣವೆಗಳಿಗೆ ಬೆಂಕಿ ಹಚ್ಚಿದೆ. ಇಡೀ ಗ್ರಾಮದಲ್ಲಿ ತ್ವೇಷಮಯ ವಾತಾವರಣ ನಿರ್ಮಾಣವಾಗಿದೆ.

ಗ್ರಾಮದ ನಿವಾಸಿ ಸತೀಶ ಪಾಟೀಲ (37) ಕೊಲೆಯಾದವರು. ಈ ಸಂಬಂಧ ಏಳು ಆರೋಪಿಗಳು ಹಾಗೂ ಗಲಭೆಗೆ ಸಂಬಂಧಿಸಿ 19 ಜನರನ್ನು ಪೊಲೀಸರು ಭಾನುವಾರ ವಶಕ್ಕೆ ಪಡೆದಿದ್ದಾರೆ.

ಗೌಂಡವಾಡದ ಕಾಲಭೈರವನಾಥ, ಲಕ್ಷ್ಮಿ, ಬಸವಣ್ಣ ದೇಗುಲಗಳಿಗೆ ಸೇರಿದೆ ಎನ್ನಲಾದ 27 ಎಕರೆ ಜಮೀನು ಇದೆ. ಇದನ್ನು ಕೆಲವರಿಗೆ ಉಳುಮೆಗೆ ನೀಡಿದ್ದು, ಹಲವು ವರ್ಷಗಳ ಹಿಂದೆಯೇ ಅವರು ತಮ್ಮ ಹೆಸರಿಗೆ ಜಮೀನು ಮಾಡಿಕೊಂಡಿದ್ದರು. ಒತ್ತುವರಿ ತೆರವು ಕೋರಿ ಸತೀಶ (ಕೊಲೆಯಾದವರು) ದಾವೆ ಹೂಡಿದ್ದರು. ಇದೇ 21ರಂದು-(ಮಂಗಳವಾರ) ಕೋರ್ಟ್‌ನಲ್ಲಿ ಇದರ ವಿಚಾರಣೆ ನಿಗದಿಯಾಗಿದೆ.

ಶನಿವಾರ ರಾತ್ರಿ ದೇವಸ್ಥಾನದ ಪಕ್ಕದಲ್ಲಿ ಕಾರ್ ಪಾರ್ಕಿಂಗ್ ಕುರಿತು ಸತೀಶ ಹಾಗೂ ವಿರೋಧಿ ಗುಂಪಿನ ಕೆಲವರ ಮಧ್ಯೆ ಜಗಳ ನಡೆಯಿತು. ತಡರಾತ್ರಿ ವಿಕೋಪಕ್ಕೆ ತಿರುಗಿ 200ಕ್ಕೂ ಹೆಚ್ಚು ಮಂದಿ ಸ್ಥಳದಲ್ಲಿ ಸೇರಿದ್ದರು. ಅವರಲ್ಲಿ ಕೆಲವರು ಮಾರಕಾಸ್ತ್ರಗಳಿಂದ ಸತೀಶ ಅವರನ್ನು ಕೊಲೆ ಮಾಡಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಇದರಿಂದ ರೋಸಿಹೋದ ಇನ್ನೊಂದು ಗುಂಪಿನವರು ವಾಹನಗಳಿಗೆ ಬೆಂಕಿ ಹಚ್ಚಿದರು. ಮನೆಗಳ ಮೇಲೆ ಕಲ್ಲು ತೂರಿದರು. ಬಣವೆಗಳಿಗೂ ಬೆಂಕಿ ಇಟ್ಟಿದ್ದಾರೆ. ಬಹುತೇಕ ಬೀದಿಗಳಲ್ಲಿ ವಾಹನಗಳು ಹೊತ್ತಿ ಉರಿದವು.

**ಬಂದೋಬಸ್ತ್:** ತಡರಾತ್ರಿಯೇ ಗ್ರಾಮಕ್ಕೆ ಧಾವಿಸಿದ 200ಕ್ಕೂ ಹೆಚ್ಚು ಪೊಲೀಸರು ಜನರನ್ನು ಚದುರಿಸಿದ್ದರು. 40 ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು. ಭಾನುವಾರ ನಸುಕಿನ 2ಗಂಟೆವರೆಗೆ ಕಾರ್ಯಾಚರಣೆ ನಡೆಯಿತು ಕೆಎಲ್‌ಇಎಸ್ ಆಸ್ಪತ್ರೆಯಿಂದ ಸತೀಶ ಅವರ ಶವವನ್ನು ಸಂಜೆ ಗ್ರಾಮಕ್ಕೆ ತಂದು ಅಂತ್ಯಕ್ರಿಯೆ ನೆರವೇರಿಸಲಾಯಿತು.

ಗ್ರಾಮದಲ್ಲಿ ಪರಿಸ್ಥಿತಿ ತಿಳಿಗೊಳಿಸಲಾಗಿದೆ. ಘಟನೆಯಲ್ಲಿ ಯಾರ ಪಾತ್ರ ಏನು ಎಂದು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಕಮಿಷನರ್ ಡಾ.ಎಂ.ಬಿ. ಬೋರಲಿಂಗಯ್ಯ ಅವರು ತಿಳಿಸಿದರು.


ಗೌಂಡವಾಡ ಗ್ರಾಮದಲ್ಲಿ ಗಲಭೆಯಲ್ಲಿ ಸುಟ್ಟಿರುವ ವಾಹನಗಳು – ಪ್ರಜಾವಾಣಿ ಚಿತ್ರ

> ಗೌಂಡವಾಡ ಘಟನೆ ಚಿಕ್ಕ ಗಲಾಟೆ. ದೇವಸ್ಥಾನದ ಜಾಗದ ವಿಚಾರದಲ್ಲಿ ಜಗಳ ನಡೆದಿದೆ. ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ
> **ಆರಗ ಜ್ಞಾನೇಂದ್ರ** ಗೃಹ ಸಚಿವ

ವಿಡಿಯೊ ನೋಡಲು ಈ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ರವಿಂದು ಟೊಯೊಟಾ ವಿರುದ್ಧದ ಪ್ರಕರಣ: ಬಿ – ರಿಪೋರ್ಟ್ ಸಲ್ಲಿಕೆ • ನೋಟಿಸ್‌ಗೆ ಉತ್ತರಿಸದ ಎನ್‌ಪಿಸಿಐ

# ಫಾಸ್ಟ್ಯಾಗ್: ಟೋಲ್ ದಾಟದಿದ್ದರೂ ಜೇಬಿಗೆ ಕತ್ತರಿ

• ಸಂತೋಷ ಜಿಗಳಿಕೊಪ್ಪ

**ಬೆಂಗಳೂರು:** ಟೋಲ್ ಗೇಟ್‌ಗಳಲ್ಲಿ ಸುಗಮ ಸಂಚಾರಕ್ಕಾಗಿ ಜಾರಿಗೊಳಿಸಿರುವ ಫಾಸ್ಟ್ಯಾಗ್ ವ್ಯವಸ್ಥೆಯಲ್ಲಿ ಲೋಪಗಳು ಕಂಡುಬರುತ್ತಿದ್ದು, ಟೋಲ್ ದಾಟದಿದ್ದರೂ ಹಣ ಕಡಿತವಾಗುತ್ತಿರುವ ಬಗ್ಗೆ ದೂರುಗಳು ದಾಖಲಾಗುತ್ತಿವೆ. ಇಂಥ ಪ್ರಕರಣಗಳ ಬಗ್ಗೆ ಮಾಹಿತಿ ಕೋರಿ ಪೊಲೀಸರು, ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್‌ಪಿಸಿಐ)ಗೆ ನೋಟಿಸ್ ನೀಡಿದ್ದಾರೆ.

ಶೋರೂಮ್ ಹಾಗೂ ಮನೆ ಮುಂದೆ ನಿಲ್ಲಿಸುವ ವಾಹನಗಳು, ಟೋಲ್ ದಾಟಿರುವ ಬಗ್ಗೆ ಮಾಲೀಕರ ಮೊಬೈಲ್‌ಗೆ ಸಂದೇಶಗಳು ಬರುತ್ತಿವೆ. ಇಂಥ ಪ್ರಕರಣವೊಂದರ ಸಂಬಂಧ ವಿಧಾನಪರಿಷತ್ ಸದಸ್ಯ ಪಿ.ಆರ್. ರಮೇಶ್ ಪತ್ನಿ ಸರಸ್ವತಿ, ಮಹಾಲಕ್ಷ್ಮಿ ಲೇಔಟ್ ಠಾಣೆಗೆ ದೂರು ನೀಡಿದ್ದರು. ಇದರ ತನಿಖೆ ವೇಳೆ, ಫಾಸ್ಟ್ಯಾಗ್ ವ್ಯವಸ್ಥೆ ಲೋಪಗಳು ಪತ್ತೆಯಾಗಿವೆ.

‘ಲೋಪದ ಬಗ್ಗೆ ಮಾಹಿತಿ ಕೋರಿ ಫಾಸ್ಟ್ಯಾಗ್ ನಿರ್ವಹಣಾ ಸಂಸ್ಥೆಯಾದ ಎನ್‌ಪಿಸಿಐಗೆ ಪತ್ರ ಬರೆದರೂ ಉತ್ತರ ನೀಡುತ್ತಿಲ್ಲ. ನೋಟಿಸ್ ನೀಡಿದರೂ ಪ್ರತಿಕ್ರಿಯೆ ಸಿಕ್ಕಿಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

**ರವಿಂದು ಟೊಯೊಟಾ ವಿರುದ್ಧದ ಪ್ರಕರಣ:** ‘ಸರಸ್ವತಿ ಅವರು ತಮ್ಮ ಇನ್ನೋವಾ ಕ್ರಿಸ್ಟಾ ಕಾರನ್ನು ದುರಸ್ತಿಗೆಂದು ರಾಜಾಜಿನಗರ ಇಸ್ಕಾನ್ ಬಳಿಯ ರವಿಂದು ಟೊಯೊಟಾ ಶೋರೂಮ್‌ಗೆ 2021ರ ಸೆಪ್ಟೆಂಬರ್ 7ರಂದು ನೀಡಿದ್ದರು. ಸೆಪ್ಟೆಂಬರ್ 11 ರಂದು ರಾತ್ರಿ 12.43 ಗಂಟೆಗೆ ಎನ್. ಎಚ್ – 48ರ ಜೀವನಹಳ್ಳಿ ಹಾಗೂ ಚಿತ್ರದುರ್ಗ ಜಿಲ್ಲೆಯ ಗುಯಿಲಾಳು ಟೋಲ್‌ಗೇಟ್ ಮೂಲಕ ಕಾರು ಹಾದು ಹೋದ ಬಗ್ಗೆ ದೂರುದಾರರ ಮೊಬೈಲ್‌ಗೆ ಸಂದೇಶ ಬಂದಿತ್ತು' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ರವಿಂದು ಟೊಯೊಟಾ ಸಿಬ್ಬಂದಿ, 200 ಕಿ.ಮೀ.ಗಿಂತ ಹೆಚ್ಚು ಓಡಿಸಿದ್ದಾರೆಂದು ಆರೋಪಿಸಿ ಠಾಣೆಗೆ ದೂರು ನೀಡಿದ್ದರು. ಕಾರು ದುರ್ಬಳಕೆ ಮತ್ತು ನಂಬಿಕೆ ದ್ರೋಹ ಆರೋಪದಡಿ ಎಫ್‌ಐಆರ್ ದಾಖಲಿಸಿ, ತನಿಖೆ ಆರಂಭಿಸಲಾಗಿತ್ತು’ ಎಂದೂ ಹೇಳಿದರು.

**ಬಿ-ರಿಪೋರ್ಟ್ ಸಲ್ಲಿಕೆ:** ‘ಜೀವನಹಳ್ಳಿ ಹಾಗೂ ಗುಯಿಲಾಳು ಟೋಲ್‌ಗೇಟ್‌ನ ಸಿಸಿಟಿವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿದಾಗ, ಕಾರು ಟೋಲ್‌ಗೇಟ್ ಬಳಿಹೋಗಿಲ್ಲಎಂದುಖಾತ್ರಿಯಾಯಿತು. ರವಿಂದು ಟೊಯೊಟಾ ಅವರದ್ದು ತಪ್ಪಿಲ್ಲವೆಂದು ಹೇಳಿ ನ್ಯಾಯಾಲಯಕ್ಕೆ ಬಿ-ರಿಪೋರ್ಟ್ ಸಲ್ಲಿಸಲಾಗಿದೆ’ ಎಂದು ಅಧಿಕಾರಿ ತಿಳಿಸಿದರು.

‘ತಪ್ಪು ಸಂದೇಶ ಬಂದಿದ್ದು ಹೇಗೆ ಎಂಬುದನ್ನು ತಿಳಿಯಲು ಹೊರಟಾಗಲೇ, ಫಾಸ್ಟ್ಯಾಗ್ ಲೋಪದ ಬಗ್ಗೆ ಗೊತ್ತಾಗಿದೆ. ಈ ಸಂಗತಿಯನ್ನು ನ್ಯಾಯಾಲಯದ ಗಮನಕ್ಕೂ ತರಲಾಗುವುದು. ಲೋಪಗಳಿಗೆ ತಮಗೂ ಸಂಬಂಧವಿಲ್ಲವೆಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಹೇಳಿದ್ದರು. ಹೀಗಾಗಿ, ಎನ್‌ಪಿಸಿಐಗೆ ಇ-ಮೇಲ್ ಮೂಲಕ ನೋಟಿಸ್ ನೀಡಲಾಗಿದೆ. ಉತ್ತರ ಬರದಿದ್ದರೆ, ಮುಂದಿನ ಕ್ರಮ ಜರುಗಿಸಲಾಗುವುದು’ ಎಂದೂ ಹೇಳಿದರು.

### ಜಂಟಿ ಕಮಿಷನರ್‌ಗೂ ದೂರು

ವಾಹನಗಳು ಟೋಲ್‌ಗೇಟ್ ದಾಟದಿದ್ದರೂ ಹಣ ಕಡಿತವಾಗುತ್ತಿರುವ ಬಗ್ಗೆ ಬೆಂಗಳೂರು ಸಂಚಾರ ವಿಭಾಗದ ಜಂಟಿ ಕಮಿಷನರ್ ಕಚೇರಿಗೂ ದೂರುಗಳು ಸಲ್ಲಿಕೆಯಾಗುತ್ತಿವೆ.

‘ಮನೆಯ ಶೆಡ್‌ನಲ್ಲಿ ಕಾರಿದೆ. ತುಮಕೂರು ರಸ್ತೆಯ ಟೋಲ್‌ಗೇಟ್‌ನಲ್ಲಿ ಕಾರು ಹಾದು ಹೋದ ಬಗ್ಗೆ ಸಂದೇಶ ಬಂದಿದೆ. ಈ ಬಗ್ಗೆ, ಟೋಲ್‌ಗೇಟ್ ಸಿಬ್ಬಂದಿ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿಗಳನ್ನು ಪ್ರಶ್ನಿಸಿದರೂ ಉತ್ತರ ಸಿಗುತ್ತಿಲ್ಲ’ ಎಂದು ಕಾರು ಮಾಲೀಕರೊಬ್ಬರು ಹೇಳಿದರು.

## ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

**ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್** ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **‘Deccan Herald-Prajavani Relief Trust’** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡುವವರು, ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು **dept.fnc@printersmysore.co.in**ಗೆ ಮೇಲ್ ಮುಖಾಂತರ ಕಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

‘Deccan Herald-Prajavani Relief Trust’
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

**ಸೂಚನೆ**
ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

**ವಿಳಾಸ**
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

### ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2022ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

### ವಿದ್ಯಾರ್ಥಿಗಳ ಅನಿಸಿಕೆ

**‘ಕಾಲೇಜು ಶುಲ್ಕ ಕಟ್ಟಿದೆ’**



ಬಾಗಲಕೋಟೆಯ ಬಸವೇಶ್ವರ ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ ಪ್ರವೇಶ ಪಡೆದಿರುವೆ. ಇದಕ್ಕೆ ‘ಪ್ರಜಾವಾಣಿ‘ ನೀಡಿದ ನೆರವು ಅನುಕೂಲವಾಯಿತು. ನನ್ನ ಓದು ಸರಾಗವಾಗಿ ಮುಂದುವರಿಸಲು ಅನುಕೂಲ ಕಲ್ಪಿಸಿದ ಪತ್ರಿಕೆಗೆ ಧನ್ಯವಾದ.

**ಸುಮಿತ್ರಾ,** ಕೊಪ್ಪಳ

**‘ಪಠ್ಯಪುಸ್ತಕ ಖರೀದಿಸಿದೆ’**



ಹೊಸಪೇಟೆಯ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದೇನೆ. ‘ಪ್ರಜಾವಾಣಿ’ ನೀಡಿದ ನೆರವಿನಿಂದ ಕೋರ್ಸ್‌ಗೆ ಸಂಬಂಧಿಸಿದ ಪಠ್ಯಪುಸ್ತಕಗಳನ್ನು ಖರೀದಿಸಿದ್ದೇನೆ. ಉಳಿದ ಹಣವನ್ನು ಪ್ರವೇಶ ಶುಲ್ಕ ಕಟ್ಟಲು ಬಳಸಿದ್ದೇನೆ.

**ಸೈಫುಲ್ಲಾ,** ಗಂಗಾವತಿ

ಒಳನೋಟ — ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ https://bit.ly/30m4kH3

## ‘ಸ್ಕಾಲರ್‌ಶಿಪ್‌ಗೆ ಕನ್ನ’: ಇಬ್ಬರು ಅಧೀಕ್ಷಕರು ಸೇರಿ ಐವರ ಅಮಾನತು

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

**ಹಾವೇರಿ:** ಇಲ್ಲಿಯ ದೇವಗಿರಿ ಸಮೀಪದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ‘ವಿದ್ಯಾಸಿರಿ’ ಯೋಜನೆಯ ವಿದ್ಯಾರ್ಥಿವೇತನ ಮತ್ತು ಶೈಕ್ಷಣಿಕ ಸಾಲ ವಿತರಣೆಯಲ್ಲಿ ನಡೆದಿರುವ ಅವ್ಯವಹಾರದ ಆರೋಪಕ್ಕೆ ಸಂಬಂಧಿಸಿದಂತೆ ಐವರು ನೌಕರರನ್ನು ಅಮಾನತು ಮಾಡಲಾಗಿದೆ.

ಕಚೇರಿ ಅಧೀಕ್ಷಕರಾದ ಎಚ್. ವಾಸುದೇವ, ಗುರಪ್ಪ ಸುಂಕದವರ, ಪ್ರಥಮ ದರ್ಜೆ ಸಹಾಯಕರಾದ ಜಯಮ್ಮ ಕಾಚೇರ, ದ್ವಿತೀಯ ದರ್ಜೆ ಸಹಾಯಕರಾದ ರವೀಂದ್ರಕುಮಾರ್ ಮತ್ತು ಅನಿಲ್‌ಕುಮಾರ್ ಕಟಗಾರ ಅಮಾನತುಗೊಂಡವರು.

‘ಇಲಾಖೆ ವಿಚಾರಣೆ ಕಾಯ್ದಿರಿಸಿ ಐವರು ನೌಕರರನ್ನು ಅಮಾನತು ಮಾಡಲಾಗಿದ್ದು, ಅಮಾನತು ಅವಧಿಯಲ್ಲಿ ಆರೋಪಿತರು ಪೂರ್ವಾನುಮತಿಯಿಲ್ಲದೇ ಕೇಂದ್ರಸ್ಥಾನ ಬಿಡುವಂತಿಲ್ಲ’ ಎಂದು ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಸೂಚಿಸಿದ್ದಾರೆ.

ಅಮಾನತುಗೊಂಡವರು ಕಾಲೇಜಿನ ವಿದ್ಯಾರ್ಥಿ ವೇತನ ವಿಭಾಗ, ಪ್ರವೇಶ ವಿಭಾಗ ಮತ್ತು ನಗದು ವಿಭಾಗವನ್ನು ನಿರ್ವಹಣೆ ಮಾಡುತ್ತಿದ್ದರು.

‘ವಿದ್ಯಾಸಿರಿ ಸ್ಕಾಲರ್‌ಶಿಪ್‌ಗೆ ಕನ್ನ!’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ವಿಶೇಷ ವರದಿ ನಂತರ ತಾಂತ್ರಿಕ ಶಿಕ್ಷಣ ಇಲಾಖೆಯ ಮೂವರು ಸದಸ್ಯರ ತನಿಖಾ ತಂಡ ಕಾಲೇಜಿಗೆ ಭೇಟಿ ನೀಡಿ, ಕ್ರಮ ಕೈಗೊಂಡಿದೆ.

## ಕಾಂಗ್ರೆಸ್ ಕುಮ್ಮಕ್ಕು: ಸಿ.ಎಂ ಆರೋಪ

**ಬೆಂಗಳೂರು:** ‘ಅಗ್ನಿಪಥ ನೇಮಕಾತಿ ಯೋಜನೆಯ ವಿಚಾರದಲ್ಲಿ ಪ್ರತಿಭಟನೆಗಳು ನಡೆಯುತ್ತಿದ್ದು ಕಾಂಗ್ರೆಸ್ ಮುಖಂಡರು ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ದೂರಿದರು.

‘ಪ್ರತಿಭಟನೆ ನೆಪದಲ್ಲಿ ರೈಲುಗಳಿಗೆ ಬೆಂಕಿ ಹಚ್ಚಲಾಗುತ್ತಿದೆ. ಇದು ಕ್ಷಮಿಸಲಾರದ ಅಪರಾಧ. ಪ್ರಯಾಣಿಕರಿಗೆ ತೊಂದರೆಯಾಗಿದೆ. ಜವಾಬ್ದಾರಿ ಇರುವವರು ಯಾರೂ ಈ ರೀತಿಯ ಕೃತ್ಯ ಎಸಗುವುದಿಲ್ಲ. ದೇಶದ ಜನರು ಸ್ವಲ್ಪ ದಿನಗಳಲ್ಲಿಯೇ ಅರ್ಥ ಮಾಡಿಕೊಳ್ಳುತ್ತಾರೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಸೋಮವಾರ, ಜೂನ್ 20, 2022 | ₹ 6.00

www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

/prajavani.net @prajavani /prajavani http://bit.ly/Prajavani



**ಮೀನು ಮಾರಾಟ**

ಚೆನ್ನೈನ ಕಾಸಿಮೇಡ್‌ನಲ್ಲಿ ಭಾನುವಾರ ಮೀನು ಮಾರಾಟ ಮಾಡುತ್ತಿದ್ದ ಮಹಿಳೆಯೊಬ್ಬರು ಭಾರಿ ಗಾತ್ರದ ಮೀನನ್ನು ಪ್ರದರ್ಶಿಸಿದರು

ಸೋಮವಾರ, ಜೂನ್ 20, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 170 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಶಿಕ್ಷಣ**
ಕೇಂದ್ರ ಸರ್ಕಾರ ಶಿಕ್ಷಣದಲ್ಲಿ ಯೋಗ ಕಲಿಕೆ ಕಡ್ಡಾಯಗೊಳಿಸಿದೆ. ರಾಜ್ಯದ ಕೆಲವು ಶಿಕ್ಷಣ ಸಂಸ್ಥೆಗಳು ಯೋಗ ಕಲಿಕೆಯ ವಿವಿಧ ಕೋರ್ಸ್‌ಗಳನ್ನು ಆರಂಭಿಸಿವೆ



ಆಳ-ಅಗಲ
ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ಅತ್ಯಾಚಾರವೂ ಆಯುಧ

ಇಂದಿನಿಂದ ಚಿನ್ನದ ಬಾಂಡ್‌ನ ಮೊದಲ ಕಂತು 5

2 ಸಾವಿರ ದಾಟಿದ ಡೆಂಗಿ ಪ್ರಕರಣ 4

ಚೆಸ್ ಒಲಿಂಪಿಯಾಡ್‌ನಲ್ಲಿ ಇದೇ ಮೊದಲ ಬಾರಿ ಆಯೋಜನೆ

75 ನಗರಗಳಲ್ಲಿ ಜ್ಯೋತಿಯಾತ್ರೆ ಸಂಚಾರ 10



## ಟಿ20 ಪಂದ್ಯ ರದ್ದು ಸರಣಿ ಸಮಬಲ

ಬೆಂಗಳೂರು: ಭಾರತ– ದಕ್ಷಿಣ ಆಫ್ರಿಕಾ ತಂಡಗಳ ನಡುವೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಬೇಕಿದ್ದ ಕೊನೆಯ ಟಿ20 ಕ್ರಿಕೆಟ್ ಪಂದ್ಯ ಮಳೆಯಿಂದ ರದ್ದುಗೊಂಡಿತು. ಐದು ಪಂದ್ಯಗಳ ಸರಣಿ 2–2 ರಲ್ಲಿ ಸಮಬಲದಲ್ಲಿ ಕೊನೆಗೊಂಡಿದೆ. 8

**ಚಿನಕುರಳಿ**
ಪ್ರಕಾಶ್ ಶೆಟ್ಟಿ




# ‘ಅಗ್ನಿಪಥ’ ರದ್ದತಿ ಪ್ರಶ್ನೆಯೇ ಇಲ್ಲ

## ದೇಶದ ವಿವಿಧೆಡೆ ಪ್ರತಿಭಟನೆಯ ನಡುವೆಯೇ ನೇಮಕಾತಿ ನಡೆಸಲು ಸಿದ್ಧತೆ

ನವದೆಹಲಿ (ಪಿಟಿಐ): ಅಲ್ಪಾವಧಿ ಕರ್ತವ್ಯದ ಸೇನಾ ನೇಮಕಾತಿ ಯೋಜನೆ ‘ಅಗ್ನಿಪಥ’ ವಿರೋಧಿಸಿ ದೇಶದ ವಿವಿಧ ಭಾಗಗಳಲ್ಲಿ ತೀವ್ರತರವಾದ ಪ್ರತಿಭಟನೆ ನಡೆಯುತ್ತಿದ್ದರೂ ಯೋಜನೆಯನ್ನು ಕೈಬಿಡುವ ಪ್ರಶ್ನೆಯೇ ಇಲ್ಲ ಎಂದು ಸೇನೆಯು ಭಾನುವಾರ ಸ್ಪಷ್ಟಪಡಿಸಿದೆ.

ನೇಮಕಾತಿ ಪ್ರಕ್ರಿಯೆಯ ಕರಡು ವೇಳಾಪಟ್ಟಿಯನ್ನು ರಕ್ಷಣಾ ಪಡೆಗಳ ಮೂರೂ ವಿಭಾಗಗಳು ಪ್ರಕಟಿಸಿವೆ. ಸಶಸ್ತ್ರ ಪಡೆಗಳ ಯೋಧರ ಸರಾಸರಿ ವಯಸ್ಸನ್ನು ಕಡಿತ ಮಾಡುವುದೇ ಅಗ್ನಿಪಥ ಯೋಜನೆಯ ಉದ್ದೇಶ ಎಂದು ಸೇನೆಯು ತಿಳಿಸಿದೆ.

ಅಗ್ನಿಪಥ ಯೋಜನೆಗೆ ಸಂಬಂಧಿಸಿ ಸರ್ಕಾರ ಕೈಗೊಂಡ ಪೂರಕ ಕ್ರಮಗಳಿಗೆ ದೇಶದ ವಿವಿಧೆಡೆ ನಡೆದ ಪ್ರತಿಭಟನೆಗಳು ಕಾರಣವಲ್ಲ. ಈ ದಿಸೆಯಲ್ಲಿ ಸರ್ಕಾರವು ಮೊದಲೇ ಚಿಂತನೆ ಆರಂಭಿಸಿತ್ತು ಎಂದು ಸೇನಾ ವ್ಯವಹಾರಗಳ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಲೆಫ್ಟಿನೆಂಟ್ ಜನರಲ್ ಅನಿಲ್ ಪುರಿ ಹೇಳಿದ್ದಾರೆ.

ಯೋಜನೆಯನ್ನು ವಿರೋಧಿಸಿ ನಡೆದ ಹಿಂಸಾಚಾರದಲ್ಲಿ ಭಾಗಿಯಾದವರಿಗೆ ಸೇನೆಯ ಯಾವುದೇ ವಿಭಾಗಕ್ಕೆ ಸೇರಲು ಅವಕಾಶ ಇಲ್ಲ. ನೇಮಕಾತಿಗೆ ಮುನ್ನ ಪ್ರತಿಯೊಬ್ಬರ ಬಗ್ಗೆಯೂ ಪೊಲೀಸ್ ಪರಿಶೀಲನೆ ನಡೆಯಲಿದೆ. ಯಾವುದೇ ರೀತಿಯ ಅಶಿಸ್ತಿಗೆ ಸಶಸ್ತ್ರ ಪಡೆಯಲ್ಲಿ ಅವಕಾಶ ಇಲ್ಲ. ಅಗ್ನಿಪಥ ಯೋಜನೆಯ ಭಾಗವಾಗಲು ಬಯಸುವವರು ತಾವು ದೊಂಬಿಯಲ್ಲಿ ಭಾಗವಹಿಸಿಲ್ಲ ಎಂಬ ಪ್ರಮಾಣಪತ್ರ ಸಲ್ಲಿಸಬೇಕು ಎಂದು ಪುರಿ ಅವರು ವಿವರಿಸಿದ್ದಾರೆ.

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4



ಅಗ್ನಿಪಥ ಯೋಜನೆ ವಿರೋಧಿಸಿ ನವದೆಹಲಿಯ ಜಂತರ್ ಮಂತರ್‌ನಲ್ಲಿ ಭಾನುವಾರ ಕಾಂಗ್ರೆಸ್ ಹಮ್ಮಿಕೊಂಡಿದ್ದ ಸತ್ಯಾಗ್ರಹದಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ಮುಖಂಡರಾದ ದೀಪೇಂದರ್ ಹೂಡ, ಸಚಿನ್ ಪೈಲಟ್, ಕೆ.ಸಿ. ವೇಣುಗೋಪಾಲ್ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

### ತಾತ್ಕಾಲಿಕ ವೇಳಾಪಟ್ಟಿ

**ನೌಕಾಪಡೆ**
- ನೇಮಕಾತಿ ಮಾರ್ಗಸೂಚಿಯು ಇದೇ 25ರಂದು ಪ್ರಕಟ
- ಅಗ್ನಿಪಥ ಯೋಜನೆ ಅಡಿಯಲ್ಲಿ ನೇಮಕವಾಗುವ ಮೊದಲ ತಂಡವು ನವೆಂಬರ್ 21ರಂದು ಐಎನ್‌ಎಸ್ ಚಿಲ್ಕಾದಲ್ಲಿ ತರಬೇತಿಗೆ ಸೇರ್ಪಡೆ
- ಅಗ್ನಿವೀರರಾಗಿ (ಅಗ್ನಿಪಥ ಯೋಜನೆಯಲ್ಲಿ ನೇಮಕಗೊಂಡವರನ್ನು ಅಗ್ನಿವೀರ ಎಂದು ಕರೆಯಲಾಗುತ್ತದೆ) ಮಹಿಳೆ ಮತ್ತು ಪುರುಷರ ನೇಮಕಕ್ಕೆ ಅವಕಾಶ

**ವಾಯುಪಡೆ**
- ಮೊದಲ ಹಂತದ ಆನ್‌ಲೈನ್ ಪರೀಕ್ಷೆಯ ನೋಂದಣಿ ಪ್ರಕ್ರಿಯೆ ಇದೇ 24ಕ್ಕೆ ಆರಂಭ
- ನೇಮಕಾತಿ ಪ್ರಕ್ರಿಯೆಗೆ ಜುಲೈ 24ರಂದು ಚಾಲನೆ
- ಡಿಸೆಂಬರ್ 30ಕ್ಕೆ ಮೊದಲ ತಂಡದ ತರಬೇತಿ ಆರಂಭ

**ಭೂಸೇನೆ**
- ಕರಡು ಅಧಿಸೂಚನೆ ಸೋಮವಾರ ಪ್ರಕಟ
- ವಿವಿಧ ವಿಭಾಗಗಳ ಅಧಿಸೂಚನೆಗಳು ಜುಲೈ 1ರಿಂದ ಪ್ರಕಟ ಆಗಲಿವೆ
- ಸೇನೆಯ ಮೂರೂ ವಿಭಾಗಗಳ ನೇಮಕಾತಿ ರ‍್ಯಾಲಿಗಳು ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ ನಡೆಯಲಿವೆ, ದೇಶದಾದ್ಯಂತ 83 ರ‍್ಯಾಲಿಗಳು, ಸುಮಾರು 40 ಸಾವಿರ ಅಗ್ನಿವೀರರ ನೇಮಕ
- ಮೊದಲ ಹಂತದಲ್ಲಿ 25 ಸಾವಿರ ಸಿಬ್ಬಂದಿ ನೇಮಕ, ಡಿಸೆಂಬರ್ ಮೊದಲ, ಎರಡನೇ ವಾರದಲ್ಲಿ ತರಬೇತಿ
- ಎರಡನೇ ತಂಡಕ್ಕೆ ಫೆಬ್ರುವರಿ 23ರಿಂದ ತರಬೇತಿ

ಬಿಡುವಿಲ್ಲದ ಕಾರ್ಯಕ್ರಮ; ಬಿಗಿ ಬಂದೋಬಸ್ತ್

# ಇಂದಿನಿಂದ ಮೋದಿ ರಾಜ್ಯ ಪ್ರವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಸೋಮವಾರದಿಂದ (ಜೂನ್ 20ರಿಂದ) ಎರಡು ದಿನ ರಾಜ್ಯ ಪ್ರವಾಸ ಕೈಗೊಳ್ಳಲಿದ್ದು, ಈ ವೇಳೆ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಬೆಂಗಳೂರಿನಲ್ಲಿ ವಿವಿಧ ರಸ್ತೆಗಳ ಮೂಲಸೌಕರ್ಯ ಮತ್ತು ರೈಲ್ವೆ ಯೋಜನೆಗಳ ಶಂಕುಸ್ಥಾಪನೆ ನೆರವೇರಿಸಲಿದ್ದು, ಈ ಎಲ್ಲ ಯೋಜನೆಗಳ ಒಟ್ಟು ಮೌಲ್ಯ ₹27,000 ಕೋಟಿ ಎಂದು ಪ್ರಧಾನಮಂತ್ರಿ ಕಚೇರಿ ತಿಳಿಸಿದೆ.

ಸೋಮವಾರ ಬೆಳಿಗ್ಗೆ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿರುವ ಮೆದುಳು ಸಂಶೋಧನಾ ಕೇಂದ್ರ ಮತ್ತು ಸೂಪರ್ ಕಂಪ್ಯೂಟಿಂಗ್ ಸೌಲಭ್ಯವನ್ನು ಉದ್ಘಾಟಿಸುವರು.



ಡಾ.ಬಿ. ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ (ಬೇಸ್) ನೂತನ ಕ್ಯಾಂಪಸ್ ಅನ್ನು ಮೋದಿ ಉದ್ಘಾಟಿಸಲಿದ್ದಾರೆ. ಅಲ್ಲದೆ, ಉನ್ನತೀಕರಿಸಿದ 150 ಐಟಿಐಗಳನ್ನು ಲೋಕಾರ್ಪಣೆ ಮಾಡಲಿದ್ದಾರೆ.

ಬಳಿಕ ಕೆಂಗೇರಿ ಬಳಿಯ ಕೊಮ್ಮಘಟ್ಟದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಬೈಯ್ಯಪ್ಪನಹಳ್ಳಿಯ ಹವಾನಿಯಂತ್ರಿತ ರೈಲು ನಿಲ್ದಾಣ ಉದ್ಘಾಟಿಸುವರು. ಅಲ್ಲಿ ಅವರು, ಬೆಂಗಳೂರು ಸಬ್‌ಅರ್ಬನ್ ರೈಲು ಯೋಜನೆ ಮತ್ತು ಆರು ರಾಷ್ಟ್ರೀಯ ಹೆದ್ದಾರಿ ಯೋಜನೆ ಮತ್ತು ಲಾಜಿಸ್ಟಿಕ್ ಪಾರ್ಕ್‌ಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಸಂಜೆ ಮೈಸೂರಿಗೆ ತೆರಳಲಿರುವ ಪ್ರಧಾನಿ, ಅಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ ಸಮಾರಂಭದಲ್ಲಿ ನಾಗನಹಳ್ಳಿ ಮತ್ತು ಮೈಸೂರಿನಲ್ಲಿ ನಿರ್ಮಾಣಗೊಳ್ಳಲಿರುವ ಹೊಸ ಕೋಚಿಂಗ್ ಸಂಕೀರ್ಣಗಳಿಗೆ ಶಿಲಾನ್ಯಾಸ ಮಾಡಲಿದ್ದಾರೆ.

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 3B

## 2 ವಿಷಯ: ಇಂದು ಕಾಂಗ್ರೆಸ್ ಪ್ರತಿಭಟನೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಅಗ್ನಿಪಥ ಯೋಜನೆಯನ್ನು ಹಾಗೂ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಗುರಿಯಾಗಿಸಿ ನಡೆಸುತ್ತಿರುವ ‘ಹಗೆತನದ ರಾಜಕಾರಣ’ವನ್ನು ವಿರೋಧಿಸಿ ಲಕ್ಷಾಂತರ ಕಾರ್ಯಕರ್ತರು ಸೋಮವಾರ ದೇಶದಾದ್ಯಂತ ಶಾಂತಿಯುತವಾಗಿ ಪ್ರತಿಭಟನೆ ನಡೆಸಲಿದ್ದಾರೆ ಎಂದು ಕಾಂಗ್ರೆಸ್ ಹೇಳಿದೆ.

## ವಿರೋಧ ಪಕ್ಷಗಳ ಸಭೆ ನಾಳೆ

ನವದೆಹಲಿ: ರಾಷ್ಟ್ರಪತಿ ಚುನಾವಣೆಗೆ ಸ್ಪರ್ಧಿಸಲು ನ್ಯಾಷನಲ್ ಕಾನ್ಫರೆನ್ಸ್ ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ ಅವರು ನಿರಾಕರಿಸಿದ ನಂತರ ಕಾಂಗ್ರೆಸ್, ವಿರೋಧ ಪಕ್ಷಗಳ ಪಾಳಯದಲ್ಲಿ ಗೋಪಾಲಕೃಷ್ಣ ಗಾಂಧಿ ಅವರ ಹೆಸರು ಮುಂಚೂಣಿಗೆ ಬಂದಿದೆ. ಅಭ್ಯರ್ಥಿ ಅಂತಿಮಗೊಳಿಸಲು ವಿರೋಧ ಪಕ್ಷದ ನಾಯಕರು ಜೂನ್ 21ರಂದು ಮಧ್ಯಾಹ್ನ ಸಭೆ ಸೇರಲಿದ್ದಾರೆ. 4

## ವಿಮಾನದಲ್ಲಿ ಬೆಂಕಿ ಪ್ರಯಾಣಿಕರು ಪಾರು

ಪಟ್ನಾ: ಜಯಪ್ರಕಾಶ್ ನಾರಾಯಣ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಭಾನುವಾರ ದೆಹಲಿಗೆ ಹೊರಟಿದ್ದ ಸ್ಪೈಸ್ ಜೆಟ್ ವಿಮಾನ ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಹಕ್ಕಿ ಡಿಕ್ಕಿ ಹೊಡೆದ ಪರಿಣಾಮ ಎಂಜಿನ್‌ಲ್ಲಿ ಬೆಂಕಿ ಕಾಣಿಸಿಕೊಂಡ ಪರಿಣಾಮ ತುರ್ತು ಭೂಸ್ಪರ್ಶ ಮಾಡಿದೆ. ವಿಮಾನದಲ್ಲಿದ್ದ 185 ಪ್ರಯಾಣಿಕರು ಸ್ವಲ್ಪದರಲ್ಲೇ ಅಪಾಯದಿಂದ ಪಾರಾಗಿದ್ದಾರೆ. 5

### ತಟಸ್ಥ ಸಂಸ್ಥೆಯಿಂದ ತನಿಖೆಗೆ ನಗರಾಭಿವೃದ್ಧಿ ಇಲಾಖೆ ಸೂಚನೆ

# ನಿಯಮ ಉಲ್ಲಂಘಿಸಿದ್ದರೂ ಒ.ಸಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಿಯಮಗಳನ್ನು ಉಲ್ಲಂಘಿಸಿ ನಿರ್ಮಿಸಿದ್ದರೂ ಸುಮಾರು 30ರಷ್ಟು ಕಟ್ಟಡಗಳಿಗೆ ಸ್ವಾಧೀನಾನುಭವ ಪತ್ರ (ಒ.ಸಿ.) ನೀಡಿದ ಬಿಬಿಎಂಪಿ ನಗರ ಯೋಜನೆಯ ವಿಭಾಗದ ವಿರುದ್ಧ ದೂರುಗಳು ದಾಖಲಾಗಿವೆ.

ಬಹುತೇಕ ಪ್ರಕರಣಗಳಲ್ಲಿ ಶೇ 40 ರಷ್ಟು ನಿಯಮಗಳನ್ನು ಉಲ್ಲಂಘಿಸಲಾಗಿದೆ. ಕೆಲವು ಪ್ರಕರಣಗಳಲ್ಲಿ ಅಧಿಕಾರಿಗಳು ಉದ್ದೇಶಪೂರ್ವಕವಾಗಿಯೇ ರಸ್ತೆಯ ಅಗಲವನ್ನು ವಿಸ್ತರಿಸುತ್ತಿದ್ದಾರೆ. ಈ ಮೂಲಕ ನಿಯಮ ಉಲ್ಲಂಘಿಸಿದ ಪ್ರಮಾಣವನ್ನು ಕಡಿಮೆ ಮಾಡುವ ಉದ್ದೇಶ ಹೊಂದಲಾಗಿದೆ ಎಂದು ದೂರಲಾಗಿದೆ.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ನಗರಾಭಿವೃದ್ಧಿ ಇಲಾಖೆಯು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ತಟಸ್ಥ ಸಂಸ್ಥೆಗೆ ಸೂಚನೆ ನೀಡಿದೆ. ಬೆಂಗಳೂರು ಕಲ್ಯಾಣ ಸಮಿತಿ ಅಧ್ಯಕ್ಷ ಎ.ಪಿ. ಪವನ್ ಕುಮಾರ್ ಅವರು ನೀಡಿದ ದೂರಿನ ಅನ್ವಯ ಈ ಸೂಚನೆ ನೀಡಲಾಗಿದೆ. ಇಬ್ಬರು ಅಧಿಕಾರಿಗಳ ನಡುವಣ ವೈರತ್ವದಿಂದ ಈ ವಿಷಯ ಬಹಿರಂಗವಾಗಿದೆ ಎಂದು ಮೂಲಗಳು ತಿಳಿಸಿವೆ.

ಪ್ರಮುಖ ಐದು ಪ್ರಕರಣಗಳ ಬಗ್ಗೆ ನಗರಾಭಿವೃದ್ಧಿ ಇಲಾಖೆ ತನಿಖೆ ನಡೆಸುವಂತೆ ಸೂಚಿಸಿದೆ.

ಎರಡು ಕಟ್ಟಡಗಳ ನಡುವೆ 5 ಮೀಟರ್ ಬದಲಾಗಿ ಕೇವಲ 3.5 ಮೀಟರ್ ಜಾಗ ಬಿಡುವ ಮೂಲಕ ಶೇ32ರಷ್ಟು ನಿಯಮಗಳನ್ನು ಉಲ್ಲಂಘಿಸಿದ ಪ್ರಕರಣ, ಶೇ 35ರಷ್ಟು ನಿಯಮ ಉಲ್ಲಂಘಿಸಿದ ಪ್ರಕರಣ ಮತ್ತು ವಿವಿಧ ಪ್ರದೇಶಗಳಲ್ಲಿನ ರಸ್ತೆ ಅಗಲವನ್ನು ಉಲ್ಲೇಖಿಸಿ ಕಟ್ಟಡ ನಿರ್ಮಾಣ ಯೋಜನೆಗೆ ಮಂಜೂರಾತಿ ನೀಡುವ ಮೂಲಕ ಬಿಲ್ಡರ್‌ಗೆ ಸುಮಾರು ₹50 ಕೋಟಿ ಲಾಭವಾಗುವಂತೆ ಅನುಕೂಲ ಮಾಡಿಕೊಟ್ಟಿರುವುದು ಹಾಗೂ ಶೇ 40ರಷ್ಟು ನಿಯಮ ಉಲ್ಲಂಘಿಸಿದ್ದರೂ ಸ್ವಾಧೀನಾನುಭವ ಪತ್ರ ನೀಡಿರುವುದು ಇದರಲ್ಲಿ ಸೇರಿವೆ.

ಬಿಬಿಎಂಪಿ ಉತ್ತರ ವಲಯದಲ್ಲಿ ಈ ಪ್ರಕರಣಗಳು ನಡೆದಿವೆ. ರಾಜಕಾಲುವೆ ಮತ್ತು ಕೆರೆಯನ್ನು ಒತ್ತುವರಿ ಮಾಡಿ ಕಟ್ಟಡಗಳನ್ನು ನಿರ್ಮಿಸಿರುವ ಪ್ರಕರಣಗಳು ಸಹ ನಡೆದಿವೆ ಎಂದು ಮೂಲಗಳು ತಿಳಿಸಿವೆ.

## ಬಿಬಿಎಂಪಿ ಚುನಾವಣೆಗೆ ಸಿದ್ಧತೆ: ಕಾಂಗ್ರೆಸ್ ನಾಯಕರ ಚರ್ಚೆ

**ಬೆಂಗಳೂರು:** ಮುಂಬರುವ ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದಂತೆ ಪಕ್ಷದ ಮುಖಂಡರ ಜೊತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಗರದ ಹೋಟೆಲೊಂದರಲ್ಲಿ ಭಾನುವಾರ ಸಭೆ ನಡೆಸಿದರು.

ಬಿಬಿಎಂಪಿ ಚುನಾವಣೆ, ಪಕ್ಷ ಸಂಘಟನೆ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಕುರಿತು ಅವರು ಸಮಾಲೋಚನೆ ನಡೆಸಿದರು.

ಸಭೆಯಲ್ಲಿ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ಶಾಸಕರಾದ ದಿನೇಶ್ ಗುಂಡೂರಾವ್, ಎನ್.ಎ. ಹ್ಯಾರಿಸ್, ಸೌಮ್ಯಾ ರೆಡ್ಡಿ, ಸಂಸದ ಡಿ.ಕೆ. ಸುರೇಶ್ ಮತ್ತಿತರರು ಇದ್ದರು.



**ರಂಗ ಪ್ರವೇಶ** ನಗರದಲ್ಲಿ ಎಂ.ಎಸ್. ನಾಟ್ಯಶಾಸ್ತ್ರ ಆಯೋಜಿಸಿದ್ದ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮದಲ್ಲಿ ವಿ. ಅನನ್ಯಾ ಅವರು ಭರತನಾಟ್ಯ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

## ‘ಹೊಸ ವೈಮಾನಿಕ ನೀತಿ ಸಿದ್ಧ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ನಗರದಲ್ಲಿ ನ. 2ರಿಂದ ಮೂರು ದಿನ ನಡೆಯಲಿರುವ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದ ಪೂರ್ವಭಾವಿಯಾಗಿ ‘ವೈಮಾನಿಕ (ಏರೋಸ್ಪೇಸ್) ಮತ್ತು ರಕ್ಷಣಾ ನೀತಿ 2022-27’ ಅನ್ನು ಸಿದ್ಧಪಡಿಸಲಾಗಿದೆ. ಈ ನೀತಿಯ ಮೂಲಕ ಕರ್ನಾಟಕವನ್ನು ಆದ್ಯತೆಯ ಹೂಡಿಕೆಯ ತಾಣವಾಗಿ ರೂಪಿಸುವ ಗುರಿ ಹೊಂದಲಾಗಿದೆ’ ಎಂದು ಕೈಗಾರಿಕೆ ಸಚಿವ ಮುರುಗೇಶ ನಿರಾಣಿ ತಿಳಿಸಿದ್ದಾರೆ.

‘ಏರೋಸ್ಪೇಸ್ ಮತ್ತು ರಕ್ಷಣಾ ತಯಾರಿಕಾ ವಲಯದಲ್ಲಿ ರಕ್ಷಣಾ ಸಚಿವಾಲಯವು 2027 ರ ವೇಳೆಗೆ ಶಸ್ತ್ರಾಸ್ತ್ರದಲ್ಲಿ ಶೇ 70ರಷ್ಟು ಸ್ವಾವಲಂಬನೆಯ ಗುರಿ ಹೊಂದಿದೆ. ಇದು ಬಂಡವಾಳ ಹೂಡಿಕೆದಾರರಿಗೆ ದೊಡ್ಡ ನಿರೀಕ್ಷೆಗಳನ್ನು ಸೃಷ್ಟಿಸುವ ಸಂಭವವಿದೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

‘5 ವರ್ಷಗಳ ಈ ನೀತಿಯ ಅವಧಿಯಲ್ಲಿ ಏರೋಸ್ಪೇಸ್ ಮತ್ತು ರಕ್ಷಣಾ ವಲಯದಲ್ಲಿ ₹ 45 ಸಾವಿರ ಕೋಟಿ ಹೂಡಿಕೆ ಆಕರ್ಷಿಸಲು, 60 ಸಾವಿರಕ್ಕೂ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಗುರಿ ಹೊಂದಲಾಗಿದೆ. ರಾಜ್ಯವನ್ನು ಉತ್ಪಾದನಾ ಕೇಂದ್ರವಾಗಿ ಅಭಿವೃದ್ಧಿಪಡಿಸುವ ಜೊತೆಗೆ ಭಾರತೀಯ ಮಾರುಕಟ್ಟೆ ಮತ್ತು ರಫ್ತು ಎರಡಕ್ಕೂ ಇದು ಹೆಚ್ಚಿನ ಅನುಕೂಲ ಕಲ್ಪಿಸುವುದು ಈ ನೀತಿಯ ಮುಖ್ಯ ಲಕ್ಷಣ’ ಎಂದೂ ನಿರಾಣಿ ತಿಳಿಸಿದ್ದಾರೆ.

‘ಇಡೀ ದೇಶದಲ್ಲಿ ರಕ್ಷಣಾ ಎಲೆಕ್ಟ್ರಾನಿಕ್ಸ್ ವ್ಯವಸ್ಥೆಗಳು ಮತ್ತು ಉತ್ಪನ್ನಗಳ ತಯಾರಿಕೆಯಲ್ಲಿ ಕರ್ನಾಟಕದ ಪಾಲು ಶೇ 40 ರಷ್ಟು ಇದೆ. ಮತ್ತಷ್ಟು ಉತ್ತೇಜನ ನೀಡಲು, ಈ ನೀತಿಯು ಬಾಹ್ಯಾಕಾಶ, ರಕ್ಷಣಾ ಮತ್ತು ಏರೋಸ್ಪೇಸ್ ತಯಾರಕರು ಹಾಗೂ ಇತರ ಉಪ-ವಲಯಗಳಿಗೆ ಬೃಹತ್ ಭೂಮಿ ಮತ್ತು ಆರ್ಥಿಕ ಪ್ರೋತ್ಸಾಹದ ಪ್ಯಾಕೇಜ್ ಒದಗಿಸಲಿದೆ. ಹೊಸ ನೀತಿ ಅಡಿಯಲ್ಲಿ ಬೆಂಗಳೂರು, ಬೆಳಗಾವಿ, ಮೈಸೂರು, ತುಮಕೂರು ಮತ್ತು ಚಾಮರಾಜನಗರ ಸೇರಿದಂತೆ ರಾಜ್ಯದ 5 ಏರೋಸ್ಪೇಸ್ ಮತ್ತು ಡಿಫೆನ್ಸ್ ಹಬ್‌ಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ’ ಎಂದಿದ್ದಾರೆ.

## ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟವು ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇ 80ರಷ್ಟು ಅಂಕಗಳೊಂದಿಗೆ ಉತ್ತೀರ್ಣರಾದ ಪತ್ರಿಕೆ ಹಂಚುವ ಹುಡುಗರು, ಪತ್ರಿಕಾ ವಿತರಕರ ಮಕ್ಕಳು ಹಾಗೂ ಹಂಚಿಕೆದಾರರ ಮಕ್ಕಳಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಿದೆ.

ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಮಾಡಲು ಒಕ್ಕೂಟ ತೀರ್ಮಾನಿಸಿದೆ. ಅರ್ಹ ಅಭ್ಯರ್ಥಿಗಳು ಸ್ವವಿವರ ಹಾಗೂ ಅಂಕಪಟ್ಟಿಯ ಪ್ರತಿಯನ್ನು ಜುಲೈ 10ರೊಳಗೆ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ, 8 ಮತ್ತು 9 ಮಹಾಲಕ್ಷ್ಮಿ ಪ್ಲಾಜಾ, ಮುನೇಶ್ವರ ಬ್ಲಾಕ್, ಸರಸ್ವತಿಪುರ ಮುಖ್ಯರಸ್ತೆ, ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಎದುರು, ಬೆಂಗಳೂರು–560086 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

**ಸಂಪರ್ಕಕ್ಕೆ:** 9972534666 ಅಥವಾ 9986327778

### ನಗರದಲ್ಲಿ ಇಂದು

**‘ಕಲಾರತ್ನ ಪ್ರಶಸ್ತಿ’ ಪ್ರದಾನ:** ಉದ್ಘಾಟನೆ: ಬಿ. ನೀಲಮ್ಮ, ಅಧ್ಯಕ್ಷತೆ: ಎಚ್.ಎಸ್. ಶಿವರುದ್ರಪ್ಪ, ಮುಖ್ಯ ಅತಿಥಿಗಳು: ಸಿದ್ದರಾಜಯ್ಯ, ಡಬ್ಲ್ಯು.ಎಸ್. ಶಾಂತಕುಮಾರ್, ರೂಬಿನ್ ರಾಜ್, ಆಯೋಜನೆ: ರತ್ನಾಕ್ಷರ ಫೌಂಡೇಶನ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಸಂಜೆ 4

## ಅಯೋಧ್ಯೆ: ರಾಯರ ಮಠ ಸ್ಥಾಪನೆಗೆ ಸ್ಥಳ ಪರಿಶೀಲನೆ

ರಾಯಚೂರು: ಅಯೋಧ್ಯೆಯಲ್ಲಿ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಶಾಖಾ ಮಠ ಸ್ಥಾಪನೆಗಾಗಿ ಭಾನುವಾರ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ಭೇಟಿ ನೀಡಿ, ಮಠ ಸ್ಥಾಪನೆಗಾಗಿ ವಿವಿಧ ಸ್ಥಳಗಳನ್ನು ಪರಿಶೀಲನೆ ನಡೆಸಿದರು. ನಂತರ ಅಯೋಧ್ಯೆಯ ಶ್ರೀರಾಮನ ದರ್ಶನ ಪಡೆದರು.



ವಾರ್ಷಿಕೋತ್ಸವ ಸಮಾರಂಭದಲ್ಲಿ (ಎಡದಿಂದ) ಎ.ಎಸ್. ಕಿರಣ್ ಕುಮಾರ್, ತಣಿಕಲ್ಲ ಭರಣಿ, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಭಾರತಿ ವಿಷ್ಣುವರ್ಧನ್, ಸಾಲುಮರದ ತಿಮ್ಮಕ್ಕ, ಮಂಜಮ್ಮ ಜೋಗತಿ, ದೊಡ್ಡರಂಗೇಗೌಡ, ತುಳಸಿಗೌಡ, ಮಾಲತಿ ಹೊಳ್ಳ, ಸಬಿತಾ ಮೋನಿಸ್ ಹಾಗೂ ನಾಗತಿಹಳ್ಳಿ ಚಂದ್ರಶೇಖರ್ ಅವರಿಗೆ 'ಡಿಎಸ್ ಮ್ಯಾಕ್ಸ್' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಎಸ್.ಪಿ.ದಯಾನಂದ್, ಸಿದ್ಧಲಿಂಗ ಸ್ವಾಮೀಜಿ, ಪತ್ರಕರ್ತ ಎಚ್.ಆರ್. ರಂಗನಾಥ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಶಾಸಕ ರಾಜು ಗೌಡ ಮತ್ತು ಸಂಸ್ಥೆಯ ಅಧ್ಯಕ್ಷ ಕೆ.ವಿ. ಸತೀಶ್ ಇದ್ದಾರೆ – ಪ್ರಜಾವಾಣಿ ಚಿತ್ರ

### ಡಿಎಸ್ ಮ್ಯಾಕ್ಸ್ ಪ್ರಾಪರ್ಟೀಸ್ ಸಂಸ್ಥೆಯಿಂದ ವಾರ್ಷಿಕೋತ್ಸವ ಆಚರಣೆ

## 11 ಮಂದಿಗೆ 'ಡಿಎಸ್ ಮ್ಯಾಕ್ಸ್ ಪ್ರಶಸ್ತಿ' ಪ್ರದಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಡಿಎಸ್ ಮ್ಯಾಕ್ಸ್ ಪ್ರಾಪರ್ಟೀಸ್ ಸಂಸ್ಥೆಯು ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸಾಲುಮರದ ತಿಮ್ಮಕ್ಕ, ಸಿನಿಮಾ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಸೇರಿ ಹನ್ನೊಂದು ಮಂದಿಗೆ ವಾರ್ಷಿಕ ಪ್ರಶಸ್ತಿಗಳನ್ನು ನೀಡಿ, ಗೌರವಿಸಿತು.

ಸಂಸ್ಥೆಯು ನಗರದಲ್ಲಿ ಭಾನುವಾರ ಹಮ್ಮಿಕೊಂಡ ವಾರ್ಷಿಕೋತ್ಸವ ಸಮಾರಂಭದಲ್ಲಿ ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಅವರು ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್ ಕುಮಾರ್, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ನಟಿ ಭಾರತಿ ವಿಷ್ಣುವರ್ಧನ್, ಪರಿಸರ ಉಳಿಸಲು ಶ್ರಮಿಸಿದ ಸಾಲುಮರದ ತಿಮ್ಮಕ್ಕ ಮತ್ತು ತುಳಸಿಗೌಡ, ಜಾನಪದ ಕಲಾವಿದೆ ಮಂಜಮ್ಮ ಜೋಗತಿ, ಸಾಹಿತಿ ದೊಡ್ಡರಂಗೇಗೌಡ, ಅಂತರರಾಷ್ಟ್ರೀಯ ಪ್ಯಾರಾ ಅಥ್ಲೀಟ್ ಮಾಲತಿ ಕೃಷ್ಣಮೂರ್ತಿ ಹೊಳ್ಳ ಹಾಗೂ ಸಬಿತಾ ಮೋನಿಸ್ ಅವರು 'ಡಿಎಸ್‌ಮ್ಯಾಕ್ಸ್ ಕರುನಾಡು ರತ್ನಶ್ರೀ ಪ್ರಶಸ್ತಿ' ಸ್ವೀಕರಿಸಿದರು.

> ಆರ್ಥಿಕವಾಗಿ ಹಿಂದುಳಿದ ಮಧ್ಯಮ ವರ್ಗದ ಕನಸನ್ನು ನನಸು ಮಾಡುತ್ತಿರುವುದು ಉತ್ತಮ ಕಾರ್ಯ. ನಗರದ ಲಕ್ಷಾಂತರ ಜನರ ಕನಸನ್ನು ಸಂಸ್ಥೆ ನನಸು ಮಾಡಲಿ
> **ಸಿದ್ದಲಿಂಗ ಸ್ವಾಮೀಜಿ,** ಸಿದ್ಧಗಂಗಾ ಮಠ

> ಈ ಸಮಾಜದಲ್ಲಿ ಕಟ್ಟಕಡೆಯ ವ್ಯಕ್ತಿಗೂ ಸೂರು ದೊರಕಬೇಕು. ಸಂಸ್ಥೆಯೊಂದು ಕೈಗೆಟಕುವ ದರಕ್ಕೆ ಮನೆಯನ್ನು ಒದಗಿಸುತ್ತಿರುವುದು ಉತ್ತಮ ಕಾರ್ಯ
> **ವಿ. ಸೋಮಣ್ಣ,** ವಸತಿ ಸಚಿವ

ಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಮತ್ತು ತೆಲುಗು ನಟ ತಣಿಕಲ್ಲ ಭರಣಿ ಅವರಿಗೆ 'ಡಿಎಸ್‌ಮ್ಯಾಕ್ಸ್ ಕಲಾಶ್ರೀ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಗಳು ತಲಾ ₹25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಸ್ವಂತ ಸೂರನ್ನು ಹೊಂದಿದಾಗ ಬದುಕಲ್ಲಿ ತೃಪ್ತಿಯ ಭಾವ ಮೂಡುತ್ತದೆ. ಬಡ–ಮಧ್ಯಮ ವರ್ಗದ ಜನರಲ್ಲಿ ನಗು ತರುವ ಕೆಲಸವನ್ನು ಡಿಎಸ್ ಮ್ಯಾಕ್ಸ್ ಮಾಡುತ್ತಿದೆ' ಎಂದು ಹೇಳಿದರು.

ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಎಸ್.ಪಿ.ದಯಾನಂದ್ ಮಾತನಾಡಿ, '16 ವರ್ಷಗಳ ಹಿಂದೆ ಕಂಪನಿಯನ್ನು ಶೂನ್ಯದಿಂದ ಪ್ರಾರಂಭಿಸಲಾಗಿತ್ತು. ಈವರೆಗೆ 16 ಸಾವಿರ ಮನೆಗಳನ್ನು ಜನರಿಗೆ ನೀಡಲಾಗಿದೆ. ಜನಸಾಮಾನ್ಯರಿಗೆ ಕಡಿಮೆ ಬೆಲೆಯಲ್ಲಿ ಮನೆ ಸಿಗುವಂತಾಗಬೇಕು. ಅದೇ ಆಶಯದೊಂದಿಗೆ ನಾವು ಕಾರ್ಯಪ್ರವೃತ್ತರಾಗಿದ್ದೇವೆ' ಎಂದರು.

ಸಮಾರಂಭದಲ್ಲಿ 166 ಮಂದಿಗೆ ಮನೆ, ಕಾರು ಸೇರಿದಂತೆ ವಿವಿಧ ಬಹುಮಾನ ನೀಡಲಾಯಿತು.

ಹೊರಗೆ ಹೋಗುವಾಗ ಮುಖಗವಸು ಧರಿಸಿ

## ಒಂದೇ ದಿನದಲ್ಲಿ ಆದೇಶ ಬದಲು!

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸ್ಥಳೀಯ ಅಗ್ನಿಶಾಮಕ ಠಾಣಾಧಿಕಾರಿಗಳು ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಆಧರಿಸಿ ಸಂಬಂಧಪಟ್ಟ ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳು ಖಾಸಗಿ, ಅನುದಾನಿತ, ಅನುದಾನರಹಿತ ಶಾಲಾ ಕಟ್ಟಡಗಳಿಗೆ ಅಗ್ನಿ ಅವಘಡ ಸುರಕ್ಷತೆ ಪ್ರಮಾಣಪತ್ರ ನೀಡಬಹುದೆಂಬ ಆದೇಶವನ್ನು ಒಂದೇ ದಿನಕ್ಕೆ ಗೃಹ ಇಲಾಖೆ ಬದಲಿಸಿದೆ!

'ಶಾಲೆಗಳ ವ್ಯಾಪ್ತಿಯ ಅಗ್ನಿಶಾಮಕ ಠಾಣಾಧಿಕಾರಿಗಳ ಬದಲು ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳೇ ಖುದ್ದು ಲೋ–ರೈಸ್ ಶಾಲಾ ಕಟ್ಟಡಗಳನ್ನು ಪರಿಶೀಲಿಸಿ ಪ್ರಮಾಣಪತ್ರ ನೀಡಬೇಕು' ಎಂದು ಆದೇಶವನ್ನು ತಿದ್ದುಪಡಿ ಮಾಡಲಾಗಿದೆ. ಮೊದಲ ಆದೇಶ ಜೂನ್ 17 ರಂದು ಹೊರಡಿಸಿದ್ದರೆ, ಎರಡನೇ ತಿದ್ದುಪಡಿ ಆದೇಶವನ್ನು ಮರುದಿನ ಹೊರಡಿಸಲಾಗಿದೆ.

ವಿಳಂಬ ತಪ್ಪಿಸಲು ಸ್ಥಳೀಯ ಅಗ್ನಿಶಾಮಕ ಠಾಣಾಧಿಕಾರಿಗಳ ಮೂಲಕ ಅಗ್ನಿ ಆಕಸ್ಮಿಕಗಳ ಸುರಕ್ಷತೆ ಪ್ರಮಾಣಪತ್ರ ವಿತರಿಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ (ರುಪ್ಸ) ಇತ್ತೀಚೆಗೆ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿತ್ತು.

'ಸ್ಥಳೀಯ ಅಗ್ನಿಶಾಮಕ ಠಾಣಾಧಿಕಾರಿಗಳ ಬದಲು ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳು ಖುದ್ದು ಭೇಟಿ ನೀಡಿ ಅಗ್ನಿ ಅವಘಡ ಸುರಕ್ಷತೆ ಪ್ರಮಾಣ ಪತ್ರ ನೀಡಬೇಕೆಂಬ ಆದೇಶದಿಂದ ಖಾಸಗಿ ಶಾಲೆಗಳಿಗೆ ಅದರಲ್ಲೂ ಗ್ರಾಮೀಣ ಭಾಗದ ಬಜೆಟ್ ಶಾಲೆಗಳಿಗೆ ಆಘಾತವಾಗಿದೆ. ಹೀಗಾಗಿ, ತಿದ್ದುಪಡಿ ಮಾಡಿದ ಆದೇಶವನ್ನು ಹಿಂಪಡೆದು, ಪ್ರಮಾಣಪತ್ರ ನೀಡುವ ಅಧಿಕಾರವನ್ನು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ನೀಡಬೇಕು' ಎಂದು ರುಪ್ಸ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಆಗ್ರಹಿಸಿದ್ದಾರೆ.

'ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳ ಮೂಲಕವೇ ಶಾಲೆಗಳಿಗೆ ಅಗ್ನಿ ಅವಘಡ ಸುರಕ್ಷತೆ ಪ್ರಮಾಣಪತ್ರ ಪಡೆಯಬೇಕೆಂಬ ನಿಯಮ ಕಳೆದ ವರ್ಷವೇ ಇತ್ತು. ಅಧಿಕಾರಿಗಳ ಕಿರುಕುಳ, ಲಂಚಗುಳಿತನಕ್ಕೆ ಬೇಸತ್ತು ಸಾಕ್ಷ್ಯ ಸಮೇತ ದೂರು ನೀಡಿದ್ದೆವು. ಬಳಿಕ ಡಿಎಫ್‌ಒಗೆ ಇದ್ದ ಅಧಿಕಾರವನ್ನು ವಲಯ ಅಗ್ನಿಶಾಮಕ ಅಧಿಕಾರಿಗಳಿಗೆ (ಆರ್‌ಎಫ್‌ಒ) ವರ್ಗಾಯಿಸಲಾಗಿತ್ತು. ಇದು ಇನ್ನೂ ಕಷ್ಟಕರ ಆಗಿದ್ದರಿಂದ ಹೋರಾಟ ಮುಂದುವರಿಸಿದ್ದೆವು. ಹೀಗಾಗಿ, ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಹೊಣೆ ನೀಡಿ ಆದೇಶ ನೀಡಲಾಗಿತ್ತು. ಆದರೆ, ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳ ಲಾಬಿಗೆ ಮಣಿದು ಒಂದೇ ದಿನದಲ್ಲಿ ಆದೇಶವನ್ನು ತಿದ್ದುಪಡಿ ಮಾಡಲಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ಪಿಯು ಪರೀಕ್ಷೆ: ವಿದ್ಯಾರ್ಥಿಗಳ ಸಾಧನೆ

**ಬೆಂಗಳೂರು:** ನಗರದ ವಿವಿಧ ಕಾಲೇಜು ವಿದ್ಯಾರ್ಥಿಗಳು ಪಿಯು ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.



ಸ್ಕಂದ



ಗಾನವಿ



ಅನೀಶ್ ಕಾರ್ತಿಕ್

ಜಯನಗರದ ಆರ್‌ವಿ ಪಿಯು ಕಾಲೇಜಿನ ವಿದ್ಯಾರ್ಥಿ ಎಂ.ಎಸ್.ಸ್ಕಂದ ಅವರು ವಿಜ್ಞಾನ ವಿಭಾಗದಲ್ಲಿ (ಶೇ 98.33) ಹಾಗೂ ವಿದ್ಯಾವರ್ಧಕ ಸಂಘದ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಎಂ.ಗಾನವಿ (ಶೇ 98.83) ಹಾಗೂ ಎಸ್.ಪಲ್ಲವಿ (ಶೇ 94.66) ಅವರು ಉತ್ತಮ ಫಲಿತಾಂಶ ಪಡೆದಿದ್ದಾರೆ.



ಪಲ್ಲವಿ



ಸಾತ್ವಿಕ್

ಶ್ರೀಕುಮಾರ್ ಚಿಲ್ಡ್ರನ್ಸ್ ಹೋಮ್ ಜೂನಿಯರ್ ಕಾಲೇಜಿನ ಆರ್.ಅನೀಶ್ ಕಾರ್ತಿಕ್ 579 (ಶೇ 96.5) ಹಾಗೂ ಚೈತನ್ಯ ಪಿಯು ಕಾಲೇಜಿನ ಎನ್.ಸಾತ್ವಿಕ್ 574 (ಶೇ 95.66) ಅಂಕ ಪಡೆದಿದ್ದಾರೆ.

## ಅಂಕಿತಾ ಶ್ರೀನಾಥ್ ರಾಜ್ಯಕ್ಕೆ ಆರನೇ ಸ್ಥಾನ

ಪ್ರಜಾವಾಣಿ ವಾರ್ತೆ



ಮಾನಸಿ



ಸೃಜನಾ


**ಬೆಂಗಳೂರು:** ನಗರದ ಟಿ.ದಾಸರಹಳ್ಳಿಯ ವಿಡಿಯ ಪೂರ್ಣ ಪ್ರಜ್ಞಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಅಂಕಿತಾ ಶ್ರೀನಾಥ್ ಗಾರ್ಗ್ಯ ದ್ವಿತೀಯ ಪಿಯು ವಿಜ್ಞಾನ ವಿಭಾಗದಲ್ಲಿ (ಪಿಸಿಎಂಬಿ) 592 ಅಂಕಗಳನ್ನು ಗಳಿಸಿ ರಾಜ್ಯಕ್ಕೆ ಆರನೇ ಸ್ಥಾನ ಪಡೆದಿದ್ದಾರೆ.



ಅಂಕಿತಾ



ಅದಿತಿ



ತೇಜಸ್

ಎಸ್.ಮಾನಸಿ (ಶೇ 97.85), ಎಸ್. ಸೃಜನಾ (ಶೇ 97.33), ಅದಿತಿ ಶ್ರೀಧರ್ ಅಂಬ್ಲಿಕರ್ (ಶೇ 96.83) ಮತ್ತು ಎಸ್. ತೇಜಸ್ (ಶೇ 96.33) ಸೇರಿದಂತೆ 20 ವಿದ್ಯಾರ್ಥಿಗಳು ಶೇ 90ಕ್ಕೂ ಹೆಚ್ಚು ಅಂಕಗಳಿಸಿದ್ದಾರೆ.

44 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದಾರೆ ಎಂದು ಪ್ರಾಂಶುಪಾಲ ಗುರುರಾಜ್ ಎಸ್. ದಾವಣಗೆರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ನಗರಕ್ಕೆ ಪ್ರಧಾನಿ ಮೋದಿ ಆಗಮನ • ಪರ್ಯಾಯ ಮಾರ್ಗ ಬಳಕೆಗೆ ಸೂಚನೆ

# ವಿಮಾನ ನಿಲ್ದಾಣ ರಸ್ತೆ: ದಟ್ಟಣೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಗರಕ್ಕೆ ಸೋಮವಾರ ಆಗಮಿಸಲಿದ್ದು, ಈ ವೇಳೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ ಹಾಗೂ ಮೈಸೂರು ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ. ಪರ್ಯಾಯ ಮಾರ್ಗ ಬಳಸುವಂತೆ ಸಂಚಾರ ಪೊಲೀಸರು ಕೋರಿದ್ದಾರೆ.

ಕೊಮ್ಮಘಟ್ಟದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಧಾನಿ ಪಾಲ್ಗೊಳ್ಳಲಿದ್ದು, ಅವರು ತೆರಳುವ ಮಾರ್ಗದಲ್ಲಿ ಸಂಚಾರ ಬದಲಾವಣೆ ಸಹ ಮಾಡಲಾಗಿದೆ.

‘ಪ್ರಧಾನಿ ನರೇಂದ್ರ ಮೋದಿ ಅವರ ಸಂಚಾರಕ್ಕೆ ಸಿಗ್ನಲ್ ಮುಕ್ತ ರಸ್ತೆ ವ್ಯವಸ್ಥೆ ಮಾಡಲಾಗಿದೆ. ಕಾವೇರಿ ಜಂಕ್ಷನ್, ಮೇಖ್ರಿ ವೃತ್ತ, ಹೆಬ್ಬಾಳ ಮೇಲ್ಸೇತುವೆ ಹಾಗೂ ಸುತ್ತಮುತ್ತ ಸ್ಥಳದಲ್ಲಿ ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ. ಹಾಗಾಗಿ ಈ ಮಾರ್ಗದಲ್ಲಿ ಸಂಚರಿಸುವ ಸಾರ್ವಜನಿಕರು, ಪರ್ಯಾಯ ಮಾರ್ಗ ಬಳಸಬೇಕು’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಅವರು ಸಾರ್ವಜನಿಕರಲ್ಲಿ ಕೋರಿದ್ದಾರೆ.

‘ಮೈಸೂರು ರಸ್ತೆ ಮತ್ತು ನೈಸ್ ರಸ್ತೆ ಕಡೆಯಿಂದ ಕೆಂಗೇರಿ ಕಡೆಗೆ ಹಾಗೂ ಉತ್ತರಹಳ್ಳಿ ರಸ್ತೆ ಕಡೆಯಿಂದ ಕೆಂಗೇರಿ, ಮೈಸೂರು ಕಡೆಗಿನ ರಸ್ತೆಯಲ್ಲಿ ಸಾರ್ವಜನಿಕರ ವಾಹನಗಳ ಸಂಚಾರವನ್ನು ಮಧ್ಯಾಹ್ನ 12.30 ಗಂಟೆಯಿಂದ 2.30 ಗಂಟೆಯವರೆಗೆ ನಿರ್ಬಂಧಿಸಲಾಗಿದೆ’ ಎಂದೂ ತಿಳಿಸಿದ್ದಾರೆ.

‘ಮೈಸೂರು ರಸ್ತೆ ಹಾಗೂ ವಿಮಾನ ನಿಲ್ದಾಣ ರಸ್ತೆಯಲ್ಲಿ ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಭಾರಿ ಗಾತ್ರದ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ’ ಎಂದೂ ತಿಳಿಸಿದರು.



ಕೆಂಗೇರಿ ಬಳಿಯ ಕೊಮ್ಮಘಟ್ಟದಲ್ಲಿ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕಾರ್ಮಿಕರು ಭಾನುವಾರ ಸಿದ್ಧತೆ ಕೆಲಸಗಳಲ್ಲಿ ನಿರತರಾಗಿದ್ದರು – ಪ್ರಜಾವಾಣಿ ಚಿತ್ರ

## ಪೊಲೀಸರ ಬಿಗಿ ಭದ್ರತೆ

ಕೆಂಗೇರಿ ಬಳಿಯ ಕೊಮ್ಮಘಟ್ಟದ ಮೈದಾನದಲ್ಲಿ ಬಹಿರಂಗ ಸಭೆಯಲ್ಲಿ ಪ್ರಧಾನಿ ಭಾಗವಹಿಸಲಿದ್ದು, ಈ ಸ್ಥಳದಲ್ಲಿ ಭದ್ರತೆಗಾಗಿ ಎರಡು ಸಾವಿರಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿದೆ.

ಕಮಿಷನರ್ ಪ್ರತಾಪ್ ರೆಡ್ಡಿ ಅವರು ಕಾರ್ಯಕ್ರಮ ಸ್ಥಳಕ್ಕೆ ಭಾನುವಾರ ಭೇಟಿ ನೀಡಿ ಭದ್ರತೆ ಪರಿಶೀಲನೆ ನಡೆಸಿದರು.

‘ತಲಾ ಇಬ್ಬರು ಹೆಚ್ಚುವರಿ ಕಮಿಷನರ್‌ಗಳು, ಜಂಟಿ ಕಮಿಷನರ್‌ಗಳು, 8 ಡಿಸಿಪಿಗಳು, 25 ಎಸಿಪಿಗಳು, 123 ಇನ್‌ಸ್ಪೆಕ್ಟರ್‌ಗಳು, 125 ಸಬ್ ಇನ್‌ಸ್ಪೆಕ್ಟರ್‌ಗಳು ಸೇರಿದಂತೆ ಎರಡು ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಭದ್ರತೆಯಲ್ಲಿರಲಿದ್ದಾರೆ. ನಗರ ಸಶಸ್ತ್ರ ಮೀಸಲು ಪಡೆ, ರಾಜ್ಯ ಪೊಲೀಸ್ ಮೀಸಲು ಪಡೆ ಸಿಬ್ಬಂದಿಯನ್ನೂ ಭದ್ರತೆಗೆ ಬಳಸಿಕೊಳ್ಳಲಾಗುತ್ತಿದೆ. ತುರ್ತು ಸಂದರ್ಭಗಳಲ್ಲಿ ಕೆಲಸ ಮಾಡುವ ‘ಗರುಡ’ ಪಡೆ ಹಾಗೂ ಕ್ಷಿಪ್ರ ಕಾರ್ಯಪಡೆ ಪೊಲೀಸರನ್ನು ಸ್ಥಳದಲ್ಲಿ ನಿಯೋಜಿಸಲಾಗುತ್ತಿದೆ’ ಎಂದೂ ತಿಳಿಸಿದರು.

## ಸ್ವಾಗತಕ್ಕೆ ಹಿಂದಿ ಬರಹ: ಮಸಿ ಬಳಿದ ಕರವೇ

**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರ ಸ್ವಾಗತಕ್ಕಾಗಿ ನಗರದಲ್ಲಿ ಅಳವಡಿಸಿದ್ದ ಹಿಂದಿ ಬರಹವಿದ್ದ ಫ್ಲೆಕ್ಸ್‌ಗಳಿಗೆ ಕರ್ನಾಟಕ ರಕ್ಷಣಾ ವೇದಿಕೆಯ (ಕರವೇ) ಕಾರ್ಯಕರ್ತರು ಮಸಿ ಬಳಿದು ಆಕ್ರೋಶ ಹೊರಹಾಕಿದರು.

ಮೈಸೂರು ರಸ್ತೆಯಲ್ಲಿ ಪ್ರಧಾನಿ ಅವರ ಹಾದು ಹೋಗಲಿದ್ದು, ರಸ್ತೆ ವಿಭಜಕ ಹಾಗೂ ಅಕ್ಕ-ಪಕ್ಕದಲ್ಲಿ ಸಚಿವ ಮುನಿರತ್ನ ಮತ್ತು ಬೆಂಬಲಿಗರು ಫ್ಲೆಕ್ಸ್ ಅಳವಡಿಸಿದ್ದರು. ಅದರಲ್ಲಿ ಹಿಂದಿ ಬರಹವೇ ಹೆಚ್ಚಿತ್ತು.

ಅದನ್ನು ಗಮನಿಸಿದ್ದ ಕರವೇ ಕಾರ್ಯಕರ್ತರು, ರಸ್ತೆಯುದಕ್ಕೂ ಫ್ಲೆಕ್ಸ್‌ಗಳಿಗೆ ಮಸಿ ಬಳಿದರು. ಗಸ್ತಿನಲ್ಲಿದ್ದ ಪೊಲೀಸರು, ಕಾರ್ಯಕರ್ತರನ್ನು ತಡೆಯಲು ಯತ್ನಿಸಿದರು. ಇದಕ್ಕೆ ಜಗ್ಗದ ಕಾರ್ಯಕರ್ತರು, ಬಹುತೇಕ ಫ್ಲೆಕ್ಸ್‌ಗಳಿಗೆ ಮಸಿ ಎರಚಿದರು. ‘ಹಿಂದಿ ಹೇರಿಕೆ ಬೇಡ’ ಎಂಬುದಾಗಿ ಘೋಷಣೆ ಕೂಗಿದರು.

‘ಪ್ರಧಾನಿ ಅವರಿಗೆ ಕನ್ನಡ ಭಾಷೆಯಲ್ಲಿ ಸ್ವಾಗತ ಕೋರಲಿ. ಅದನ್ನು ಬಿಟ್ಟು ಹಿಂದಿಯಲ್ಲಿ ಸ್ವಾಗತ ಕೋರುವುದನ್ನು ಸಹಿಸುವುದಿಲ್ಲ. ಕರ್ನಾಟಕದಲ್ಲಿ ಹಿಂದಿ ಹೇರಿಕೆ ಆಗಲು ಬಿಡುವುದಿಲ್ಲ’ ಎಂದು ಕಾರ್ಯಕರ್ತರು ಗುಡುಗಿದರು.

ಫ್ಲೆಕ್ಸ್ ತೆರವು: ಕರವೇ ಕಾರ್ಯಕರ್ತರು ಮಸಿ ಬಳಿದ ನಂತರ, ನಗರದ ಹಲವೆಡೆ ಅಳವಡಿಸಲಾಗಿದ್ದ ಹಿಂದಿ ಬರಹದ ಫ್ಲೆಕ್ಸ್‌ಗಳನ್ನು ಬಿಜೆಪಿ ಕಾರ್ಯಕರ್ತರೇ ತೆರವು ಮಾಡಿದರು.



ಪ್ರಧಾನಿ ಅವರಿಗೆ ಸ್ವಾಗತ ಕೋರಿ ಹಿಂದಿಯಲ್ಲಿ ಹಾಕಿದ್ದ ಫ್ಲೆಕ್ಸ್‌ಗೆ ಕರವೇ ಕಾರ್ಯಕರ್ತರು ಭಾನುವಾರ ಮಸಿ ಬಳಿದರು

# ಮರಾಠಿ ನಾಮಫಲಕ: ಕಸಾಪ ಖಂಡನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಹಾರಾಷ್ಟ್ರ ಸರ್ಕಾರದ ಲೋಕೋಪಯೋಗಿ ಇಲಾಖೆಯು ರಾಜ್ಯದ ಗಡಿಯೊಳಗೆ ಮರಾಠಿ ನಾಮಫಲಕ ಅಳವಡಿಸಿದ್ದ ಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಖಂಡಿಸಿದೆ.

‘ಮರಾಠಿ ನಾಮಫಲಕ ಅಳವಡಿಕೆಯಿಂದ ಗಡಿಭಾಗದ ಜನರಲ್ಲಿ ಮತ್ತೆ ಭಾಷಾ ವಿವಾದ ಕಿಡಿ ಹಚ್ಚಿದಂತಾಗಿದೆ. ನಿರಂತರ ಗಡಿಯಲ್ಲಿ ಕ್ಯಾತೆ ಮಾಡುವುದು ಮರಾಠಿಗರ ಪದ್ಧತಿ’ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಬೇಸರ ವ್ಯಕ್ತಪಡಿಸಿದ್ದಾರೆ.

‘ಈ ಕೃತ್ಯಕ್ಕೆ ಮಹಾರಾಷ್ಟ್ರ ಸರ್ಕಾರವು ಕುಮ್ಮಕ್ಕು ನೀಡಿದೆ. ಬೆಳಗಾವಿ ಜಿಲ್ಲೆಯ ಗಡಿ ಭಾಗವಾದ ಸಂಕೇಶ್ವರ ಸಮೀಪ ಗಡಹಿಂಗ್ಲಜ್ ರಸ್ತೆಯ ಸೇತುವೆಯ ಬಳಿ ಮರಾಠಿ ನಾಮಫಲಕ ಹಾಕಲಾಗಿತ್ತು. ಇದನ್ನು ಸ್ಥಳೀಯ ಕನ್ನಡ ಪರ ಸಂಘಟನೆಗಳು ಗಮನಿಸಿ, ಆಕ್ರೋಶ ವ್ಯಕ್ತಪಡಿಸಿದ್ದವು. ಇದರಿಂದಾಗಿ ಸಂಕೇಶ್ವರ ಪೊಲೀಸರು ರಾಜ್ಯದೊಳಗೆ ಇರುವ ಮಹಾರಾಷ್ಟ್ರ ಸರ್ಕಾರದ ಲೋಕೋಪಯೋಗಿ ಇಲಾಖೆ ಹಾಕಿರುವ ನಾಮಫಲಕವನ್ನು ತೆರವು ಮಾಡಿದೆ’ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹೇಳಿದ್ದಾರೆ.

‘ಅನ್ಯ ಭಾಷಿಕರು ಗಡಿಭಾಗದಲ್ಲಿ ಇಂತಹ ಕೃತ್ಯ ಎಸಗುವುದನ್ನು ತಡೆಯಲು ಸ್ಥಳೀಯ ಜಿಲ್ಲಾಡಳಿತ, ಲೋಕೋಪಯೋಗಿ ಇಲಾಖೆ, ಸ್ಥಳೀಯ ಪೊಲೀಸ್ ಇಲಾಖೆ ಎಚ್ಚರದಿಂದ ಇರಬೇಕು. ಮಹಾರಾಷ್ಟ್ರ ಸರ್ಕಾರ ನಮ್ಮ ನೆಲದಲ್ಲಿ ಬಂದು, ನಾಮಫಲಕ ಹಾಕುವವರೆಗೆ ನಮ್ಮ ಅಧಿಕಾರಿಗಳು ಮೌನವಹಿಸಿದ್ದು ಸರಿಯಲ್ಲ. ಇಂತಹ ಪರಿಸ್ಥಿತಿ ಮತ್ತೆ ಮರುಕಳಿಸದಂತೆ ನೋಡಿಕೊಳ್ಳಬೇಕು’ ಎಂದು ಹೇಳಿದ್ದಾರೆ.

## ವಸತಿ ಶಾಲೆಗಳಿಗೆ ಸಿರಿಧಾನ್ಯ ಪರಿಚಯ

**ಬೆಂಗಳೂರು:** ಮಕ್ಕಳಲ್ಲಿ ಪೌಷ್ಟಿಕಾಂಶ-ಮಟ್ಟ ಸುಧಾರಿಸುವ ಉದ್ದೇಶದಿಂದ ವಸತಿ ಶಾಲೆಗಳಲ್ಲಿ ವಿತರಿಸುವ ಆಹಾರದಲ್ಲಿ ಸಿರಿಧಾನ್ಯವನ್ನು ಪರಿಚಯಿಸಲು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಮುಂದಾಗಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಹಾವೇರಿ ಜಿಲ್ಲೆಯ ಎರಡು ವಸತಿ ಶಾಲೆಗಳಲ್ಲಿ ಪ್ರಾಯೋಗಿಕವಾಗಿ ಸಿರಿಧಾನ್ಯ ಪರಿಚಯಿಸಲು ಇಲಾಖೆ ಉದ್ದೇಶಿಸಿದೆ. ಆ ಮೂಲಕ, ಶಾಲೆಗಳ ಸುಮಾರು 600 ವಿದ್ಯಾರ್ಥಿಗಳು ಈ ಯೋಜನೆಯ ಲಾಭ ಪಡೆಯಲಿದ್ದಾರೆ.

‘ಹಿಂದುಳಿದ ತಾಲ್ಲೂಕುಗಳಲ್ಲಿರುವ ಶಾಲೆಗಳನ್ನು ಈ ಯೋಜನೆಗೆ ಆಯ್ಕೆ ಮಾಡಲಾಗಿದೆ. ಹಾವೇರಿ ಜಿಲ್ಲೆಯಲ್ಲಿ ಇಲಾಖೆಯ ವತಿಯಿಂದ ನಡೆಸಲಾಗುತ್ತಿರುವ ಎರಡು ಶಾಲೆಗಳನ್ನು ಯೋಜನೆಗೆ ಆಯ್ಕೆ ಮಾಡಲಾಗಿದೆ’ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

‘ಸಿರಿಧಾನ್ಯ ನೀಡುವುದರಿಂದ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳು ಹೆಚ್ಚುವರಿಯಾಗಿ ₹ 200 ವೆಚ್ಚ ಆಗಲಿದೆ. ಸದ್ಯ ಪ್ರತಿ ತಿಂಗಳಿಗೆ ವಿದ್ಯಾರ್ಥಿಯ ಆಹಾರ ವೆಚ್ಚ ₹ 1,750’ ಎಂದೂ ಅವರು ಹೇಳಿದರು.



## ರಂಗ ಪ್ರವೇಶ

ನಗರದಲ್ಲಿ ಭಾನುವಾರ ನಿದಂ ಅಕಾಡೆಮಿ ಆಯೋಜಿಸಿದ್ದ ರಂಗ ಪ್ರವೇಶ ಕಾರ್ಯಕ್ರಮದಲ್ಲಿ ಅನನ್ಯ ಮಣಿ ಅವರು ಭರತನಾಟ್ಯ ಪ್ರದರ್ಶಿಸಿದರು.
– ಪ್ರಜಾವಾಣಿ ಚಿತ್ರ.

## ಬೆಂಗಳೂರು ವಿವಿಗೆ ರಜೆ

**ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದ ಎಲ್ಲ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ಜೂನ್ 20ರಂದು ರಜೆ ನೀಡಲಾಗಿದೆ ಎಂದು ಕುಲಸಚಿವರು ತಿಳಿಸಿದ್ದಾರೆ.

ವಿಶ್ವವಿದ್ಯಾಲಯದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವ-ವಿದ್ಯಾಲಯವನ್ನು ಉದ್ಘಾಟಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಆಗಮಿಸುತ್ತಿರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

## ಮರಕ್ಕೆ ಕಾರು ಡಿಕ್ಕಿ: ತಂದೆ, ಮಗ ಸಾವು

**ಮೂಡಿಗೆರೆ:** ತಾಲ್ಲೂಕಿನ ಮುತ್ತಿಗೆಪುರ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಚಾಲಕನ ನಿಯಂತ್ರಣ ತಪ್ಪಿದ ಕಾರು ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಮೃತಪಟ್ಟಿದ್ದಾರೆ.

ಬೆಂಗಳೂರಿನ ರಾಜಾಜಿನಗರದ ನಿವಾಸಿ ನರಸಿಂಹರಾಜು (58), ಅವರ ಪುತ್ರ ಕಿರಣ್ ಕುಮಾರ್ (23) ಮೃತರು.

ನರಸಿಂಹರಾಜು ಕುಟುಂಬದವರು ಧರ್ಮಸ್ಥಳಕ್ಕೆ ತೆರಳಿ ಪೂಜೆ ಸಲ್ಲಿಸಿ ಬೆಂಗಳೂರಿಗೆ ವಾಪಸಾಗುತ್ತಿದ್ದಾಗ ಘಟನೆ ಸಂಭವಿಸಿದ್ದು, ಕಿರಣ್ ಕುಮಾರ್ ಸ್ಥಳದಲ್ಲೇ ಸಾವನಪ್ಪಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ನರಸಿಂಹರಾಜು ಅವರನ್ನು ಆಸ್ಪತ್ರೆಗೆ ಸಾಗಿಸುವಾಗ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ.

ನರಸಿಂಹರಾಜು ಪತ್ನಿ ಭಾರತಿ, ಪುತ್ರಿ ಪ್ರೇರಣಾ ಗಂಭೀರವಾಗಿ ಗಾಯಗೊಂಡಿದ್ದು, ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿಗೆ ಕಳುಹಿಸಲಾಗಿದೆ.

ಅಪಘಾತಕ್ಕೀಡಾದ ಕಾರು ರಸ್ತೆ ಬದಿಯ ಪೊದೆಗೆ ನುಗಿದ್ದು, ನಜ್ಜುಗುಜ್ಜಾಗಿದೆ. ಘಟನೆಯಿಂದ ಹೆದ್ದಾರಿಯಲ್ಲಿ ಅರ್ಧ ಗಂಟೆಗೂ ಅಧಿಕ ಕಾಲ ಸಂಚಾರಕ್ಕೆ ಅಡ್ಡಿಯಾಗಿತ್ತು. ಮೂಡಿಗೆರೆ ಪೊಲೀಸರು ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಿದರು.

## ನಾಳೆ ಸೂರ್ಯನಮಸ್ಕಾರ

**ರಾಜರಾಜೇಶ್ವರಿನಗರ:** ಇದೇ 21ರಂದು ಬೆಳಿಗ್ಗೆ 6 ಗಂಟೆಗೆ 2 ಸಾವಿರ ಜನರಿಂದ ಅನ್ನಪೂರ್ಣೇಶ್ವರಿ ನಗರದ ಎಚ್‌ಎಂವಿ ಶಾಲಾ ಎದುರು 108 ಸೂರ್ಯ ನಮಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ಆಯೋಜಕರಾದ ಡಾ. ಒಡೆಯರ್ ಹಾಗೂ ಕೆ.ಎಸ್.ಯೋಗೇಶ್ ತಿಳಿಸಿದರು. ಮಾಹಿತಿಗೆ ಮೊಬೈಲ್: 94806 16488 ಸಂಪರ್ಕಿಸಬಹುದು.

## ಇಥಿಯೋಪಿಯಾ: ಜನಾಂಗೀಯ ದಾಳಿಗೆ 200 ಸಾವು

**ನೈರೋಬಿ (ಎಪಿ):** ಇಥಿಯೋಪಿಯಾದ ಒರೊಮಿಯಾ ಪ್ರದೇಶದಲ್ಲಿ ನಡೆದ ಬಂಡುಕೋರರ ದಾಳಿಯಲ್ಲಿ ಅಮ್ಹರಾ ಜನಾಂಗದ 200 ಮಂದಿ ಮೃತಪಟ್ಟಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಆದರೆ, ಈ ಆರೋಪವನ್ನು ಬಂಡುಕೋರರ ಗುಂಪು ಅಲ್ಲಗಳೆದಿದೆ. ಆಫ್ರಿಕಾದ ಎರಡನೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶದಲ್ಲಿ ಜನಾಂಗೀಯ ಉದ್ವಿಗ್ನತೆ ಮುಂದುವರಿದಿರುವ ಕಾರಣ ಇದು ಇತ್ತೀಚಿನ ದಿನಗಳಲ್ಲಿ ನಡೆದಿರುವ ದೊಡ್ಡ ದಾಳಿಗಳಲ್ಲಿ ಒಂದಾಗಿದೆ.

### ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಕಾರ್ಯಾಚರಣೆ

# ಕೊಚ್ಚಿ ಹೋಗಿದ್ದ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಶುಕ್ರವಾರ ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ರಾಜಕಾಲುವೆಯಲ್ಲಿ ಕೊಚ್ಚಿಹೋಗಿದ್ದ ಮಿಥುನ್ (27) ಅವರ ಮೃತದೇಹ ಭಾನುವಾರ ಪತ್ತೆಯಾಗಿದೆ.

ಬಸವನಪುರ ವಾರ್ಡ್‌ನ ಗಾಯಿತ್ರಿ ಬಡಾವಣೆಯಲ್ಲಿ ಮಳೆಯಿಂದಾಗಿ ರಾಜಕಾಲುವೆ ತುಂಬಿ ಹರಿದಿತ್ತು. ಕಾಲುವೆಯಲ್ಲಿ ತೇಲಿ ಹೋಗುತ್ತಿದ್ದ ತಮ್ಮ ಬೈಕ್ ಹೊರಗೆ ಎಳೆಯಲು ಹೋಗಿ ಮಿಥುನ್ ಕೊಚ್ಚಿಕೊಂಡು ಹೋಗಿದ್ದರು.

ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಸಿಬ್ಬಂದಿ, ಶುಕ್ರವಾರ ರಾತ್ರಿಯಿಂದಲೇ ಮಿಥುನ್ ಅವರಿಗಾಗಿ ಹುಡುಕಾಟ ಆರಂಭಿಸಿದ್ದರು.

ರಾಜಕಾಲುವೆಯುದ್ದಕ್ಕೂ ದೋಣಿಯಲ್ಲಿ ಸಾಗಿ, ಪ್ರತಿಯೊಂದು ಸ್ಥಳದಲ್ಲೂ ಪರಿಶೀಲಿಸಿದರು. ಶನಿವಾರ ರಾತ್ರಿವರೆಗೂ ಮಿಥುನ್ ಸುಳಿವು ಸಿಕ್ಕಿರಲಿಲ್ಲ. ಕತ್ತಲಾಗಿದ್ದರಿಂದ, ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿತ್ತು.

ಭಾನುವಾರ ಬೆಳಿಗ್ಗೆ ಕಾರ್ಯಾಚರಣೆ ಪುನಃ ಆರಂಭಿಸಿದ್ದ ಸಿಬ್ಬಂದಿ, ಶೋಧ ಮುಂದುವರಿಸಿದ್ದರು. ಘಟನಾ ಸ್ಥಳದಿಂದ 1.5 ಕಿ.ಮೀ ದೂರದಲ್ಲಿರುವ ರಾಜಕಾಲುವೆ ಸ್ಥಳದಲ್ಲಿ ಮಿಥುನ್ ಮೃತದೇಹ ಪತ್ತೆಯಾಯಿತು. ಅದನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಯಿತು.

‘ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಅದರಂತೆ ಗ್ರಾಮದ ಮಿಥುನ್, ನಗರದ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಗಾಯಿತ್ರಿ ಬಡಾವಣೆಯಲ್ಲಿ ಸ್ನೇಹಿತರ ಜೊತೆ ವಾಸವಿದ್ದರು. ರಾಜಕಾಲುವೆ ಪಕ್ಕ ತಮ್ಮ ಬೈಕ್ ನಿಲ್ಲಿಸಿದ್ದರು. ಶುಕ್ರವಾರ ರಾತ್ರಿ 12.30ರ ಸುಮಾರಿಗೆ ಮಳೆ ವೇಳೆ ಕಾಲುವೆ ಗೋಡೆ ಕುಸಿದು ಬೈಕ್ ತೇಲಿ ಹೋಗುತ್ತಿತ್ತು. ಬೈಕ್ ಹಿಡಿದು ಎಳೆದುಕೊಳ್ಳಲು ಮುಂದಾಗಿದ್ದ ಮಿಥುನ್, ಕಾಲುವೆಗೆ ಬಿದ್ದು ನೀರಿನಲ್ಲಿ ಕೊಚ್ಚಿ ಹೋಗಿದ್ದರು’ ಎಂದು ಪೊಲೀಸರು ಹೇಳಿದರು.



ರಾಜಕಾಲುವೆಯಲ್ಲಿ ಪತ್ತೆಯಾದ ಮಿಥುನ್ ಮೃತದೇಹವನ್ನು ರಕ್ಷಣಾ ಸಿಬ್ಬಂದಿ ಆಸ್ಪತ್ರೆಗೆ ಸಾಗಿಸಿದರು

## ತಾಳಮದ್ದಳೆ ಪರ್ವಕ್ಕೆ ಚಾಲನೆ



ತಾಳಮದ್ದಳೆ ಪರ್ವಕ್ಕೆ ಡಿ. ಸುರೇಂದ್ರ ಕುಮಾರ್ ಚಾಲನೆ ನೀಡಿದರು. ಪಿ.ಟಿ.ಭಟ್, ಎಂ.ಪ್ರಭಾಕರ ಜೋಶಿ, ಸಂಘಟಕ ಉಜಿರೆ ಅಶೋಕ ಭಟ್ ಹಾಗೂ ಕಲಾವಿದರು ಉಪಸ್ಥಿತರಿದ್ದಾರೆ.

**ಬೆಂಗಳೂರು:** ಉಜಿರೆಯ ಕುರಿಯ ವಿಠಲ ಶಾಸ್ತ್ರಿ ಸಾಂಸ್ಕೃತಿಕ ಪ್ರತಿಷ್ಠಾನ ತನ್ನ ಬೆಳ್ಳಿ ಹಬ್ಬದ ಪ್ರಯುಕ್ತ ನಗರದಲ್ಲಿ ಹಮ್ಮಿಕೊಂಡಿರುವ 9 ದಿನಗಳ ತಾಳಮದ್ದಳೆ ಪರ್ವಕ್ಕೆ ಚಾಲನೆ ದೊರೆತಿದೆ.

ಯಕ್ಷಗಾನ ರಂಗದ ದಿಗ್ಗಜ ಕುರಿಯ ವಿಠಲ ಶಾಸ್ತ್ರಿಗಳ ಸ್ಮರಣಾರ್ಥ ಈ ಪ್ರತಿಷ್ಠಾನ ಸ್ಥಾಪನೆಗೊಂಡಿದೆ. ನಗರದ ವಿವಿಧೆಡೆ 12 ಪ್ರದರ್ಶನಗಳನ್ನು ಆಯೋಜಿಸಲಾಗಿದ್ದು, ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷ ಡಿ.ಸುರೇಂದ್ರ ಕುಮಾರ್ ಅವರು ನಗರದಲ್ಲಿ ಶನಿವಾರ ಚಾಲನೆ ನೀಡಿದರು.

ಸಭಾ ಕಾರ್ಯಕ್ರಮದ ಬಳಿಕ ‘ಪಾರ್ಥ ಸಾರಥಿ’ ಯಕ್ಷಗಾನ ತಾಳಮದ್ದಳೆ ಪ್ರದರ್ಶನ ಕಂಡಿತು. ಹಿಮ್ಮೇಳದಲ್ಲಿ ಪುತ್ತಿಗೆ ರಘುರಾಮ ಹೊಳ್ಳ, ಶ್ರೀಶ ರಾವ್ ನಿಡ್ಲೆ, ಅಕ್ಷಯ ರಾವ್ ವಿಟ್ಲ ಹಾಗೂ ಮುಮ್ಮೇಳದಲ್ಲಿ ಎಂ.ಪ್ರಭಾಕರ ಜೋಶಿ, ಉಜಿರೆ ಅಶೋಕ ಭಟ್, ರಾಧಾಕೃಷ್ಣ ಕಲ್ಚಾರ್ ವಿಟ್ಲ ಹಾಗೂ ಶಶಾಂಕ ಅರ್ನಾಡಿ ಪ್ರದರ್ಶನ ನೀಡಿದರು.

# ಸೈಬರ್ ಕ್ರೈಂ ಠಾಣೆ ಪಿಎಸ್‌ಐ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆ ಪಿಎಸ್‌ಐ ಸುದರ್ಶನ್ ಶೆಟ್ಟಿ (51) ಅವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಯಶವಂತಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಹನುಮಂತನಗರ ಠಾಣೆ ಪಿಎಸ್‌ಐ ಆಗಿದ್ದ ಸುದರ್ಶನ್ ಅವರನ್ನು ಕೆಲ ತಿಂಗಳ ಹಿಂದೆಯಷ್ಟೇ ನಿಯೋಜನೆ ಮೇರೆಗೆ ಸೈಬರ್ ಕ್ರೈಂ ಠಾಣೆಗೆ ವರ್ಗಾಯಿಸಲಾಗಿತ್ತು. ಅವರ ಆತ್ಮಹತ್ಯೆ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಕಾರ್ಯಕ್ರಮದ ಭದ್ರತೆಗಾಗಿ ಸುದರ್ಶನ್ ಅವರನ್ನು ನಿಯೋಜಿಸಲಾಗಿತ್ತು. ತಮಗೆ ಹುಷಾರಿಲ್ಲವೆಂದು ಹೇಳಿ ಕರ್ತವ್ಯಕ್ಕೆ ಗೈರಾಗಿದ್ದ ಅವರು, ಯಶವಂತಪುರದಲ್ಲಿರುವ ಮನೆಯಲ್ಲಿ ಉಳಿದುಕೊಂಡಿದ್ದರು.’

‘ವಿಶ್ವ ಅಪ್ಪಂದಿರ ದಿನವಾಗಿದ್ದರಿಂದ, ಸುದರ್ಶನ್ ಅವರಿಗೆ ಮಗ ಶುಭಾಶಯ ತಿಳಿಸಿದ್ದರು. ಧನ್ಯವಾದ ತಿಳಿಸಿ ಮಗನ ಜೊತೆ ಕಾಲ ಕಳೆದಿದ್ದ ಸುದರ್ಶನ್, ಕೊಠಡಿಯೊಳಗೆ ಹೋಗಿ ಬಾಗಿಲು ಹಾಕಿಕೊಂಡಿದ್ದರು. ಮಲಗಲು ಹೋಗಿರಬಹುದೆಂದು ಮಗ ಸುಮ್ಮನಾಗಿದ್ದರು. ಕೆಲ ಹೊತ್ತಿನ ನಂತರ ಹೊರಗೆ ಬಂದಿರಲಿಲ್ಲ

## ವಿದ್ಯಾರ್ಥಿ ಸೋಗಿನಲ್ಲಿ ಡ್ರಗ್ಸ್ ಮಾರಾಟ

ಅಪರಾಧ ಸುದ್ದಿ

**ಬೆಂಗಳೂರು:** ವಿದ್ಯಾರಣ್ಯಪುರ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ನೈಜೀರಿಯಾ ಪ್ರಜೆ ಜಾನ್ ನೆರೋ ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ಜಾನ್, ನಗರದ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿರುವುದಾಗಿ ಹೇಳಿಕೊಂಡು ವಿದ್ಯಾರ್ಥಿ ಸೋಗಿನಲ್ಲೇ ಡ್ರಗ್ಸ್ ಮಾರುತ್ತಿದ್ದ. ಈತನಿಂದ ₹ 1.50 ಲಕ್ಷ ಮೌಲ್ಯದ ಎಂಡಿಎಂಎ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಆಫ್ರಿಕಾ ಪ್ರಜೆಯೊಬ್ಬರಿಂದ ಡ್ರಗ್ಸ್ ಖರೀದಿಸುತ್ತಿದ್ದ ಆರೋಪಿ, ಗ್ರಾಂ.ಗೆ ₹5 ಸಾವಿರದಿಂದ ₹6 ಸಾವಿರಕ್ಕೆ ಮಾರುತ್ತಿದ್ದ. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಹಾಗೂ ಇತರರು ಆರೋಪಿ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು’ ಎಂದು ಸಿಸಿಬಿ ಪೊಲೀಸ್ ಮೂಲಗಳು ಹೇಳಿವೆ.

### ಕೇಂದ್ರ ಸಚಿವೆ ಶೋಭಾ ಹೆಸರಿನಲ್ಲಿ ವಂಚನೆ

**ಬೆಂಗಳೂರು:** ಕೇಂದ್ರ ಕೃಷಿ ಇಲಾಖೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೆಸರಿನಲ್ಲಿ ವ್ಯಕ್ತಿಯೊಬ್ಬ ಜನರಿಂದ ಲಕ್ಷಾಂತರ ರೂಪಾಯಿ ಪಡೆದು ವಂಚಿಸಿದ್ದು, ಈ ಸಂಬಂಧ ಸಂಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಸಚಿವರ ಆಪ್ತ ಸಹಾಯಕ ವರುಣ್ ಆದಿತ್ಯ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಪ್ರಕಾಶ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಶೋಭಾ ಅವರ ಆಪ್ತನೆಂದು ಹೇಳಿಕೊಂಡು ರಾಜ್ಯ, ಹೊರ ರಾಜ್ಯಗಳ ಹಲವರಿಗೆ ಕರೆ ಮಾಡಿದ್ದ ಆರೋಪಿ, ಆಮಿಷವೊಡ್ಡಿ ಲಕ್ಷಾಂತರ ರೂಪಾಯಿ ಹಣ ಪಡೆದು ವಂಚಿಸಿದ್ದಾನೆ. ಈ ಬಗ್ಗೆ ಜಮೀನ್ದಾರರೊಬ್ಬರು ಸಚಿವರಿಗೆ ಮಾಹಿತಿ ನೀಡಿರುವುದಾಗಿ ಗೊತ್ತಾಗಿದೆ. ವಂಚನೆಗೆ ಬಳಸಿದ್ದ ಮೊಬೈಲ್ ಸಂಖ್ಯೆ ಆಧರಿಸಿ ಆರೋಪಿ ಪತ್ತೆ ಮಾಡಲಾಗುತ್ತಿದೆ’ ಎಂದೂ ತಿಳಿಸಿದರು.

## ಕೊಲೆ: ಮತ್ತೊಬ್ಬ ಬಂಧನ

**ಬೆಂಗಳೂರು:** ಚಿಕ್ಕಪೇಟೆಯಲ್ಲಿರುವ ‘ದೀಪಂ ಎಲೆಕ್ಟ್ರಿಕಲ್ಸ್’ ಮಳಿಗೆ ಮಾಲೀಕ ಜುಗರಾಜ್ ಜೈನ್ (74) ಕೊಲೆ ಪ್ರಕರಣದ ಮತ್ತೊಬ್ಬ ಆರೋಪಿ ಓಂರಾಮ್ ದೇವಸಿ ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಜುಗರಾಜ್ ಅವರನ್ನು ಮೇ 24 ರಂದು ಕೊಲೆ ಮಾಡಲಾಗಿತ್ತು. ಈ ಸಂಬಂಧ ಕೆಲಸಗಾರ ಬಿಜರಾಮ್ (24), ಈತನ ಸ್ನೇಹಿತರಾದ ಪೂರನ್ ರಾಮ್ ದೇವಸಿ (26) ಹಾಗೂ ಮಹೇಂದ್ರ ದೇವಸಿಯನ್ನು (27) ಈ ಹಿಂದೆಯೇ ಬಂಧಿಸಲಾಗಿತ್ತು. ಇದೀಗ ಓಂರಾಮ್‌ನನ್ನು ಬಂಧಿಸಲಾಗಿದೆ. ಕೊಲೆ ಬಳಿಕ ಚಿನ್ನಾಭರಣ ಸಮೇತ ಪರಾರಿಯಾಗಿದ್ದ ಓಂರಾಮ್, ರಾಜಸ್ಥಾನ್‌ದಲ್ಲಿ ತಲೆಮರೆಸಿಕೊಂಡಿದ್ದ. ಆತನ ವಿಳಾಸ ಪತ್ತೆ ಮಾಡಿದ್ದ ವಿಶೇಷ ತಂಡ, ರಾಜಸ್ಥಾನಕ್ಕೆ ಹೋಗಿ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತಂದಿದೆ. ಈತನಿಂದ ಒಂದೂವರೆ ಕೆ.ಜಿ ಚಿನ್ನಾಭರಣ ಹಾಗೂ ₹ 16 ಲಕ್ಷ ನಗದು ಜಪ್ತಿ ಮಾಡಲಾಗಿದೆ’ ಎಂದೂ ತಿಳಿಸಿದರು.

## ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.



### ‘ರಸ್ತೆಯೇ ಕಸದ ತೊಟ್ಟಿ’

ನಂದಿನಿ ಲೇಔಟ್‌ನ ರಸ್ತೆಗಳು ಅಕ್ಷರಶಃ ಕಸದ ತೊಟ್ಟಿಯಂತಾಗಿದೆ. ರಸ್ತೆಯಲ್ಲಿ ನಡೆದಾಡಲೂ ಸಾಧ್ಯವಾಗದ ರೀತಿಯಲ್ಲಿ ಕಸ ಸುರಿಯಲಾಗುತ್ತಿದೆ. ಇವು ಕ್ರಮೇಣ ಕೊಳೆತು ದುರ್ನಾತ ಬೀರುತ್ತವೆ. ಇದರಿಂದ ರಸ್ತೆಯಲ್ಲಿ ಮೂಗು ಮುಚ್ಚಿಕೊಂಡೇ ಸಾಗುವ ಪರಿಸ್ಥಿತಿ ಇದೆ. ರಸ್ತೆಯಲ್ಲೆಲ್ಲ ತ್ಯಾಜ್ಯ ಹರಡಿ, ವಾಹನ ಸವಾರರು ಮತ್ತು ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ಇಲ್ಲಿ ಕಸ ಹಾಕದಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

**ದೀಪಿಕಾ,** ಸ್ಥಳೀಯ ನಿವಾಸಿ



### ‘ಪಾದಚಾರಿ ಮಾರ್ಗ ದುರಸ್ತಿಗೊಳಿಸಿ’

ಸಂಜಯನಗರ ಮುಖ್ಯ ರಸ್ತೆಯ ಬಳಿಯ ಪಾದಚಾರಿ ಮಾರ್ಗ ಸಂಪೂರ್ಣ ಹಾಳಾಗಿದೆ. ಇದರಿಂದ ಮಕ್ಕಳು, ವೃದ್ಧರು ಈ ಹಾದಿಯಲ್ಲಿ ಸಾಗುವುದೇ ಕಷ್ಟವಾಗಿದೆ. ಕೆಲದಿನಗಳ ಹಿಂದಷ್ಟೇ ಪಾದಚಾರಿ ಮಾರ್ಗವನ್ನು ನಿರ್ಮಿಸಲಾಗಿತ್ತು. ಆದರೆ, ಅದಾಗಲೇ ಸಿಮೆಂಟ್‌ನ ನೆಲಹಾಸುಗಳು ಕಿತ್ತು ಹೋಗಿವೆ. ತರಾತುರಿಯಲ್ಲಿ ಕಾಮಗಾರಿ ನಡೆಸಿರುವುದೇ ಇದಕ್ಕೆ ಕಾರಣ. ಪಾದಚಾರಿಗಳು ಬಿದ್ದು, ಗಾಯ ಮಾಡಿಕೊಂಡ ಘಟನೆಗಳು ಇಲ್ಲಿ ನಡೆದಿವೆ. ಪಾದಚಾರಿ ಮಾರ್ಗ ಹಾಳಾಗಿರುವುದರಿಂದ ಜನ ರಸ್ತೆಯಲ್ಲಿ ಸಾಗಬೇಕಾಗಿದೆ. ವಾಹನಗಳು ಅತಿ ವೇಗವಾಗಿ ಸಂಚರಿಸುವುದರಿಂದ ರಸ್ತೆ ಅಂಚಿನಲ್ಲಿ ಓಡಾಡುವುದಕ್ಕೂ ಭಯಪಡಬೇಕಾದ ಪರಿಸ್ಥಿತಿ ಇದೆ. ಪಾದಚಾರಿ ಮಾರ್ಗವನ್ನು ಶೀಘ್ರ ದುರಸ್ತಿ ಮಾಡಿ.

**ಸಚಿನ್ ಕುಮಾರ್,** ಸಂಜಯನಗರ ನಿವಾಸಿ



### ‘ಕೆರೆ ಪಕ್ಕದಲ್ಲಿ ಕಸದ ರಾಶಿ’

ಚಿಕ್ಕಬೇಗೂರು ಕೆರೆಯ ಸಮೀಪ ಕಸದ ರಾಶಿ ಹಾಕಲಾಗುತ್ತಿದೆ. ಈ ಕಸವು ರಸ್ತೆಯನ್ನೂ ಆವರಿಸಿಕೊಳ್ಳುತ್ತಿದೆ. ಕಸದ ದುರ್ವಾಸನೆಯೊಂದಿಗೆ ಬೀದಿ ನಾಯಿಗಳ ಕಾಟವೂ ಇಲ್ಲಿ ವಿಪರೀತವಾಗಿದೆ. ಈ ರಸ್ತೆಯಲ್ಲಿ ಸಾರ್ವಜನಿಕರು ಮೂಗು ಮುಚ್ಚಿಕೊಂಡೇ ಓಡಾಡಬೇಕು. ರಸ್ತೆಯ ಪಕ್ಕದಲ್ಲಿರುವ ತೋಡಿನಲ್ಲಿಯೂ ಪ್ಲಾಸ್ಟಿಕ್ ಹಾಗೂ ಬಾಟಲ್‌ಗಳ ತ್ಯಾಜ್ಯ ತುಂಬಿಕೊಂಡಿದೆ. ತ್ಯಾಜ್ಯ ವಿಲೇವಾರಿಯಾಗದ ಕಾರಣ ದುರ್ವಾಸನೆ ಹರಡಿ, ಬೇರೆ ಬೇರೆ ಸಮಸ್ಯೆಗೂ ಆಸ್ಪದ ನೀಡುತ್ತಿದೆ.

**ರವೀಂದ್ರ,** ಬೇಗೂರು



### ‘ಬಾಯಿ ತೆರೆದ ಚರಂಡಿ’

ಎಚ್ ಎಸ್ ಆರ್ ಬಡಾವಣೆಯ ಹೊಸಪಾಳ್ಯದ ನಾಲ್ಕನೇ ಕ್ರಾಸ್‌ನಲ್ಲಿ ಚರಂಡಿಯ ಮುಚ್ಚಳ ಬಾಯಿ ತೆರೆದಿದೆ. ಇದು ರಸ್ತೆ ಅಪಘಾತಕ್ಕೆ ಕಾರಣವಾಗುತ್ತಿದೆ. ಇದನ್ನು ಸರಿಪಡಿಸುವಂತೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಜನರ ಓಡಾಟಕ್ಕೂ ತೊಂದರೆಯಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.


**ಮಧು,** ಸ್ಥಳೀಯ ನಿವಾಸಿ

### ‘ರಸ್ತೆಗೆ ಡಾಂಬರು ಹಾಕಿ’



ವಿಜಯನಗರದ ಸುಬ್ಬಣ್ಣ ಗಾರ್ಡನ್ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಅಡ್ಡ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಬಿಬಿಎಂಪಿ ಮತ್ತು ಬೆಸ್ಕಾಂ ವಿವಿಧ ಕಾಮಗಾರಿಗಳ ಸಂಬಂಧ ಅಗೆದಿದ್ದ ರಸ್ತೆಯನ್ನು ಹಾಗೇ ಬಿಟ್ಟಿದೆ. ಇದರಿಂದ ಸಂಚಾರ ದುಸ್ತರವಾಗಿದ್ದು, ಎಲ್ಲೆಡೆ ದೂಳು ಆವರಿಸಿಕೊಳ್ಳುತ್ತಿದೆ. ಆಳವಾದ ತಗ್ಗು ಗುಂಡಿಗಳು ಕೂಡ ಸೃಷ್ಟಿಯಾಗಿವೆ. ಮಳೆ ಬಂದರೆ ಪರಿಸ್ಥಿತಿ ಭಯಾನಕವಾಗಿರುತ್ತದೆ. ತಗ್ಗು ಗುಂಡಿಗಳಲ್ಲಿ ನೀರು ನಿಂತು, ರಸ್ತೆ ಯಾವುದು, ಗುಂಡಿ ಯಾವುದು ಎಂಬುದು ಗೊತ್ತಾಗುವುದಿಲ್ಲ. ಹಲವರು ಗುಂಡಿಯಲ್ಲಿ ಬಿದ್ದು ಗಾಯಗೊಂಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಮಾತ್ರ ಈ ಕಡೆಗೆ ಗಮನ ಹರಿಸುವ ಗೋಜಿಗೆ ಹೋಗಿಲ್ಲ.

**ವೆಂಕಟೇಶ,** ವಿಜಯನಗರ



### ‘ಕಳಪೆ ಕಾಮಗಾರಿಯಿಂದ ಸಮಸ್ಯೆ’

ವಿಜಯನಗರದ ಕೈಲಾಸೇಶ್ವರ ದೇವಸ್ಥಾನದ ಎದುರಿನ ರಸ್ತೆಯು ಕಳಪೆ ಕಾಮಗಾರಿಯಿಂದಾಗಿ ಡಾಂಬರು ಕಿತ್ತು ಹೋಗಿದೆ. ಈ ರಸ್ತೆಯು ಚಂದ್ರ ಲೇಔಟ್ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುತ್ತದೆ. ಭೂಗತ ಕೇಬಲ್ ಅಳವಡಿಕೆ ಸಂಬಂಧ ರಸ್ತೆಯನ್ನು ಕೆಲ ತಿಂಗಳ ಹಿಂದೆ ಅಗೆಯಲಾಗಿತ್ತು. ಡಾಂಬರೀಕರಣ ಕಾಮಗಾರಿ ಸೂಕ್ತ ರೀತಿಯಲ್ಲಿ ನಡೆಯದಿದ್ದರಿಂದ ಕೆಲವೇ ದಿನಗಳಲ್ಲಿ ಕಿತ್ತು ಹೋಗಿದೆ. ಇದರಿಂದಾಗಿ ವಾಹನ ಸವಾರರು ಇಲ್ಲಿ ಸಂಚರಿಸಲು ಸಮಸ್ಯೆ ಎದುರಿಸಬೇಕಾಗಿದೆ. ಕೆಟ್ಟ ರಸ್ತೆಯಲ್ಲಿ ಬಿದ್ದು, ಹಲವರಿಗೆ ಗಾಯಗಳಾಗಿವೆ. ವಾಹನಗಳ ಸಂಚಾರ ಹೆಚ್ಚಾಗಿರುವ ಈ ರಸ್ತೆಯನ್ನು ಶೀಘ್ರ ಸರಿಪಡಿಸಬೇಕು.

**ನವೀನ್ ದೇಸಾಯಿ,** ಸ್ಥಳೀಯ ನಿವಾಸಿ



### ‘ಬೀಳುವ ಸ್ಥಿತಿಯಲ್ಲಿ ಮರ’

ಜೆ.ಪಿ. ನಗರದ 16ನೇ ಕ್ರಾಸ್‌ನಲ್ಲಿ ನಮ್ಮ ನಿವಾಸವಿದೆ. ಮನೆಯ ಎದುರು ಇರುವ ಬಿಬಿಎಂಪಿ ಉದ್ಯಾನವನದಲ್ಲಿ ಮರವೊಂದು ನೆಲಕ್ಕೆ ಉರುಳುವ ಸ್ಥಿತಿ ತಲುಪಿದೆ. ಈಗಾಗಲೇ ಬಿಬಿಎಂಪಿ ಅಧಿಕಾರಿಗಳ ಗಮನಕ್ಕೂ ತಂದಿದ್ದೇನೆ. ಆದರೆ, ಈವರೆಗೂ ಮರವನ್ನು ತೆರವುಗೊಳಿಸಿಲ್ಲ. ಮಳೆಗೆ ಈ ಮರವು ಯಾವಾಗ ಧರೆಗೆ ಉರುಳುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಅಧಿಕಾರಿಗಳು ಇದರ ಗಂಭೀರತೆ ಅರಿತುಕೊಳ್ಳಬೇಕು. ಅಹಿತಕರ ಘಟನೆ ಸಂಭವಿಸುವುದನ್ನು ತಪ್ಪಿಸಲು ಕೂಡಲೇ ಮರವನ್ನು ತೆರವುಗೊಳಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸಬೇಕು.

**ಬಿ.ಎಸ್. ಕುಮಾರಸ್ವಾಮಿ,** ಜೆ.ಪಿ.ನಗರ

### ಬಿಜೆಪಿ ಮುಖಂಡ ವಿಜಯವರ್ಗೀಯ ಹೇಳಿಕೆಗೆ ಭಾರಿ ಆಕ್ರೋಶ; ಕ್ಷಮಾಪಣೆಗೆ ಪಟ್ಟು

# ‘ಅಗ್ನಿವೀರರಿಗೆ ಬಿಜೆಪಿ ಕಚೇರಿಯಲ್ಲಿ ಗಾರ್ಡ್ ಕೆಲಸ’

ಇಂದೋರ್ (ಪಿಟಿಐ): ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯವರ್ಗೀಯ ಅವರು ‘ಅಗ್ನಿಪಥ’ ಯೋಜನೆಯನ್ನು ಸಮರ್ಥಿಸಿಕೊಳ್ಳುವ ಭರದಲ್ಲಿ ನೀಡಿದ ಹೇಳಿಕೆಗೆ ವಿವಿಧ ವಲಯಗಳಿಂದ ಭಾರಿ ವಿರೋಧ ವ್ಯಕ್ತವಾಗಿದೆ.

‘ಬಿಜೆಪಿ ಕಚೇರಿಯಲ್ಲಿ ಭದ್ರತಾ ಸಿಬ್ಬಂದಿ ನೇಮಕ ಮಾಡಿಕೊಳ್ಳುವ ಪ್ರಸಂಗ ಬಂದರೆ, ಅಗ್ನಿವೀರರಿಗೆ ನಾನು ಆದ್ಯತೆ ನೀಡುತ್ತೇನೆ’ ಎಂದು ವಿಜಯವರ್ಗೀಯ ಅವರು ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಭಾನುವಾರ ಹೇಳಿದರು. ಅವರು ನೀಡಿದ ಈ ಹೇಳಿಕೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

‘ಅಗ್ನಿವೀರರಿಗೆ ಬಿಜೆಪಿ ಕಚೇರಿಯಲ್ಲಿ ‘ಸೆಕ್ಯುರಿಟಿ ಗಾರ್ಡ್’ ಕೆಲಸ ನೀಡುವುದಾಗಿ ವಿಜಯವರ್ಗೀಯ ಹೇಳಿದ್ದಾರೆ. 2019ರಲ್ಲಿ ಬಿಜೆಪಿ ಆರಂಭಿಸಿದ್ದ ‘ನಾನೂ ಚೌಕಿದಾರ’ ಅಭಿಯಾನದ ಅರ್ಥ ಏನು ಎಂಬುದು ಈಗ ಸ್ಪಷ್ಟಗೊಂಡಿದೆ’ ಎಂದು ಕಾಂಗ್ರೆಸ್ ಮುಖಂಡ ಜೈರಾಂ ರಮೇಶ್ ಹೇಳಿದ್ದಾರೆ.

ಬಿಜೆಪಿ ಮುಖಂಡ ವರುಣ್ ಗಾಂಧಿ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸೇರಿದಂತೆ ರಾಜಕೀಯ ಮುಖಂಡರು ಈ ಹೇಳಿಕೆಯನ್ನು ಖಂಡಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ವಿಜಯವರ್ಗೀಯ ವಿರುದ್ಧ ತೀವ್ರ ಆಕ್ರೋಶ ವ್ಯಕ್ತವಾಗಿದೆ. ರಕ್ಷಣಾ ಪಡೆಗಳನ್ನು ಅಪಮಾನಿಸಿದ ವಿಜಯವರ್ಗೀಯ ಕ್ಷಮೆ ಕೇಳಬೇಕು ಎಂದು ಮಧ್ಯಪ್ರದೇಶ ಕಾಂಗ್ರೆಸ್ ಘಟಕ ಆಗ್ರಹಿಸಿದೆ.

ತಮ್ಮ ಹೇಳಿಕೆಗೆ ವ್ಯಕ್ತವಾದ ತೀವ್ರ ಟೀಕೆಗೆ ಸ್ಪಷ್ಟನೆ ನೀಡಲು ಯತ್ನಿಸಿದ ವಿಜಯವರ್ಗೀಯ ಅವರು, ಇದರ ಹಿಂದೆ ಟೂಲ್‌ಕಿಟ್ ತಂಡ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ. ‘ಅಗ್ನಿವೀರರು ತಮ್ಮ ಸೇವಾವಧಿ ಪೂರ್ಣಗೊಳಿಸಿದ ಬಳಿಕ ಅವರ ಸೇವೆಯನ್ನು ಯಾವ ಕ್ಷೇತ್ರದಲ್ಲಿ ಬೇಕಾದರೂ ಬಳಸಿಕೊಳ್ಳಬಹುದು ಎಂಬ ಅರ್ಥದಲ್ಲಿ ನಾನು ಹೇಳಿಕೆ ನೀಡಿದ್ದೆ’ ಎಂದು ಸ್ಪಷ್ಟನೆ ನೀಡಲು ಯತ್ನಿಸಿದ್ದಾರೆ.

‘ನಾಲ್ಕು ವರ್ಷಗಳ ಸೇವಾವಧಿ ಪೂರ್ಣಗೊಳಿಸಿ ಹೊರಬರುವ ಅಗ್ನಿವೀರರಿಗೆ ₹11 ಲಕ್ಷ ಹಣದ ಜೊತೆಗೆ ಅಗ್ನಿವೀರ ಎಂಬ ಪಟ್ಟ ಸಿಗುತ್ತದೆ. ತರಬೇತಿಯ ಅವಧಿಯಲ್ಲಿ ಅಗ್ನಿವೀರರಲ್ಲಿ ಶಿಸ್ತು, ವಿಧೇಯತೆ ಮೊದಲಾದ ಗುಣಗಳು ಬೆಳೆಯುತ್ತವೆ. ಇದು ಸೇನಾ ತರಬೇತಿಯ ಭಾಗವೂ ಹೌದು. ಸೇನಾ ತರಬೇತಿಯಲ್ಲಿ ಶಿಸ್ತಿಗೆ ಮೊದಲ ಸ್ಥಾನವಿದ್ದರೆ, ಆದೇಶಗಳನ್ನು ಪಾಲಿಸುವುದು ಎರಡನೇ ಕರ್ತವ್ಯವಾಗಿರಲಿದೆ’ ಎಂದು ವಿಜಯವರ್ಗೀಯ ಸುದ್ದಿಗೋಷ್ಠಿಯಲ್ಲಿ ವಿವರಿಸಿದ್ದಾರೆ.

‘ಇದು ದೇಶದ ನಿರುದ್ಯೋಗಿ ಯುವಕರು ಹಾಗೂ ಸೇನಾಪಡೆಯ ಶೌರ್ಯಕ್ಕೆ ಮಾಡಿದ ದೊಡ್ಡ ಅಪಮಾನ. ಬಿಜೆಪಿ ಕ್ಷಮೆ ಕೇಳಬೇಕು’ ಎಂದು ಮಧ್ಯಪ್ರದೇಶ ಕಾಂಗ್ರೆಸ್ ಘಟಕದ ಮಾಧ್ಯಮ ಮುಖ್ಯಸ್ಥ ಕೆ.ಕೆ. ಮಿಶ್ರಾ ಟ್ವೀಟ್ ಮಾಡಿದ್ದಾರೆ.



ಅಗ್ನಿಪಥ ಯೋಜನೆಯ ವಿರುದ್ಧದ ಪ್ರತಿಭಟನೆಯಿಂದಾಗಿ ಹಲವು ರೈಲುಗಳು ರದ್ದಾಗಿವೆ. ಹಾಗಾಗಿ, ಹಲವು ಪ್ರಯಾಣಿಕರು ಪಟ್ನಾ ರೈಲು ನಿಲ್ದಾಣದಲ್ಲಿಯೇ ತಂಗಿದ್ದ ದೃಶ್ಯ ಭಾನುವಾರ ಕಂಡು ಬಂತು ಪಿಟಿಐ ಚಿತ್ರ

### ‘ಡ್ರೈವರ್, ಪ್ಲಂಬರ್ ಕೆಲಸ’

ಅಗ್ನಿವೀರರು ಸೇನೆಯಿಂದ ಹೊರಬಂದ ಬಳಿಕ ಅವರಿಗೆ ವಾಹನ ಚಾಲನೆ, ಎಲೆಕ್ಟ್ರಿಷಿಯನ್, ಪ್ಲಂಬಿಂಗ್ ಹಾಗೂ ಕ್ಷೌರಿಕರ ತರಬೇತಿ ನೀಡಲಾಗುವುದು ಎಂದು ಕೇಂದ್ರ ಸಚಿವ ಜಿ. ಕಿಶನ್ ರೆಡ್ಡಿ ಅವರು ಹೇಳಿಕೆ ನೀಡಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಸುದ್ದಿಗೋಷ್ಠಿಯಲ್ಲಿ ಅವರು ಈ ಬಗ್ಗೆ ಮಾತನಾಡಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಪ್ರತಿಪಕ್ಷಗಳು ಈ ಹೇಳಿಕೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿವೆ. ‘ಸೇನಾಪಡೆಗಳು ಈಗ ತರಬೇತಿ ಕೇಂದ್ರಗಳಾಗುತ್ತಿವೆ. ಚಾಲಕರು, ಎಲೆಕ್ಟ್ರಿಷಿಯನ್ ಮೊದಲಾದ ಕೌಶಲ ತರಬೇತಿ ಪಡೆದ ಕಾರ್ಮಿಕರನ್ನು ದೇಶಕ್ಕೆ ನೀಡಲಾಗುತ್ತದೆ. ಇದು ಹೊಸ ಸಾಧನೆ’ ಎಂದು ಶಿವಸೇನಾ ನಾಯಕಿ ಹಾಗೂ ಸಂಸದೆ ಪ್ರಿಯಾಂಕಾ ಚತುರ್ವೇದಿ ಹೇಳಿದ್ದಾರೆ.

### ‘ಅಗ್ನಿಪಥ’ ರದ್ದತಿ ಪ್ರಶ್ನೆಯೇ ಇಲ್ಲ

ಒಂದನೇ ಪುಟದಿಂದ

ವರ್ಷಗಳ ಚಿಂತನೆ ಮತ್ತು ವಿವಿಧ ದೇಶಗಳಲ್ಲಿ ಇರುವ ಸೈನಿಕರ ಕರ್ತವ್ಯದ ಅವಧಿ ಬಗ್ಗೆ ಅಧ್ಯಯನ ನಡೆಸಿದ ಬಳಿಕವೇ ಈ ಯೋಜನೆಯನ್ನು ಪ್ರಕಟಿಸಲಾಗಿದೆ. 1999ರ ಕಾರ್ಗಿಲ್ ಯುದ್ಧದ ಬಗ್ಗೆ ಅಧ್ಯಯನ ನಡೆಸಿದ್ದ ಉನ್ನತಾಧಿಕಾರ ಸಮಿತಿ ಕೂಡ ಇಂತಹದೇ ಸಲಹೆ ನೀಡಿತ್ತು ಎಂದು ಪುರಿ ತಿಳಿಸಿದ್ದಾರೆ.

ಭೂಸೇನೆ, ವಾಯುಪಡೆ ಮತ್ತು ನೌಕಾಪಡೆಯ ಮುಖ್ಯಸ್ಥರ ಜತೆಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಮಾತುಕತೆ ನಡೆಸಿದ ಕೆಲವೇ ತಾಸುಗಳಲ್ಲಿ ಸೇನೆಯ ಮೂರೂ ವಿಭಾಗಗಳ ಮಾಧ್ಯಮಗೋಷ್ಠಿ ನಡೆದಿದೆ.

ಸದುದ್ದೇಶದಿಂದ ತರುವ ಹಲವು ಯೋಜನೆಗಳು ರಾಜಕೀಯ ಬಣ್ಣ ಪಡೆಯುತ್ತಿವೆ. ಮಾಧ್ಯಮಗಳೂ ಟಿಆರ್‌ಪಿಗಾಗಿ ಇವುಗಳಲ್ಲಿ ತೊಡಗಿಸಿಕೊಂಡಿರುವುದು ದುರದೃಷ್ಟ

**ನರೇಂದ್ರ ಮೋದಿ,** ಪ್ರಧಾನಿ

ಭಾರತೀಯ ಸೇನೆಯು ತಾಯಿ ಭಾರತಿಯ ಸೇವೆಗೆ ಇರುವುದು. ಅದು ಒಂದು ಕೆಲಸವಲ್ಲ. ನಮ್ಮ ಯೋಧರ ಪರಾಕ್ರಮವನ್ನು ಪದಗಳಲ್ಲಿ ವರ್ಣಿಸಲಾಗದು. ಅವರ ಶೌರ್ಯ ಎಲ್ಲೆಡೆ ಪ್ರತಿಧ್ವನಿಸುತ್ತದೆ

**ವರುಣ್ ಗಾಂಧಿ,** ಬಿಜೆಪಿ ಸಂಸದ

ಯೋಧರು, ಯುವಜನತೆಗೆ ಈ ಮಟ್ಟಕ್ಕೆ ಅಗೌರವ ಸರಿಯಲ್ಲ. ದೇಶಸೇವೆ ಮಾಡಲು ಯುವಕರು ದೈಹಿಕ ಅಭ್ಯಾಸ ನಡೆಸಿ, ಪರೀಕ್ಷೆ ಬರೆಯುತ್ತಾರೆಯೇ ಹೊರತು ಬಿಜೆಪಿ ಕಚೇರಿಯ ಹೊರಗಡೆ ಕಾವಲು ಕಾಯುವುದಕ್ಕಲ್ಲ

**ಅರವಿಂದ ಕೇಜ್ರಿವಾಲ್,** ದೆಹಲಿ ಮುಖ್ಯಮಂತ್ರಿ

ಉದ್ಯೋಗ ನೀಡುವ ಹುಸಿ ಭರವಸೆಯನ್ನು ಪದೇ ಪದೇ ನೀಡುವ ಮೂಲಕ ಯುವ ಜನರು ನಿರುದ್ಯೋಗದ ಅಗ್ನಿಪಥದಲ್ಲಿ ನಡೆಯುವಂತೆ ಮಾಡಲಾಗಿದೆ. 8 ವರ್ಷಗಳಲ್ಲಿ 16 ಕೋಟಿ ಉದ್ಯೋಗ ಸೃಷ್ಟಿಯಾಗಬೇಕಿತ್ತು. ಆದರೆ, ಯುವ ಜನರಿಗೆ ಪಕೋಡ ಮಾಡಲು ಕಲಿಸಲಾಗಿದೆ

**ರಾಹುಲ್ ಗಾಂಧಿ,** ಕಾಂಗ್ರೆಸ್ ಸಂಸದ

ಬಡತನ, ಹಣದುಬ್ಬರ, ನಿರುದ್ಯೋಗ ಮತ್ತು ಉದ್ವಿಗ್ನತೆಯ ಅಗ್ನಿಪಥದಲ್ಲಿ ಯುವ ಜನರು ನಡೆಯುವಂತೆ ಮಾಡಲಾಗಿದೆ. ಅಗ್ನಿಪಥ ಯೋಜನೆಯು ಅವರು ನಿರಾಶೆ ಮತ್ತು ಹತಾಶೆಗೊಳ್ಳುವಂತೆ ಮಾಡಿದೆ

**ಮಾಯಾವತಿ,** ಬಿಎಸ್‌ಪಿ ಮುಖ್ಯಸ್ಥೆ

ಇದು (ಅಗ್ನಿಪಥ) ವಿದ್ಯಾವಂತ ಯುವಜನರಿಗಾಗಿ ರೂಪಿಸಿದ ನರೇಗಾದಂತಹ ಉದ್ಯೋಗ ಖಾತರಿ ಯೋಜನೆಯೇ ಅಥವಾ ಇದರ ಹಿಂದೆ ಆರ್‌ಎಸ್‌ಎಸ್‌ನ ಗೋಪ್ಯ ಕಾರ್ಯಸೂಚಿ ಇದೆಯೇ?

**ತೇಜಸ್ವಿ ಯಾದವ್,** ಆರ್‌ಜೆಡಿ ನಾಯಕ

### ಕಾಂಗ್ರೆಸ್ ಸತ್ಯಾಗ್ರಹ

‘ನಕಲಿ ದೇಶಭಕ್ತರು ಯಾರೆಂದು ಯುವಜನರು ತಿಳಿದುಕೊಳ್ಳಬೇಕು’ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಭಾನುವಾರ ಹೇಳಿದರು. ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆಸಿದ ಸತ್ಯಾಗ್ರಹದಲ್ಲಿ ಮಾತನಾಡಿದ ಅವರು, ‘ನಿಮಗಿಂತ ಉತ್ತಮ ದೇಶಭಕ್ತರು ಇಲ್ಲ. ಕಣ್ಣು ತೆರೆಯಿರಿ, ನಕಲಿ ದೇಶಭಕ್ತರು ಮತ್ತು ನಕಲಿ ರಾಷ್ಟ್ರೀಯವಾದಿಗಳು ಯಾರು ಎಂದು ತಿಳಿಯಿರಿ. ಅಗ್ನಿಪಥದ ವಿರುದ್ಧದ ಹೋರಾಟದಲ್ಲಿ ಇಡೀ ದೇಶ ಮತ್ತು ಕಾಂಗ್ರೆಸ್ ನಿಮ್ಮ ಜೊತೆ ಇದೆ’ ಎಂದರು.

ಕವಿ ಹರಿವಂಶರಾಯ್ ಬಚ್ಚನ್ ಅವರ ಹಿಂದಿ ಪದ್ಯ ‘ಅಗ್ನಿಪಥ್’ದ ಕೆಲ ಸಾಲುಗಳನ್ನು ಅವರು ಓದಿದರು. ಅಖಿಲ ಭಾರತ ಪ್ರದೇಶ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಪಕ್ಷದ ಹಿರಿಯ ನಾಯಕರಾದ ಅಧೀರ್ ರಂಜನ್ ಚೌಧರಿ, ಹರೀಶ್ ರಾವತ್, ಜೈರಾಂ ರಮೇಶ್, ಸಲ್ಮಾನ್ ಖುರ್ಷಿದ್, ಸಚಿನ್ ಪೈಲಟ್, ದೀಪೇಂದರ್ ಹೂಡ, ಅಜಯ್ ಮಾಕನ್ ಮುಂತಾದವರು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಯೋಜನೆ ವಿರೋಧಿಸಿ ಸೋಮವಾರವೂ ಪಕ್ಷದ ಪ್ರತಿಭಟನೆ ಮುಂದುವರಿಯಲಿದೆ.

## ಸುದ್ದಿ 2 ನಿಮಿಷ

### ಧರ್ಮದ ಬಗ್ಗೆ ಪ್ರಚೋದನಕಾರಿ ಹೇಳಿಕೆ ಬೇಡ: ಸ್ಪೀಕರ್ ಓಂ ಬಿರ್ಲಾ

ನವದೆಹಲಿ (ಪಿಟಿಐ): ‘ಸಂವಿಧಾನದ ಪ್ರಕಾರ ಎಲ್ಲ ಧರ್ಮಗಳು ಸಮಾನವಾದುದು. ಸಂಸದರು ಯಾವುದೇ ಧರ್ಮ ಕುರಿತಂತೆ ಪ್ರಚೋದನಕಾರಿ ಹೇಳಿಕೆಯನ್ನು ನೀಡದೇ ಸಂಸತ್ತಿನ ಘನತೆಯನ್ನು ಎತ್ತಿಹಿಡಿಯಬೇಕು’ ಎಂದು ಸ್ಪೀಕರ್ ಓಂ ಬಿರ್ಲಾ ಹೇಳಿದ್ದಾರೆ.

ಸ್ಪೀಕರ್ ಆಗಿ ಭಾನುವಾರ ಮೂರು ವರ್ಷದ ಅಧಿಕಾರವಧಿ ಪೂರೈಸಿದ ಅವರು, ‘ಈ ಅವಧಿಯಲ್ಲಿ ನೀಡಿದ ಸಹಕಾರಕ್ಕಾಗಿ ಎಲ್ಲ ಪಕ್ಷಗಳಿಗೂ ಕೃತಜ್ಞತೆ ಸಲ್ಲುತ್ತವೆ. ಈ ಅವಧಿಯಲ್ಲಿ ಸಂಸತ್ತಿನ ಉತ್ಪಾದಕತೆ ಪ್ರಮಾಣ ಶೇ 100ಕ್ಕಿಂತ ಹೆಚ್ಚಿತ್ತು’ ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಅವರು ಹೇಳಿದರು.

‘ ಸಂಸದರು ಕಲಾಪದ ಅವಧಿಯಲ್ಲಿ ಅನಗತ್ಯವಾಗಿ ಕೂಗಾಡಬಾರದು. ವ್ಯಂಗ್ಯ, ಪರಸ್ಪರ ಕಾಲೆಳೆಯುವಿಕೆ ಸ್ವೀಕಾರ್ಹ. ಆದರೆ, ಅನಗತ್ಯವಾಗಿ ಕೂಗಾಡುವುದು, ಭಾಷಣಕ್ಕೆ ಅಡ್ಡಿಪಡಿಸುವುದು ಸರಿಯಲ್ಲ’ ಎಂದರು.

ಸಂವಿಧಾನದ ಪ್ರಕಾರ, ಎಲ್ಲ ಧರ್ಮಗಳು ಸಮಾನವಾದುದು. ಈ ಸಂಬಂಧ ಪ್ರಚೋದನಾಕಾರಿ ಹೇಳಿಕೆಯನ್ನು ನೀಡುವುದು ಸಲ್ಲದು ಎಂದು ಪ್ರತಿಪಾದಿಸಿದರು.



### ಪ್ರವಾದಿ ಮಹಮ್ಮದ್ ವಿರುದ್ಧ ಹೇಳಿಕೆ ಖಂಡಿಸಿ ಪ್ರತಿಭಟನೆ: 415 ಜನರ ಬಂಧನ

ಲಖನೌ (ಪಿಟಿಐ): ಪ್ರವಾದಿ ಮಹಮ್ಮದ್ ವಿರುದ್ಧ ಬಿಜೆಪಿ ನಾಯಕಿ ನೂಪುರ್ ಶರ್ಮಾ ನೀಡಿದ ಹೇಳಿಕೆ ಖಂಡಿಸಿ ವಿವಿಧೆಡೆ ನಡೆದ ಹಿಂಸಾತ್ಮಕ ಪ್ರತಿಭಟನೆಗೆ ಸಂಬಂಧಿಸಿದಂತೆ ಈ ವರೆಗೆ 20 ಪ್ರಕರಣ ದಾಖಲಿಸಿ, 415 ಜನರನ್ನು ಉತ್ತರ ಪ್ರದೇಶ ಪೊಲೀಸರು ಬಂಧಿಸಿದ್ದಾರೆ.

ಜೂನ್ 3 ರಂದು ಕಾನ್ಪುರ ಮತ್ತು ಜೂನ್ 10 ರಂದು ಇತರೆ ಒಂಬತ್ತು ಜಿಲ್ಲೆಗಳಲ್ಲಿ ಹಿಂಸಾಚಾರ ಭುಗಿಲೆದ್ದಿತು. ಕಾನ್ಪುರದಲ್ಲಿ ನಡೆದ ಹಿಂಸಾಚಾರದಲ್ಲಿ 20 ಪೊಲೀಸ್ ಸಿಬ್ಬಂದಿ ಸೇರಿದಂತೆ 40 ಜನರು ಗಾಯಗೊಂಡಿದ್ದರು.

ಪ್ರಯಾಗ್‌ರಾಜ್‌ನಲ್ಲಿ 97, ಸಹರಾನ್‌ಪುರದಲ್ಲಿ 85, ಕಾನ್ಪುರದಲ್ಲಿ 58, ಅಂಬೇಡ್ಕರ್ ನಗರ 41, ಮೊರಾದಾಬಾದ್ 40, ಹತ್ರಾಸ್ 35, ಫಿರೋಜಾಬಾದ್ 20, ಖೇರಿ 8 ಮತ್ತು ಜಲೌನ್‌ನಲ್ಲಿ ಐವರನ್ನು ಬಂಧಿಸಲಾಗಿದೆ ಎಂದು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ತಿಳಿಸಿದರು.

ಪ್ರಯಾಗ್‌ರಾಜ್‌ನಲ್ಲಿ ಗುಂಪೊಂದು ಕೆಲ ದ್ವಿಚಕ್ರ ವಾಹನ ಮತ್ತು ಗಾಡಿಗಳಿಗೆ ಬೆಂಕಿ ಹಚ್ಚಿ, ಪೊಲೀಸ್ ವಾಹನ ಸುಟ್ಟು ಹಾಕಲು ಪ್ರಯತ್ನಿಸಿತು. ಅಧಿಕಾರಿಗಳ ಪ್ರಕಾರ ಹಿಂಸಾಚಾರದಲ್ಲಿ ಒಬ್ಬ ಪೊಲೀಸ್ ಗಾಯಗೊಂಡಿದ್ದಾರೆ.

# ದೆಹಲಿಯ ಆಧುನೀಕರಣ: ಮೋದಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಕೈಗೊಳ್ಳುತ್ತಿರುವ ಆಧುನಿಕ ಅಭಿವೃದ್ಧಿ ಕಾರ್ಯಗಳ ಮೂಲಕ ದೆಹಲಿಯ ರೂಪವನ್ನು ಬದಲಾಯಿಸುತ್ತಿದ್ದು, ರಾಷ್ಟ್ರ ರಾಜಧಾನಿಯನ್ನು ಆಧುನೀಕರಿಸುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಪ್ರತಿಪಾದಿಸಿದ್ದಾರೆ.

ಪ್ರಗತಿ ಮೈದಾನ್ ಇಂಟಿಗ್ರೇಟೆಡ್ ಟ್ರಾನ್ಸಿಟ್ ಕಾರಿಡಾರ್ ಯೋಜನೆಯ ಮುಖ್ಯ ಸುರಂಗ ಮಾರ್ಗ ಮತ್ತು ಐದು ಅಂಡರ್‌ಪಾಸ್‌ಗಳನ್ನು ಉದ್ಘಾಟಿಸಿದ ನಂತರ, ‘ಕೇಂದ್ರ ಸರ್ಕಾರದ ಮೂಲಕ ದೆಹಲಿಗೆ ಉತ್ತಮ ಮೂಲಭೂತ ಸೌಕರ್ಯಗಳು ದೊರಕಿವೆ. ಈ ಯೋಜನೆಯು 55 ಲಕ್ಷ ಲೀಟರ್ ಇಂಧನವನ್ನು ಉಳಿಸಲು ಮತ್ತು ಮಾಲಿನ್ಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ’ ಎಂದು ಹೇಳಿದರು.

ಸದ್ಯ ನಿರ್ಮಾಣವಾಗುತ್ತಿರುವ 1.6 ಕಿಮೀ ಉದ್ದದ ಸುರಂಗ ಮಾರ್ಗವು ದೆಹಲಿಯಲ್ಲೇ ಮೊದಲನೆಯದು. ದೆಹಲಿಯ ಪೂರ್ವ ಭಾಗ, ನೋಯ್ಡಾ ಮತ್ತು ಗಾಜಿಯಾಬಾದ್‌ನಿಂದ ಇಂಡಿಯಾ ಗೇಟ್ ಹಾಗೂ ದೆಹಲಿಯ ಇತರ ಪ್ರದೇಶಗಳಿಗೆ ಪ್ರಯಾಣಿಸುವ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುತ್ತದೆ.

**‘₹200 ಉಳಿಸಿದರೆ ಚರ್ಚೆಯಾಗುವುದಿಲ್ಲ’:** 'ಸಮಯವೇ ಹಣ, ಸರ್ಕಾರವು ಜನರಿಗೆ 100 ರೂಪಾಯಿ ಘೋಷಿಸಿದರೆ, ಅದು ಹೆಡ್‌ಲೈನ್ಸ್ ಆಗುತ್ತದೆ. ಆದರೆ, 200 ರೂಪಾಯಿ ಉಳಿಸಿದರೆ, ಅದರ ಬಗ್ಗೆ ಹೆಚ್ಚು ಚರ್ಚೆಯೇ ಆಗುವುದಿಲ್ಲ' ಎಂದರು.

ಸುರಂಗ ಮತ್ತು ಅಂಡರ್‌ಪಾಸ್‌ಗಳಲ್ಲಿ ಮೂಡಿಸಿರುವ ಚಿತ್ರಕಲೆಯ ಚಿತ್ತಾರದ ಕುರಿತು ಪ್ರಸ್ತಾಪಿಸಿದ ಅವರು, ಭಾನುವಾರದಂದು ಕೆಲವು ಗಂಟೆಗಳ ಕಾಲ ವಾಹನಗಳ ಸಂಚಾರವನ್ನು ನಿಲ್ಲಿಸಬೇಕು. ಆ ಮೂಲಕ ಜನರು ಇಲ್ಲಿರುವ ಕಲಾಕೃತಿಗಳನ್ನು ನೋಡುತ್ತ ಓಡಾಡಲು ಅವಕಾಶ ಮಾಡಬೇಕು ಎಂದು ಸಲಹೆ ನೀಡಿದರು.

### ಸ್ವಚ್ಛ ಭಾರತ ಸಂದೇಶ, ದೆಹಲಿಯಲ್ಲಿ ಕಸ ಹೆಕ್ಕಿದ ಪ್ರಧಾನಿ

ನವದೆಹಲಿ: ಭಾರತೀಯ ವ್ಯಾಪಾರ ಉತ್ತೇಜನಾ ಸಂಘಟನೆಯ (ಐಟಿಪಿಒ), ಹೊಸದಾಗಿ ಉದ್ಘಾಟನೆಗೊಂಡಿರುವ ಸುರಂಗದ ತಪಾಸಣೆಗೆ ತೆರಳಿದ್ದ ವೇಳೆ ಪ್ರಧಾನಿ ನರೇಂದ್ರ ಮೋದಿ ಕಸ ಹೆಕ್ಕಿರುವ ವಿಡಿಯೊ ಈಗ ಸಾಮಾಜಿಕ ಜಾಲತಾಣಗಳಲ್ಲಿ ಗಮನ ಸೆಳೆದಿದೆ.

‘ಐಟಿಪಿಒ ಸುರಂಗದ ಉದ್ಘಾಟನೆ ವೇಳೆಯೂ ಪ್ರಧಾನಿ ನರೇಂದ್ರ ಮೋದಿ ಅವರು ಕಸವನ್ನು ಹೆಕ್ಕುವ ಮೂಲಕ ಸ್ವಚ್ಛತೆಯನ್ನು ಕಾಪಾಡಿದ್ದಾರೆ’ ಎಂದು ಕೇಂದ್ರ ಸಚಿವ ಪೀಯೂಷ್ ಗೋಯಲ್ ಟ್ವೀಟ್ ಮಾಡಿದ್ದಾರೆ. ಜತೆಗೆ ಪ್ರಧಾನಿ ಕಸ ಹೆಕ್ಕುತ್ತಿರುವ ವಿಡಿಯೊವನ್ನೂ ಪೋಸ್ಟ್ ಮಾಡಿದ್ದಾರೆ.

‘ಪ್ರಗತಿ ಮೈದಾನ್ ಇಂಟಿಗ್ರೇಟೆಡ್ ಟ್ರಾನ್ಸಿಟ್ ಕಾರಿಡಾರ್’ಗೆ ಚಾಲನೆ ನೀಡಿ ಮಾತನಾಡಿದ ಮೋದಿ, ‘ಈ ಯೋಜನೆಯು ಕೋವಿಡ್ ಸೇರಿದಂತೆ ಹಲವಾರು ಅಡೆತಡೆಗಳನ್ನು ಎದುರಿಸಿತು. ಇಂಥ ಯೋಜನೆಗಳ ವಿರುದ್ಧ ನ್ಯಾಯಾಂಗದ ಬಾಗಿಲು ತಟ್ಟುವ, ಯೋಜನೆಗಳ ಪ್ರಕ್ರಿಯೆಗೆ ಅಡ್ಡಿಪಡಿಸುವ ಜನರಿಗೂ ನಮ್ಮ ದೇಶದಲ್ಲಿ ಕೊರತೆಯಿಲ್ಲ. ಆದರೂ ನಾವು ಸಾಧಿಸಿದ್ದೇವೆ’ ಎಂದು ಹೇಳಿದ್ದಾರೆ.

ಐಟಿಪಿಒ ಕೇಂದ್ರ ದೆಹಲಿಯ ಪ್ರಗತಿ ಮೈದಾನ ಪ್ರದೇಶದಲ್ಲಿದೆ. ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಧೀನದಲ್ಲಿರುವ ಐಟಿಪಿಒ, ವಿವಿಧ ಕ್ಷೇತ್ರಗಳಲ್ಲಿ, ವಿಶೇಷವಾಗಿ ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ದೇಶವು ಸಾಧಿಸಿದ ಪ್ರಗತಿಯನ್ನು ಅನಾವರಣಗೊಳಿಸಿದೆ.

# ಎನ್‌ಕೌಂಟರ್: ನಾಲ್ವರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಪ್ವಾರ ಮತ್ತು ಕುಲ್ಗಾಂನಲ್ಲಿ ಭಾನುವಾರ ಭದ್ರತಾ ಪಡೆಗಳೊಂದಿಗೆ ನಡೆದ ಪ್ರತ್ಯೇಕ ಎನ್‌ಕೌಂಟರ್‌ನಲ್ಲಿ ನಾಲ್ವರು ಉಗ್ರರು ಹತ್ಯೆಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕುಪ್ವಾರದಲ್ಲಿ ಇಬ್ಬರು ಮತ್ತು ಕುಲ್ಗಾಂನಲ್ಲಿ ಇಬ್ಬರು ಉಗ್ರರು ಹತರಾಗಿದ್ದಾರೆ. ಇವರಲ್ಲಿ ಒಬ್ಬ ಎಲ್‌ಇಟಿ ಸಂಘಟನೆಗೆ ಸೇರಿದ್ದಾನೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಉತ್ತರ ಕಾಶ್ಮೀರದ ಲೋಲಾಬ್ ಪ್ರದೇಶದಲ್ಲಿ ಬಂಧಿತ ಭಯೋತ್ಪಾದಕ ಶೌಕತ್ ಅಹ್ಮದ್ ಶೇಖ್ ನೀಡಿದ ಮಾಹಿತಿ ಆಧರಿಸಿ ಭದ್ರತಾ ಪಡೆಗಳು ಕಾರ್ಯಾಚರಣೆ ಪ್ರಾರಂಭಿಸಿದ ನಂತರ ಕುಪ್ವಾರದಲ್ಲಿ ಎನ್‌ಕೌಂಟರ್ ಪ್ರಾರಂಭವಾಯಿತು.

# ರಾಷ್ಟ್ರಪತಿ ಚುನಾವಣೆಗೆ ಅಭ್ಯರ್ಥಿ ಆಯ್ಕೆ: ವಿರೋಧ ಪಕ್ಷಗಳ ಸಭೆ ನಾಳೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರಪತಿ ಚುನಾವಣೆಗೆ ಸ್ಪರ್ಧಿಸಲು ನ್ಯಾಷನಲ್ ಕಾನ್ಫರೆನ್ಸ್ ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ ಅವರು ನಿರಾಕರಿಸಿದ ನಂತರ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳ ಪಾಳಯದಲ್ಲಿ ಗೋಪಾಲಕೃಷ್ಣ ಗಾಂಧಿ ಅವರ ಹೆಸರು ಏಕೈಕ ಅಭ್ಯರ್ಥಿಯಾಗಿ ಮುಂಚೂಣಿಗೆ ಬಂದಿದೆ. ಅಭ್ಯರ್ಥಿ ಅಂತಿಮಗೊಳಿಸಲು ವಿರೋಧ ಪಕ್ಷದ ನಾಯಕರು ಮಂಗಳವಾರ (ಜೂನ್ 21) ಮಧ್ಯಾಹ್ನ ಸಭೆ ಸೇರಲಿದ್ದಾರೆ.

ಸಂಸತ್ ಸೌಧದಲ್ಲಿ ಅಂದು ಮಧ್ಯಾಹ್ನ 2:30ಕ್ಕೆ ಸಭೆ ನಡೆಯಲಿದೆ. ವಿರೋಧ ಪಕ್ಷಗಳ ಹಿರಿಯ ನಾಯಕರಾದ ಶರದ್ ಪವಾರ್, ಮಲ್ಲಿಕಾರ್ಜುನ ಖರ್ಗೆ, ಸೀತಾರಾಮ್ ಯೆಚೂರಿ ಮತ್ತು ಡಿ. ರಾಜಾ ಸೇರಿ ಹಲವು ನಾಯಕರು ಭಾಗವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮತ್ತು ಫಾರೂಕ್ ಅಬ್ದುಲ್ಲಾ ಅವರು ಸ್ಪರ್ಧಿಸಲು ನಿರಾಕರಿಸಿದ ಬಳಿಕ, ರಾಷ್ಟ್ರಪತಿ ಚುನಾವಣೆಗೆ ಮಹಾತ್ಮ ಗಾಂಧಿ ಅವರ ಮೊಮ್ಮಗ ಗೋಪಾಲಕೃಷ್ಣ ಗಾಂಧಿಯವರನ್ನು ಅಭ್ಯರ್ಥಿಯಾಗಿಸಲು ವಿರೋಧ ಪಕ್ಷಗಳ ನಾಯಕರು ಒಲವು ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಚುನಾವಣೆಯನ್ನು ವಿರೋಧ ಪಕ್ಷಗಳು ಗಾಂಧಿ ಮತ್ತು ಗೋಡ್ಸೆ ವಿರುದ್ಧದ ಸೈದ್ಧಾಂತಿಕ ಹೋರಾಟವಾಗಿಸಲು ನಿರ್ಧರಿಸಿವೆ.

ರಾಷ್ಟ್ರಪತಿ ಚುನಾವಣೆಗೆ ಒಮ್ಮತದ ಅಭ್ಯರ್ಥಿಯನ್ನು ಕಣಕ್ಕಿಸುವ ಸಂಬಂಧ ತೀರ್ಮಾನ ತೆಗೆದುಕೊಳ್ಳಲು ಕಳೆದ ಬುಧವಾರ ನಡೆಸಿದ ಮೊದಲ ಸಭೆಯಲ್ಲಿ 17 ಪಕ್ಷಗಳ ಮುಖಂಡರು ಪಾಲ್ಗೊಂಡಿದ್ದರು.

ಪೂರ್ವ ನಿಗದಿತ ಕಾರ್ಯಕ್ರಮದ ಸಲುವಾಗಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮಂಗಳವಾರದ ಸಭೆಯಲ್ಲಿ ಭಾಗವಹಿಸುತ್ತಿಲ್ಲ.

ತೃಣಮೂಲ ಕಾಂಗ್ರೆಸ್‌ನಂತೆಯೇ ಡಿ.ಎಂ.ಕೆ ಮತ್ತು ಶಿವಸೇನಾ ತನ್ನ ಪ್ರತಿನಿಧಿಗಳನ್ನು ಕಳುಹಿಸುತ್ತಿವೆ. ಮೊದಲ ಸಭೆಯಿಂದ ಹೊರಗುಳಿದಿದ್ದ ಟಿಆರ್‌ಎಸ್, ಎಎಪಿ ಪ್ರತಿನಿಧಿಗಳು ಮಂಗಳವಾರದ ಸಭೆಗೆ ಹಾಜರಾಗುತ್ತಾರೆಯೇ ಎನ್ನುವುದು ಇನ್ನೂ ಖಚಿತವಾಗಿಲ್ಲ. ವೈಎಸ್‌ಆರ್ ಕಾಂಗ್ರೆಸ್, ಅಕಾಲಿದಳ ಮತ್ತು ಬಿಜೆಡಿ ಈ ಸಭೆಯಲ್ಲಿ ಪಾಲ್ಗೊಳ್ಳುವ ಬಗ್ಗೆ ನಾಯಕರಿಗೂ ಭರವಸೆ ಇಲ್ಲ.

### ‘ಪಿತ್ರೋಡಾ ಪ್ರತಿಪಕ್ಷದ ಅಭ್ಯರ್ಥಿಯಾಗಲಿ’

ನವದೆಹಲಿ: ತಂತ್ರಜ್ಞ ಸ್ಯಾಮ್ ಪಿತ್ರೋಡಾ ಅವರನ್ನು ರಾಷ್ಟ್ರಪತಿ ಅಭ್ಯರ್ಥಿಯಾಗಿ ಪರಿಗಣಿಸುವಂತೆ ಭಾರತೀಯ ಸಾಗರೋತ್ತರ ಕಾಂಗ್ರೆಸ್ ಘಟಕಗಳು ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳ ನಾಯಕರನ್ನು ಒತ್ತಾಯಿಸಿವೆ.



ಸ್ಯಾಮ್ ಪಿತ್ರೋಡಾ

ಸ್ಪೇನ್, ಆಸ್ಟ್ರೇಲಿಯಾ, ಆಸ್ಟ್ರಿಯಾ, ಬ್ರಿಟನ್, ಅಮೆರಿಕ, ಟರ್ಕಿ, ಐರ್ಲೆಂಡ್, ದಕ್ಷಿಣ ಕೊರಿಯಾ, ಬಹರೈನ್, ಯುರೋಪ್ ಮತ್ತು ಮಧ್ಯ ಏಷ್ಯಾ ಒಳಗೊಂಡ ಭಾರತೀಯ ಸಾಗರೋತ್ತರ ಕಾಂಗ್ರೆಸ್ ಪ್ರಮುಖರು, ಈ ಸಂಬಂಧ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಜಂಟಿ ಪತ್ರ ಬರೆದಿದ್ದಾರೆ.

‘ಸಾಗರೋತ್ತರ ಕಾಂಗ್ರೆಸ್‌ನ ಅಧ್ಯಕ್ಷರೂ ಆಗಿರುವ ಪಿತ್ರೋಡಾ ಅವರನ್ನು ರಾಷ್ಟ್ರಪತಿ ಚುನಾವಣೆಗೆ ಅಭ್ಯರ್ಥಿಯಾಗಿ ಸೂಚಿಸಲು ತುಂಬಾ ಸಂತೋಷವಾಗಿದೆ. ಜಾಗತಿಕ ದೂರಸಂಪರ್ಕ ಕ್ಷೇತ್ರಕ್ಕೆ ಇವರು ನೀಡಿದ ಕೊಡುಗೆಗಳಿಂದ ಇವರನ್ನು ಅಭ್ಯರ್ಥಿಯಾಗಿ ಎಲ್ಲ ವಿರೋಧ ಪಕ್ಷಗಳು ಒಪ್ಪುವ ವಿಶ್ವಾಸವಿದೆ’ ಎಂದು ಜಂಟಿ ಪತ್ರದಲ್ಲಿ ಹೇಳಿದೆ.

‘ಪಿತ್ರೋಡಾ ಅವರದು ಅತ್ಯಂತ ಶಿಸ್ತಿನ ಜೀವನಶೈಲಿ. ಕಟ್ಟಾ ಗಾಂಧಿವಾದಿ. ಪಿತ್ರೋಡಾ ಅವರು ದೇಶಕ್ಕೆ ಹಲವು ವಿಧಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರು ರಾಷ್ಟ್ರಕ್ಕೆ ಸಲ್ಲಿಸಿದ ಸೇವೆಗಳಿಗಾಗಿ ಒಂದೇ ಒಂದು ರೂಪಾಯಿ ಸಂಬಳ ಪಡೆದಿಲ್ಲ. ಅವರದು ಸ್ಫೂರ್ತಿದಾಯಕ ವ್ಯಕ್ತಿತ್ವ’ ಎಂದು ಪತ್ರದಲ್ಲಿ ತಿಳಿಸಲಾಗಿದೆ.

‘ಡಿಜಿಟಲ್ ಸಭೆಯಲ್ಲಿ ಪಿತ್ರೋಡಾ ಅವರ ಉಮೇದುವಾರಿಕೆ ಖಾತ್ರಿಪಡಿಸಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸಾಗರೋತ್ತರ ಕಾಂಗ್ರೆಸ್ ಘಟಕಗಳು ಪಕ್ಷದ ನಾಯಕತ್ವವನ್ನು ಸರ್ವಾನುಮತದಿಂದ ಒತ್ತಾಯಿಸಿವೆ’ ಎಂದು ಸಾಗರೋತ್ತರ ಕಾಂಗ್ರೆಸ್ ಮಾಧ್ಯಮ ಸಂಯೋಜಕ ವಿಶಾಖ್ ಚೆರಿಯನ್ ತಿಳಿಸಿದರು.

### ತಿಹಾರ್ ಜೈಲಿನಿಂದ ಸ್ಥಳಾಂತರಿಸಲು ಚಂದ್ರಶೇಖರ್ ಮನವಿ

# ‘ಸುಪ್ರೀಂ’ನಲ್ಲಿ ಅರ್ಜಿ ವಿಚಾರಣೆ ಇಂದು

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಮತ್ತು ಹಲವರಿಗೆ ವಂಚಿಸಿದ ಆರೋಪದ ಮೇಲೆ ತಿಹಾರ್ ಜೈಲಿನಲ್ಲಿರುವ ವಂಚಕ ಸುಕೇಶ್ ಚಂದ್ರಶೇಖರ್ ಮತ್ತು ಆತನ ಪತ್ನಿ, ಜೀವ ಬೆದರಿಕೆ ಇರುವುದರಿಂದ ದೆಹಲಿಯ ಹೊರಗಿನ ಜೈಲಿಗೆ ವರ್ಗಾಯಿಸುವಂತೆ ಕೋರಿ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಿಚಾರಣೆ ನಡೆಸಲಿದೆ.

ಚಂದ್ರಶೇಖರ್ ಮತ್ತು ಅವರ ಪತ್ನಿ ಲೀನಾ ಪೌಲೋಸ್ ಅವರನ್ನು ಸ್ಥಳಾಂತರಿಸಬಹುದಾದ ಇತರೆ ಜೈಲುಗಳ ಹೆಸರನ್ನು ನ್ಯಾಯಮೂರ್ತಿಗಳಾದ ಸಿ.ಟಿ. ರವಿಕುಮಾರ್ ಮತ್ತು ಸುಧಾಂಶು ಧುಲಿಯಾ ಅವರ ರಜಾಕಾಲದ ಪೀಠಕ್ಕೆ ಕೇಂದ್ರ ತಿಳಿಸುವ ನಿರೀಕ್ಷೆಯಿದೆ.



ಪತ್ನಿ ಲೀನಾ ಜೊತೆ ಆರಾಮವಾಗಿರಲು ತಿಹಾರ್ ಜೈಲು ಅಧಿಕಾರಿಗಳಿಗೆ ಪ್ರತಿ ಹದಿನೈದು ದಿನಕ್ಕೆ ₹60 ರಿಂದ ₹ 75 ಲಕ್ಷ ಲಂಚ ನೀಡಿದ ಆರೋಪ ಚಂದ್ರಶೇಖರ್ ಮೇಲಿದೆ.

ದಂಪತಿ ಪರ ವಾದ ಮಂಡಿಸಿದ ಹಿರಿಯ ವಕೀಲೆ ಮೀನಾಕ್ಷಿ ಅರೋರಾ, ಹಲವು ಜೈಲು ಅಧಿಕಾರಿಗಳು ಹಣ ಪಡೆದು ಬಂಧನಕ್ಕೆ ಒಳಗಾಗಿದ್ದಾರೆ. ಇತರೆ ಅಧಿಕಾರಿಗಳಿಂದ ಬೆದರಿಕೆ ಇರುವುದರಿಂದ ನ್ಯಾಯಾಲಯದ ಇಚ್ಛೆಯಂತೆ ಯಾವುದೇ ಜೈಲಿಗೆ ಸ್ಥಳಾಂತರಿಸುವಂತೆ ಮನವಿ ಮಾಡಿದರು.

ಎಐಎಡಿಎಂಕೆ ಮಾಜಿ ನಾಯಕ ಟಿಟಿವಿ ದಿನಕರನ್ ಮತ್ತು ಇತರರು ಒಳಗೊಂಡಿರುವ 2017 ರ ಚುನಾವಣಾ ಆಯೋಗದ ಲಂಚ ಪ್ರಕರಣ ಹಾಗೂ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಏಪ್ರಿಲ್ 4 ರಂದು ಬಂಧಿಸಿತ್ತು.

# ‘ಇನ್ನೊಬ್ಬರ ಬದುಕು ಕಸಿಯುವ ಹಕ್ಕು ಯಾರಿಗೂ ಇಲ್ಲ’

ಮುಂಬೈ (ಪಿಟಿಐ): ‘ಯಾವುದೇ ರೀತಿಯ ಹಿಂಸಾ ಕೃತ್ಯಗಳು ಸಮರ್ಥನೀಯವಲ್ಲ. ಅಲ್ಲದೆ, ಯಾವುದೇ ಧರ್ಮದ ಹೆಸರಿನಲ್ಲಿ ಹಿಂಸಾಚಾರ ನಡೆಸುವುದು ದೊಡ್ಡ ಪಾಪ’ ಎಂದು ಹೆಸರಾಂತ ನಟಿ ಸಾಯಿ ಪಲ್ಲವಿ ಹೇಳಿದ್ದಾರೆ.



ಸಾಯಿ ಪಲ್ಲವಿ

1990ರಲ್ಲಿ ನಡೆದಿದ್ದ ಕಾಶ್ಮೀರಿ ಪಂಡಿತರ ಹತ್ಯೆ ಮತ್ತು ಇತ್ತೀಚಿನ ಗುಂಪು ದಾಳಿಗೆ ಸಂಬಂಧಿಸಿದ ಕೆಲ ಪ್ರಕರಣಗಳ ಹೋಲಿಕೆ ಕುರಿತ ತಮ್ಮ ಹೇಳಿಕೆಯು ವಿವಾದದ ಸ್ವರೂಪವನ್ನು ಪಡೆದಿರುವ ಹಿನ್ನೆಲೆಯಲ್ಲಿ ವಿಡಿಯೊ ಸಂದೇಶದಲ್ಲಿ ಅವರು ಈ ಸ್ಪಷ್ಟನೆ ನೀಡಿದ್ದಾರೆ.

‘ಇನ್ನೊಬ್ಬರ ಬದುಕು ಕಸಿಯುವ ಹಕ್ಕು ನಮಗೆ ಯಾರಿಗೂ ಇಲ್ಲ. ಒಬ್ಬ ವೈದ್ಯಕೀಯ ಪದವೀಧರೆಯಾಗಿ ಎಲ್ಲರ ಜೀವ ಸಮನಾದುದು, ಎಲ್ಲರ ಬದುಕು ಮುಖ್ಯವಾದುದು ಎಂದೇ ನಾನು ನಂಬಿದ್ದೇನೆ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

‘ಭವಿಷ್ಯದಲ್ಲಿ ತನ್ನ ಗುರುತಿನ ಕಾರಣದಿಂದಾಗಿಯೇ ದೇಶದಲ್ಲಿ ಯಾರೊಬ್ಬರೂ ಭೀತಿ ಪಡುವ ಸ್ಥಿತಿ ಇರುವುದಿಲ್ಲ ಎಂದು ಆಶಿಸುತ್ತೇನೆ. ಕನಿಷ್ಠ ಆ ದಿಕ್ಕಿನಲ್ಲಿ ಸಾಗುವುದಿಲ್ಲ ಎಂದು ಭಾವಿಸುತ್ತೇನೆ. ನನಗೆ ನೆನಪಿರುವಂತೆ 14 ವರ್ಷಗಳ ನನ್ನ ಶಾಲಾ ದಿನಗಳಲ್ಲಿ ಪ್ರತಿದಿನವೂ ‘ಎಲ್ಲ ಭಾರತೀಯರು ಸಹೋದರ, ಸಹೋದರಿಯರು’ ಎಂಬುದನ್ನೇ ನಾನು ಪಠಿಸಿದ್ದೇನೆ’ ಎಂದು ಹೇಳಿದ್ದಾರೆ.

‘ಇತ್ತೀಚಿನ ಸಂದರ್ಶನವೊಂದರಲ್ಲಿ ನೀವು ಎಡ ಅಥವಾ ಬಲಪಂಥೀಯರ ಬೆಂಬಲಿಗರಾ ಎಂದು ನನಗೆ ಪ್ರಶ್ನಿಸಲಾಗಿತ್ತು. ಅದಕ್ಕೆ ನಾನು, ತಟಸ್ಥ ಸ್ಥಿತಿಯನ್ನು ನಂಬಿದ್ದೇನೆ. ಮೊದಲು ನಾವು ಉತ್ತಮ ಮನುಷ್ಯರಾಗಬೇಕು. ಆಗ ಮಾತ್ರ ನಮ್ಮ ನಂಬಿಕೆಯೊಂದಿಗೆ ನಮ್ಮನ್ನು ಗುರುತಿಸಿಕೊಳ್ಳಬಹುದು. ತುಳಿತಕ್ಕೊಳಗಾದವರಿಗೆ ಯಾವುದೇ ಸ್ಥಿತಿಯಲ್ಲಿ ರಕ್ಷಣೆ ಸಿಗಬೇಕು ಎಂದಿದ್ದೇನೆ’ ಎಂದರು.

‘ವಿರಾಟ ಪರ್ವಂ’ ಸಿನಿಮಾದ ಬಿಡುಗಡೆಯ ಪೂರ್ವದಲ್ಲಿ ಯೂಟ್ಯೂಬ್ ಚಾನೆಲ್‌ಗೆ ನೀಡಿದ್ದ ಸಂದರ್ಶನದಲ್ಲಿ ಅವರು ಪ್ರಸ್ತಾಪಿಸಿದ್ದ ಅಂಶಗಳು ಈಚೆಗೆ ವಿವಾದಕ್ಕೆ ಆಸ್ಪದವಾಗಿದ್ದವು.

ವಿವೇಕ್ ರಂಜನ್ ಅಗ್ನಿಹೋತ್ರಿ ಅವರ ‘ದಿ ಕಾಶ್ಮೀರಿ ಫೈಲ್ಸ್’ ಸಿನಿಮಾದಲ್ಲಿ ತೋರಿಸಿದಂತೆ ಕಾಶ್ಮೀರಿ ಪಂಡಿತರ ಸ್ಥಿತಿ ಕಂಡು ವಿಚಲಿತಳಾಗಿದ್ದೆ. ಅದೊಂದು ದುರಂತ. ನಂತರದ ಪೀಳಿಗೆಗಳ ಮೇಲೂ ಅದರ ಪರಿಣಾಮವಾಗಿದೆ ಎಂದು ನಟಿ ಹೇಳಿದರು.

‘ಇತ್ತೀಚಿಗೆ ಕೋವಿಡ್ ಸಂದರ್ಭದಲ್ಲಿ ನಡೆದಿದ್ದ ಗುಂಪು ದಾಳಿ ಘಟನೆಯೂ ನನಗೆ ಹಲವು ದಿನಗಳು ಬಾಧಿಸಿತ್ತು’ ಎಂದೂ ಹೇಳಿದರು.

# ಗಡಿರೇಖೆ ಸ್ಥಿತಿ ಬದಲಾವಣೆಗೆ ಅವಕಾಶ ನೀಡೆವು –ಜೈಶಂಕರ್

ನವದೆಹಲಿ (ಪಿಟಿಐ): ‘ಅಂತರರಾಷ್ಟ್ರೀಯ ಗಡಿರೇಖೆಯ ಸ್ವರೂಪವನ್ನು ಅಥವಾ ಯಥಾಸ್ಥಿತಿಯನ್ನು ಏಕಪಕ್ಷೀಯವಾಗಿ ಬದಲಾವಣೆ ಮಾಡಲು ಚೀನಾಗೆ ಭಾರತ ಅವಕಾಶ ನೀಡುವುದಿಲ್ಲ’ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಭಾನುವಾರ ಹೇಳಿದರು.

ಪೂರ್ವ ಲಡಾಖ್‌ನಲ್ಲಿ ಚೀನಾದ ಯತ್ನವನ್ನು ಅಗಾಧ ಕಾರ್ಯತಂತ್ರದ ಪ್ರಯತ್ನದ ಮೂಲಕ ಚೀನಾಗೆ ಭಾರತ ಪ್ರತಿರೋಧ ಒಡ್ಡಿದೆ ಎಂದೂ ಸಿಎನ್‌ಎನ್–ನ್ಯೂಸ್18 ಏರ್ಪಡಿಸಿದ್ದ ಸಮಾವೇಶದಲ್ಲಿ ಅವರು ಪ್ರತಿಪಾದಿಸಿದರು.

‘ವಾಸ್ತವ ಗಡಿ ನಿಯಂತ್ರಣ ರೇಖೆಯನ್ನು (ಎಲ್‌ಎಸಿ) ಸೇನಾ ತುಕಡಿಗಳು ದಾಟಬಾರದು ಎಂಬ 1993 ಮತ್ತು 1996ರ ಒಪ್ಪಂದವನ್ನು ಚೀನಾ ಉಲ್ಲಂಘಿಸಿದೆ. ಗಡಿ ರೇಖೆಯ ಸ್ವರೂಪವನ್ನು ಬದಲಿಸಲೂ ಯತ್ನಿಸುತ್ತಿದೆ’ ಎಂದು ಆರೋಪಿಸಿದರು.

# ಇಂದಿನಿಂದ ಮೋದಿ ರಾಜ್ಯ ಪ್ರವಾಸ

ಒಂದನೇ ಪುಟದಿಂದ

ಕೇಂದ್ರ ಪುರಸ್ಕೃತ ಯೋಜನೆಗಳ ಫಲಾನುಭವಿಗಳ ಜೊತೆ ಸಂವಾದವನ್ನೂ ನಡೆಸಲಿದ್ದಾರೆ. ಅಖಿಲ ಭಾರತ ವಾಕ್– ಶ್ರವಣ ಸಂಸ್ಥೆ (ಆಯಿಷ್) ನಿರ್ಮಿಸಿರುವ ‘ಉತ್ಕೃಷ್ಟತಾ ಕೇಂದ್ರ’ ಉದ್ಘಾಟಿಸಲಿದ್ದಾರೆ.

ನಗರ ಕೇಂದ್ರ ರೈಲು ನಿಲ್ದಾಣದ ವಿಸ್ತರಣೆ ಕಾಮಗಾರಿಗೂ ಚಾಲನೆ ನೀಡಲಿದ್ದಾರೆ. ಸುತ್ತೂರು ಮಠದಲ್ಲಿ ಸಂಸ್ಕೃತ ಪಾಠಶಾಲೆ ಉದ್ಘಾಟಿಸುವರು. ಚಾಮುಂಡಿ ಬೆಟ್ಟಕ್ಕೂ ಭೇಟಿ ನೀಡಲಿದ್ದಾರೆ.

21 ರಂದು ಬೆಳಿಗ್ಗೆ ಅರಮನೆ ಆವರಣದಲ್ಲಿ ಅಂತರರಾಷ್ಟ್ರೀಯ ಯೋಗ ದಿನ ಕಾರ್ಯಕ್ರಮದಲ್ಲಿ ಭಾಗವಹಿಸುವರು. 15 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆಯಿದೆ. ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಆಹ್ವಾನದ ಮೇರೆಗೆ, ಅವರ ನಿವಾಸದಲ್ಲಿ ಉಪಾಹಾರ ಸೇವಿಸುವರು. ಬಳಿಕ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಯೋಗದ ಮಹತ್ವ ಸಾರುವ ವಸ್ತುಪ್ರದರ್ಶನ ಉದ್ಘಾಟಿಸುವರು.

# 2 ಸಾವಿರ ದಾಟಿದ ಡೆಂಗಿ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕಾಲಿಕ ಮಳೆಯಿಂದಾಗಿ ರಾಜ್ಯದಲ್ಲಿ ಡೆಂಗಿ ಜ್ವರಕ್ಕೆ ಒಳಪಡುವವರ ಸಂಖ್ಯೆ ಏರಿಕೆ ಕಂಡಿದ್ದು, ಈ ತಿಂಗಳು 346 ಮಂದಿ ಡೆಂಗಿ ಪೀಡಿತರಾಗಿದ್ದಾರೆ. ಈವರೆಗೆ ಡೆಂಗಿ ಜ್ವರಕ್ಕೆ ಒಳಪಟ್ಟವರ ಒಟ್ಟು ಸಂಖ್ಯೆ 2 ಸಾವಿರದ ಗಡಿ (2,060) ದಾಟಿದೆ.


ಈ ವರ್ಷ 39,680 ಡೆಂಗಿ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 16,962 ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 15,502 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದು, 388 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. ಈ ವರ್ಷ ಡೆಂಗಿ ಜ್ವರಕ್ಕೆ ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. 2021 ರಲ್ಲಿ 7,189 ಮಂದಿ ಡೆಂಗಿ ಪೀಡಿತರಾಗಿದ್ದರು. ಅವರಲ್ಲಿ ಐವರು ಮೃತಪಟ್ಟಿದ್ದರು.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. ಪ್ರಕರಣಗಳ ಸಂಖ್ಯೆ ನಾಲ್ಕು ಜಿಲ್ಲೆಗಳಲ್ಲಿ ಮೂರಂಕಿ, 25 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಉಡುಪಿಯಲ್ಲಿ 244, ಮೈಸೂರಿನಲ್ಲಿ 171, ಚಿತ್ರದುರ್ಗದಲ್ಲಿ 108, ದಕ್ಷಿಣ ಕನ್ನಡದಲ್ಲಿ 104, ಕೊಪ್ಪಳದಲ್ಲಿ 95, ಶಿವಮೊಗ್ಗದಲ್ಲಿ 92, ಬಳ್ಳಾರಿಯಲ್ಲಿ 89, ವಿಜಯಪುರದಲ್ಲಿ 85, ದಾವಣಗೆರೆಯಲ್ಲಿ 70, ಕಲಬುರ್ಗಿಯಲ್ಲಿ 61 ಹಾಗೂ ಹಾಸನದಲ್ಲಿ 51 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 50ಕ್ಕಿಂತ ಕಡಿಮೆ ಇವೆ.

27 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 12 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 7 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 474 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ. ವಿಜಯಪುರದಲ್ಲಿ 96, ಕೋಲಾರದಲ್ಲಿ 76, ಬೆಂಗಳೂರು ಗ್ರಾಮಾಂತರದಲ್ಲಿ 44, ತುಮಕೂರಿನಲ್ಲಿ 36, ಚಿತ್ರದುರ್ಗದಲ್ಲಿ 28, ದಾವಣಗೆರೆಯಲ್ಲಿ 20, ಹಾಸನದಲ್ಲಿ 19, ಕಲಬುರ್ಗಿಯಲ್ಲಿ 16, ರಾಮನಗರದಲ್ಲಿ 14, ಶಿವಮೊಗ್ಗದಲ್ಲಿ 12, ಬಾಗಲಕೋಟೆಯಲ್ಲಿ 11 ಹಾಗೂ ಮಂಡ್ಯದಲ್ಲಿ 10 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 10ಕ್ಕಿಂತ ಕಡಿಮೆ ಇವೆ.

### ಜೂನ್ 1–17ರವರೆಗೆ ₹ 31,430 ಕೋಟಿ ಹಿಂತೆಗೆತ

# ಎಫ್‌ಪಿಐ: ನಿಲ್ಲದ ಹೊರಹರಿವು



**ಮುಖ್ಯಾಂಶಗಳು**
- ಹಣದುಬ್ಬರ ದರ ಏರಿಕೆ ಪರಿಣಾಮ
- ಕೇಂದ್ರೀಯ ಬ್ಯಾಂಕ್‌ಗಳಿಂದ ಬಡ್ಡಿದರ ಹೆಚ್ಚಳ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಜೂನ್ 1ರಿಂದ 17ರವರೆಗಿನ ಅವಧಿಯಲ್ಲಿ ಒಟ್ಟಾರೆ ₹ 31,430 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, 2022ರಲ್ಲಿ ಈವರೆಗೆ ಒಟ್ಟಾರೆ ₹1.98 ಲಕ್ಷ ಕೋಟಿ ಬಂಡವಾಳ ಹಿಂದಕ್ಕೆ ಪಡೆದಂತಾಗಿದೆ. ಸಾಲಪತ್ರ ಮಾರುಕಟ್ಟೆಯಿಂದಲೂ ₹2,503 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ. ಫೆಬ್ರುವರಿಯಿಂದಲೂ ಸಾಲಪತ್ರ ಮಾರುಕಟ್ಟೆಯಿಂದ ಬಂಡವಾಳ ಹೊರಹರಿವು ಆಗುತ್ತಿದೆ.

ಅಮೆರಿಕದ ಫೆಡರಲ್ ರಿಸರ್ವ್‌ನಿಂದ ಬಡ್ಡಿದರ ಹೆಚ್ಚಳ, ಹಣದುಬ್ಬರ ಏರಿಕೆ ಹಾಗೂ ಷೇರುಗಳ ಮೌಲ್ಯವು ಗರಿಷ್ಠ ಮಟ್ಟದಲ್ಲಿ ಇರುವ ಕಾರಣಗಳಿಂದಾಗಿ ವಿದೇಶಿ ಹೂಡಿಕೆದಾರರು (ಎಫ್‌ಪಿಐ) ಭಾರತದ ಷೇರುಪೇಟೆಯಿಂದ ಹಿಂದೆ ಸರಿಯುತ್ತಿದ್ದಾರೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

2021ರ ಅಕ್ಟೋಬರ್‌ನಿಂದಲೂ ವಿದೇಶಿ ಹೂಡಿಕೆದಾರರು ಬಂಡವಾಳ ಹಿಂದಕ್ಕೆ ಪಡೆಯುತ್ತಿದ್ದಾರೆ.

‘ಜಾಗತಿಕ ರಾಜಕೀಯ ಬಿಕ್ಕಟ್ಟು, ಹಣದುಬ್ಬರ ದರ ಏರಿಕೆ, ಕೇಂದ್ರೀಯ ಬ್ಯಾಂಕ್‌ಗಳು ಹಣಕಾಸು ನೀತಿಯನ್ನು ಬಿಗಿಗೊಳಿಸುತ್ತಿರುವುದು ಸೇರಿದಂತೆ ಇನ್ನೂ ಹಲವು ಕಾರಣಗಳಿಂದಾಗಿ ಮುಂದಿನ ದಿನಗಳಲ್ಲಿಯೂ ಭಾರತದ ಮಾರುಕಟ್ಟೆಯಲ್ಲಿ ಬಂಡವಾಳ ಹರಿವು ಅಸ್ಥಿರವಾಗಿರಲಿದೆ’ ಎಂದು ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ ರಿಸರ್ಚ್‌ನ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

‘ಅಮೆರಿಕದ ಡಾಲರ್ ಮೌಲ್ಯ ವೃದ್ಧಿ ಹಾಗೂ ಬಾಂಡ್ ಗಳಿಕೆಯು ಎಫ್‌ಪಿಐ ಮಾರಾಟಕ್ಕೆ ಪ್ರಮುಖ ಕಾರಣಗಳಾಗಿವೆ. ಅಮೆರಿಕದ ಫೆಡರಲ್ ರಿಸರ್ವ್ ಸೇರಿದಂತೆ ಜಾಗತಿಕವಾಗಿ ಹಲವು ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಹೆಚ್ಚಿಸಿವೆ. ಇದರಿಂದಾಗಿ ಈಕ್ವಿಟಿಯಿಂದ ಬಾಂಡ್‌ಗಳ ಕಡೆಗೆ ಹಣವು ಹರಿಯುತ್ತಿದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವೀಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ತಿಳಿಸಿದ್ದಾರೆ.

ದೇಶದಲ್ಲಿಯೂ ಹಣದುಬ್ಬರವು ಗರಿಷ್ಠ ಮಟ್ಟದಲ್ಲಿ ಇರುವುದು ಆತಂಕಕ್ಕೆ ಕಾರಣವಾಗಿದೆ. ಹೀಗಾಗಿ ಆರ್‌ಬಿಐ ಸಹ ಬಡ್ಡಿದರ ಹೆಚ್ಚಿಸುತ್ತಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

## ‘ಇಂಧನ ಚಿಲ್ಲರೆ ವಹಿವಾಟು: ತಗ್ಗಲಿದೆ ಹೂಡಿಕೆ’

ನವದೆಹಲಿ (ಪಿಟಿಐ): ಇಂಧನ ಚಿಲ್ಲರೆ ವಹಿವಾಟಿನಿಂದ ಖಾಸಗಿ ಕಂಪನಿಗಳಿಗೆ ನಷ್ಟವಾಗುತ್ತಿದೆ. ಇದರಿಂದಾಗಿ ಚಿಲ್ಲರೆ ವಹಿವಾಟಿನಲ್ಲಿ ಬಂಡವಾಳ ಹೂಡಿಕೆ ಕಡಿಮೆ ಆಗಲಿದೆ ಎಂದು ಖಾಸಗಿ ಕಂಪನಿಗಳನ್ನು ಪ್ರತಿನಿಧಿಸುವ ಫೆಡರೇಷನ್ ಆಫ್ ಇಂಡಿಯನ್ ಪೆಟ್ರೋಲಿಯಂ ಇಂಡಸ್ಟ್ರಿ (ಎಫ್‌ಐಪಿಐ) ಹೇಳಿದೆ.

ಈ ಸಂಬಂಧ ಈಚೆಗಷ್ಟೇ ಪೆಟ್ರೋಲಿಯಂ ಸಚಿವಾಲಯಕ್ಕೆ ಪತ್ರ ಬರೆದಿದ್ದು, ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಇಂಧನ ದರ ಹೆಚ್ಚಳ ಮಾಡದೇ ಇರುವುದರಿಂದ ಖಾಸಗಿ ಕಂಪನಿಗಳಿಗೆ ನಷ್ಟ ಆಗುತ್ತಿದೆ. ಜಿಯೊ–ಬಿಪಿ ಮತ್ತು ನಯಾರಾ ಎನರ್ಜಿಯಂತಹ ಖಾಸಗಿ ಕಂಪನಿಗಳಿಗೆ ಪ್ರತಿ ಲೀಟರ್ ಡೀಸೆಲ್ ಮಾರಾಟದಿಂದ ₹ 20 ರಿಂದ ₹ 25 ಮತ್ತು ಪ್ರತಿ ಲೀಟರ್ ಪೆಟ್ರೋಲ್ ಮಾರಾಟದಿಂದ ₹ 14–18 ನಷ್ಟ ಆಗುತ್ತಿದೆ ಎಂದು ತಿಳಿಸಿದೆ. ಹೂಡಿಕೆಗೆ ಸೂಕ್ತ ವಾತಾವರಣ ಕಲ್ಪಿಸಲು ಮಧ್ಯಪ್ರವೇಶ ಮಾಡುವಂತೆ ಸಚಿವಾಲಯವನ್ನು ಒತ್ತಾಯಿಸಿದೆ.

ಖಾಸಗಿಕ ಕಂಪನಿಗಳು ದರ ಹೆಚ್ಚಿಸುವ ಇಲ್ಲವೇ ಮಾರಾಟ ತಗ್ಗಿಸುವ ಮೂಲಕ ನಷ್ಟವನ್ನು ಕಡಿಮೆ ಮಾಡಿಕೊಳ್ಳುವ ಪರಿಸ್ಥಿತಿ ಎದುರಾಗಿದೆ ಎಂದು ತಿಳಿಸಿದೆ.

## ಇಂದಿನಿಂದ ಚಿನ್ನದ ಬಾಂಡ್‌ನ ಮೊದಲ ಕಂತು

ನವದೆಹಲಿ (ಪಿಟಿಐ): ಚಿನ್ನದ ಬಾಂಡ್ ಯೋಜನೆಯ ಪ್ರಸಕ್ತ ಹಣಕಾಸು ವರ್ಷದ ಮೊದಲ ಕಂತು ಸೋಮವಾರ ಆರಂಭ ಆಗಲಿದೆ. ಪ್ರತಿ ಗ್ರಾಂಗೆ ನೀಡಿಕೆ ಬೆಲೆ ₹ 5,091 ನಿಗದಿ ಮಾಡಲಾಗಿದೆ.

ಬಾಂಡ್ ಖರೀದಿಸಲು ಶುಕ್ರವಾರ ಕೊನೆಯ ದಿನವಾಗಿದೆ. ಬಾಂಡ್ ಖರೀದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, ಪಾವತಿ ಮಾಡುವವರಿಗೆ ಪ್ರತಿ ಗ್ರಾಂಗೆ ₹ 50 ರಿಯಾಯಿತಿ ನೀಡಲಾಗುತ್ತದೆ. ಹೀಗಾಗಿ ಇಂತಹ ಹೂಡಿಕೆದಾರರಿಗೆ ಪ್ರತಿ ಗ್ರಾಂ ನೀಡಿಕೆ ಬೆಲೆ ₹ 5,041 ಆಗಲಿದೆ ಎಂದು ಆರ್‌ಬಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ, ಅಂಚೆ ಕಚೇರಿ, ಬಿಎಸ್‌ಇ ಮತ್ತು ಎನ್‌ಎಸ್‌ಇ ಮೂಲಕ ಚಿನ್ನದ ಬಾಂಡ್ ಮಾರಾಟ ನಡೆಯಲಿದೆ. ಕೇಂದ್ರ ಸರ್ಕಾರದ ಪರವಾಗಿ ಆರ್‌ಬಿಐ ಬಾಂಡ್‌ಗಳನ್ನು ವಿತರಣೆ ಮಾಡಲಿದೆ.

ಬಾಂಡ್ ಅವಧಿಯು 8 ವರ್ಷ ಇದ್ದು, ಅವಧಿ ಮುಗಿಯುವುದಕ್ಕೂ ಮುನ್ನ 5 ವರ್ಷಗಳ ಬಳಿಕ ನಗದೀಕರಿಸಬಹುದು. ವೈಯಕ್ತಿಕ ಖರೀದಿದಾರರಿಗೆ ಮತ್ತು ಹಿಂದೂ ಅವಿಭಕ್ತ ಕುಟುಂಬಕ್ಕೆ 4 ಕೆ.ಜಿ ಹಾಗೂ ಟ್ರಸ್ಟ್‌ಗಳಿಗೆ 20 ಕೆ.ಜಿಯ ಗರಿಷ್ಠ ಮಿತಿ ನೀಡಲಾಗಿದೆ.

ಭೌತಿಕ ರೂಪದಲ್ಲಿ ನಿಷ್ಪ್ರಯೋಜಕವಾಗಿರುವ ಚಿನ್ನವನ್ನು ಬಳಕೆಗೆ ತರಲು ಕೇಂದ್ರ ಸರ್ಕಾರ 2015ರಲ್ಲಿ ಚಿನ್ನದ ಬಾಂಡ್ ಯೋಜನೆ ಜಾರಿಗೊಳಿಸಿತು.

**ಕೋವಿಡ್ ಅವಧಿಯಲ್ಲಿ ಹೆಚ್ಚಿದ ಬೇಡಿಕೆ**

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಷೇರುಪೇಟೆಯಲ್ಲಿ ಅಸ್ಥಿರತೆ ಮೂಡಿದ್ದರಿಂದ ಹೂಡಿಕೆದಾರರು ಚಿನ್ನದ ಬಾಂಡ್ ಖರೀದಿಗೆ ಹೆಚ್ಚಿನ ಆಸಕ್ತಿ ತೋರಿಸಿದ್ದಾರೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

2020–21 ಮತ್ತು 2021–22ರ ಅವಧಿಯಲ್ಲಿ ಹೂಡಿಕೆದಾರರು ₹ 29,040 ಕೋಟಿ ಮೌಲ್ಯದ ಬಾಂಡ್ ಖರೀದಿಸಿದ್ದಾರೆ. ಇದು, ಯೋಜನೆಯು ಜಾರಿಗೆ ಬಂದಾಗಿನಿಂದ ಮಾರಾಟ ಆಗಿರುವ ಬಾಂಡ್‌ಗಳ ಒಟ್ಟಾರೆ ಮೌಲ್ಯದ ಶೇ 75ರಷ್ಟಾಗಿದೆ. ಯೋಜನೆಯಡಿ ಈವರೆಗೆ ಒಟ್ಟಾರೆ ₹ 38,693 ಕೋಟಿ ಮೌಲ್ಯದ ಬಾಂಡ್ ಮಾರಾಟ ಆಗಿದೆ.

# ಹೂಡಿಕೆಯ ನುಂಗದಿರಲಿ ‘ಬೆಲೆ ಏರಿಕೆ’



**ಬಂಡವಾಳ ಮಾರುಕಟ್ಟೆ**

**ಅವಿನಾಶ್ ಕೆ.ಟಿ.**

**ಯಾವುದೇ ಹೂಡಿಕೆ** ಮಾಡುವ ಮೊದಲು, ಹೂಡಿಕೆಗೆ ಸಿಗುವ ಬಡ್ಡಿ ಲಾಭ ಎಷ್ಟು ಎನ್ನುವುದನ್ನು ನೋಡುತ್ತೇವೆ. ಆದರೆ ಹೂಡಿಕೆ ಮಾಡುವಾಗ ಬೆಲೆ ಏರಿಕೆ (ಹಣದುಬ್ಬರದ) ಪ್ರಮಾಣದ ಬಗ್ಗೆ ನಾವು ಮಾತನಾಡುವುದೇ ಇಲ್ಲ. ಬೆಲೆ ಏರಿಕೆ ಎನ್ನುವ ಅಂಶ ದೀರ್ಘಾವಧಿಯಲ್ಲಿ ಹೂಡಿಕೆಗಳ ಮೇಲೆ ನಕಾರಾತ್ಮಕ ಪರಿಣಾಮ ಉಂಟು ಮಾಡುತ್ತದೆ. ಬನ್ನಿ, ಹಣದುಬ್ಬರ ನಮ್ಮ ಹೂಡಿಕೆಗಳ ಮೇಲೆ ಹೇಗೆ ಪ್ರಭಾವ ಬೀರುತ್ತದೆ ತಿಳಿಯೋಣ.

**ಏನಿದು ಬೆಲೆ ಏರಿಕೆ / ಹಣದುಬ್ಬರ:** ನಮ್ಮ ಕಾಲದಲ್ಲಿ ಒಂದು ಪ್ಲೇಟ್ ಇಡ್ಲಿಗೆ 5 ರೂಪಾಯಿ ಇತ್ತು. ಆದ್ರೆ ಈಗ 50 ರೂಪಾಯಿ ಆಗಿದೆ ಅಂತ ನಿಮ್ಮ ಅಜ್ಜ - ಅಜ್ಜಿ ಹೇಳೋದನ್ನ ಕೇಳಿರ್ತೀರಾ ಅಲ್ವಾ? ಹೌದು! ಸರಳ ಭಾಷೆಯಲ್ಲಿ ಇದನ್ನು ಹಣದುಬ್ಬರ ಅಥವಾ ಬೆಲೆ ಏರಿಕೆ ಎಂದು ಕರೆಯಬಹುದು. ವಸ್ತುಗಳಿಗೆ ಬೇಡಿಕೆ ಹೆಚ್ಚಾದಾಗ ಮತ್ತು ಉತ್ಪನ್ನಗಳ ಕೊರತೆ ಎದುರಾದಾಗ ಸಾಮಾನ್ಯವಾಗಿ ಹಣದುಬ್ಬರದ ಸ್ಥಿತಿ ನಿರ್ಮಾಣಗೊಳ್ಳುತ್ತದೆ. ಉದಾಹರಣೆಗೆ ರಷ್ಯಾ–ಉಕ್ರೇನ್ ನಡುವಿನ ಯುದ್ಧದ ಪರಿಣಾಮ ಜಾಗತಿಕವಾಗಿ ತೈಲ ಪೂರೈಕೆಯಲ್ಲಿ ವ್ಯತ್ಯಯವಾಗಿ ತೈಲ ಬೆಲೆ ಏರಿಕೆಯಾಯ್ತು. ತೈಲ ಬೆಲೆ ಹೆಚ್ಚಳದಿಂದ ಸಾರಿಗೆ ವೆಚ್ಚ ತುಟ್ಟಿಯಾಯ್ತು. ಸಾರಿಗೆ ವೆಚ್ಚ ಹೆಚ್ಚಾದ ಕಾರಣ, ವಸ್ತುಗಳ ಸಾಗಣೆ ವೆಚ್ಚ ಹೆಚ್ಚಾಯಿತು, ಸಾಗಣೆ ವೆಚ್ಚ ದುಬಾರಿಯಾದ್ದರಿಂದ ಕಂಪನಿಗಳ ಒಟ್ಟಾರೆ ಉತ್ಪದನಾ ವೆಚ್ಚವೂ ಹೆಚ್ಚಾಯಿತು. ಉತ್ಪಾದನಾ ವೆಚ್ಚವನ್ನು ಕಂಪನಿಗಳು ಗ್ರಾಹಕನಿಗೆ ವರ್ಗಾಯಿಸಿದವು. ಇದರಿಂದ ಮಾರುಕಟ್ಟೆಯಲ್ಲಿ ಖರೀದಿಸುವ ವಸ್ತುಗಳಿಗೆ ಗ್ರಾಹಕ ಹೆಚ್ಚು ಬೆಲೆ ತೆರುವಂತಾಯಿತು. ಹೆಚ್ಚು ಬೆಲೆ ಕೊಡಬೇಕಾದ ಸಂದರ್ಭ ಸೃಷ್ಟಿಯಾದ ಕಾರಣ, ಗ್ರಾಹಕನ ಜೇಬಲ್ಲಿ ದುಡ್ಡು ಕಡಿಮೆಯಾಗಿ ಖರೀದಿ ಸಾಮರ್ಥ್ಯ ಕುಂಠಿತವಾಯಿತು. ಹೀಗೆ ಹಣದುಬ್ಬರ ನಿಮ್ಮ ದುಡ್ಡನ್ನು ನಿಮಗೆ ಗೊತ್ತಿಲ್ಲದಂತೆ ನುಂಗಿಬಿಡುತ್ತದೆ.

**ಹಣದುಬ್ಬರದಿಂದ ಹಣದ ಮೌಲ್ಯ ತಗ್ಗುವುದು ಹೇಗೆ:** ಸದ್ಯ ವಾರ್ಷಿಕ ಹಣದುಬ್ಬರ ದರ ಶೇ 6 ರಷ್ಟಿದೆ ಎಂದು ಭಾವಿಸೋಣ. ಈ ಲೆಕ್ಕಾಚಾರದಂತೆ ಇಂದು ₹ 100ಕ್ಕೆ ಸಿಗುವ ವಸ್ತುವಿನ ಬೆಲೆ ಮುಂದಿನ ವರ್ಷ ₹ 106 ಆಗುತ್ತದೆ. ಈ ಕಾರಣದಿಂದಲೇ ನಿಮ್ಮ ಹೂಡಿಕೆಗಳಿಗೆ ಬೆಲೆ ಏರಿಕೆ (ಹಣದುಬ್ಬರ) ಮೀರಿ ಲಾಭಾಂಶ ತಂದುಕೊಡುವ ಸಾಮರ್ಥ್ಯ ಇರಬೇಕು ಎಂದು ಹೇಳುವುದು. ಈಗಿನ ಸ್ಥಿತಿಯಲ್ಲಿ ನಿಶ್ಚಿತ ಠೇವಣಿ (ಎಫ್‌ಡಿ) ಬಡ್ಡಿ ದರ ಶೇ 7 ರಷ್ಟಿದೆ. ಸದ್ಯದ ಹಣದುಬ್ಬರ ಪ್ರಮಾಣ ಶೇ 6 ರಷ್ಟಿದೆ ಎಂದಿಟ್ಟುಕೊಳ್ಳಿ. ಈ ವೇಳೆ ನೀವು ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡಿದರೆ ಹಣದುಬ್ಬರ ದರವನ್ನು ಕಳೆದ ನಂತರ ನಿಮಗೆ ಸಿಗುವ ಅಸಲಿ ಲಾಭಾಂಶ ಶೇ 1 ರಷ್ಟು ಮಾತ್ರ.

**ಹಾಗಾದ್ರೆ ಎಲ್ಲಿ ಹೂಡಿಕೆ ಮಾಡಬೇಕು:** ಹಣದುಬ್ಬರ ಮೀರಿ ಲಾಭಾಂಶ ತಂದುಕೊಡುವ ಸಾಮರ್ಥ್ಯವಿರುವುದು ಷೇರು ಮಾರುಕಟ್ಟೆ, ಮ್ಯೂಚುಯಲ್ ಫಂಡ್, ರಿಯಲ್ ಎಸ್ಟೇಟ್ ನಂತಹ ಹೂಡಿಕೆಗಳಿಗೆ ಮಾತ್ರ. ಷೇರು ಮಾರುಕಟ್ಟೆ ಸೂಚ್ಯಂಕಗಳ ಇತಿಹಾಸವನ್ನು ನೋಡಿದಾಗ ದೀರ್ಘಾವಧಿಯಲ್ಲಿ ಸರಾಸರಿ ಶೇ 15 ರಷ್ಟು ಲಾಭಾಂಶ ಸಿಕ್ಕಿರುವುದು ತಿಳಿಯುತ್ತದೆ. ನಿಫ್ಟಿ ಅಥವಾ ಸೆನ್ಸೆಕ್ಸ್ ಸೂಚ್ಯಂಕ ಆಧರಿಸಿ ಇಂಡೆಕ್ಸ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದವರು ಸಹಿತ ಶೇ 15 ರಷ್ಟು ಲಾಭಾಂಶ ಪಡೆದಿದ್ದಾರೆ. ನಿಶ್ಚಿತ ಠೇವಣಿಯ ಶೇ 7 ರ ಬಡ್ಡಿ ದರಕ್ಕೆ ಹೋಲಿಕೆ ಮಾಡಿ ನೋಡಿದಾಗ ಮಾರುಕಟ್ಟೆ ಆಧಾರಿತ ಹೂಡಿಕೆಗಳು ದುಪ್ಪಟ್ಟು ಲಾಭ ತಂದುಕೊಡುತ್ತವೆ ಎಂದೇ ಹೇಳಬಹುದು. ಅದರೆ ನೆನಪಿರಲಿ, ಷೇರು ಮಾರುಕಟ್ಟೆ ಮತ್ತು ಮ್ಯೂಚುಯಲ್ ಫಂಡ್‌ಗಳ ಬಗ್ಗೆ ಒಂದಿಷ್ಟು ತಿಳಿದ ನಂತರವಷ್ಟೇ ಅಲ್ಲಿ ಹೂಡಿಕೆ ಶುರು ಮಾಡಿ.

**ನಿಮಗೆ ಗೊತ್ತಿರಲಿ ‘ರೂಲ್ ಆಫ್ 70’:** ಬೆಲೆ ಏರಿಕೆ (ಹಣದುಬ್ಬರ) ಕಾರಣದಿಂದಾಗಿ ಎಷ್ಟು ವರ್ಷಗಳಿಗೊಮ್ಮೆ ನಿಮ್ಮ ಹಣದ ಮೌಲ್ಯ ಕುಸಿತಗೊಳ್ಳಲಿದೆ ಎನ್ನುವುದನ್ನು ‘ರೂಲ್ ಆಫ್ 70’ ತಿಳಿಸುತ್ತದೆ. 70 ರ ಜೊತೆ ಪ್ರಸುತ ಬೆಲೆ ಏರಿಕೆ ದರವನ್ನು ಭಾಗಿಸಿದಾಗ ಎಷ್ಟು ವರ್ಷಗಳಿಗೊಮ್ಮೆ ನಿಮ್ಮ ದುಡ್ಡಿನ ಮೌಲ್ಯ ಅರ್ಧಕ್ಕೆ ಇಳಿಯಲಿದೆ ಎನ್ನುವುದು ಗೊತ್ತಾಗುತ್ತದೆ. ಉದಾಹರಣೆಗೆ ಈಗ ಪ್ರಸ್ತುತ ಹಣದುಬ್ಬರ ದರ ಶೇ 6 ರಷ್ಟಿದೆ ಎಂದುಕೊಳ್ಳೋಣ. 70 ರ ಜೊತೆ 6 ಭಾಗಿಸಿದಾಗ ಪ್ರತಿ 12 ವರ್ಷಗಳಿಗೊಮ್ಮೆ ನಿಮ್ಮ ದುಡ್ಡು ಅರ್ಧದಷ್ಟು ಮೌಲ್ಯ ಕಳೆದುಕೊಳ್ಳುತ್ತದೆ ಎಂದು ತಿಳಿಯುತ್ತದೆ. ಅಂದರೆ ಇವತ್ತು ನಿಮ್ಮ ಬಳಿ ಇರುವ ನೂರು ರೂಪಾಯಿ 12 ವರ್ಷಗಳ ಬಳಿಕ ₹ 50 ರ ಮೌಲ್ಯವನ್ನು ಮಾತ್ರ ಹೊಂದಿರಲಿದೆ. ಅದಕ್ಕೆ ಹೇಳೋದು ನಾವು ಮಾಡುವ ಹೂಡಿಕೆಗಳಿಗೆ ಬೆಲೆ ಏರಿಕೆ ಸ್ಥಿತಿಯನ್ನು ಮೀರಿ ಲಾಭಾಂಶ ತಂದುಕೊಡುವ ಸಾಮರ್ಥ್ಯ ಇರಬೇಕು ಅಂತ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹ ವಿಭಾಗದ ಮುಖ್ಯಸ್ಥ)

**ಷೇರುಪೇಟೆ**

### ಕರಡಿ ಹಿಡಿತಕ್ಕೆ ಷೇರುಪೇಟೆ ಸೂಚ್ಯಂಕಗಳು

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರ ಕುಸಿತದ ಹಾದಿಯಲ್ಲಿ ಮುಂದುವರಿದಿವೆ. ಜೂನ್ 17 ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಭಾರೀ ಕುಸಿತ ದಾಖಲಿಸಿವೆ.

ಮಾರುಕಟ್ಟೆಯಲ್ಲಿ ಸದ್ಯ ಕರಡಿ ಹಿಡಿತ ಬಿಗಿಯಾಗಿದೆ. ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 5.41 ರಷ್ಟು ತಗ್ಗಿದೆ. ನಿಫ್ಟಿ ಶೇ 5.6 ರಷ್ಟು ಇಳಿಕೆ ಕಂಡಿದೆ. ಬೆಲೆ ಏರಿಕೆ ನಿಯಂತ್ರಣಕ್ಕೆ ಪ್ರಮುಖ ದೇಶಗಳ ಬ್ಯಾಂಕ್‌ಗಳು ಬಡ್ಡಿ ದರ ಹೆಚ್ಚಳ ಮಾಡಿರುವುದು ಸೇರಿದಂತೆ ಹಲವು ಅಂಶಗಳು ಸೂಚ್ಯಂಕಗಳ ಇಳಿಕೆಗೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಕುಸಿತ ಕಂಡುಬಂದಿದೆ. ಬಿಎಸ್‌ಇ ಲೋಹ ಮತ್ತು ಅನಿಲ ಸೂಚ್ಯಂಕ ತಲಾ ಶೇ 9 ರಷ್ಟು ಕುಸಿದಿವೆ. ಬಿಎಸ್‌ಇ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 8 ರಷ್ಟು ಇಳಿಕೆಯಾಗಿದೆ. ಇನ್ನು ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 6.6, ಮಿಡ್ ಕ್ಯಾಪ್ ಸೂಚ್ಯಂಕ ಶೇ 5.3, ಲಾರ್ಜ್ ಕ್ಯಾಪ್ 6.3 ರಷ್ಟು ತಗ್ಗಿವೆ. ಈವರೆಗೆ ಜೂನ್ ತಿಂಗಳಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 42,088 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 30, 312.85 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

**ಇಳಿಕೆ:** ಒಎನ್‌ಜಿಸಿ ಶೇ 14, ಹಿಂಡಾಲ್ಕೊ ಶೇ 14, ಟೆಕ್ ಮಹೀಂದ್ರ ಶೇ 13, ವಿಪ್ರೊ ಶೇ 13, ಟಾಟಾ ಸ್ಟೀಲ್ ಶೇ 12 ಮತ್ತು ಟೈಟಾನ್ ಶೇ 10 ರಷ್ಟು ಕುಸಿದಿವೆ.

**ಮುನ್ನೋಟ:** ಸದ್ಯದ ಸ್ಥಿತಿಯಲ್ಲಿ ಷೇರುಪೇಟೆಯಲ್ಲಿ ಚೇತರಿಕೆ ನಿರೀಕ್ಷಿಸಲು ಸಾಧ್ಯವಿಲ್ಲ. ಭಾರತದ ಷೇರುಪೇಟೆ ಮಾತ್ರವಲ್ಲ, ಜಾಗತಿಕವಾಗಿ ಪ್ರಮುಖ ಷೇರುಪೇಟೆಗಳೆಲ್ಲವೂ ನಕಾರಾತ್ಮಕ ಹಾದಿಯಲ್ಲೇ ಇವೆ. ಪ್ರಮುಖ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಹಣದುಬ್ಬರ ನಿಯಂತ್ರಣಕ್ಕಾಗಿ ಬಡ್ಡಿ ದರವನ್ನು ಮೇಲಿಂದ ಮೇಲೆ ಪರಿಷ್ಕರಣೆ ಮಾಡುತ್ತಿರುವುದು ಮಾರುಕಟ್ಟೆಗೆ ಮುಳುವಾಗಿದೆ.

# ಓಲಾದಿಂದ ‘ಮೂವ್ ಒಎಸ್2’ ಬಿಡುಗಡೆ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- 50 ಸಾವಿರಕ್ಕೂ ಹೆಚ್ಚಿನ ಗ್ರಾಹಕರಿಗೆ ಒಎಸ್ ಅಪ್ಡೇಟ್
- ಓಲಾ ಸ್ಕೂಟರ್‌ನಲ್ಲಿ ಸಿಗಲಿದೆ ಕ್ರೂಸ್ ಕಂಟ್ರೋಲ್ ಸೌಲಭ್ಯ

**ಪೊಚಂಪಳ್ಳಿ (ತಮಿಳುನಾಡು):** ಓಲಾ ಎಲೆಕ್ಟ್ರಿಕ್ ಕಂಪನಿಯು ತನ್ನ ವಿದ್ಯುತ್ ಚಾಲಿತ ಸ್ಕೂಟರ್ ‘ಎಸ್1 ಪ್ರೊ’ ಗ್ರಾಹಕರಿಗಾಗಿ ‘ಮೂವ್ ಒಎಸ್2’ ಕಾರ್ಯಾಚರಣೆ ವ್ಯವಸ್ಥೆಯನ್ನು ಭಾನುವಾರ ಬಿಡುಗಡೆ ಮಾಡಿದೆ. ಇದು ಜೂನ್ 30ರೊಳಗೆ ಹಾಲಿ ಗ್ರಾಹಕರಿಗೆ ಅಪ್ಡೇಟ್ ಮೂಲಕ ಲಭ್ಯವಾಗಲಿದೆ.

ತನ್ನ ಸ್ಕೂಟರ್ ಗ್ರಾಹಕರನ್ನು ಇಲ್ಲಿನ ತಯಾರಿಕಾ ಘಟಕಕ್ಕೆ ಆಹ್ವಾನಿಸಿದ್ದ ಓಲಾ, ಅವರ ಸಮ್ಮುಖದಲ್ಲಿ ಹೊಸ ಕಾರ್ಯಾಚರಣೆ ವ್ಯವಸ್ಥೆಯನ್ನು ಬಿಡುಗಡೆ ಮಾಡಿದೆ. ಅಂದಾಜು 50 ಸಾವಿರಕ್ಕೂ ಹೆಚ್ಚಿನ ಗ್ರಾಹಕರಿಗೆ ಈ ಅಪ್ಡೇಟ್ ಲಭ್ಯವಾಗಲಿದೆ ಎಂದು ಕಂಪನಿಯು ತಿಳಿಸಿದೆ. ಹಿಂದಿನ ಕಾರ್ಯಾಚರಣೆ ವ್ಯವಸ್ಥೆಯಲ್ಲಿ ಇದ್ದ ಕೆಲವು ಲೋಪಗಳನ್ನು ಇದು ಸರಿಪಡಿಸಲಿದೆ ಎಂದು ಕಂಪನಿ ಹೇಳಿದೆ.

ಹೊಸ ಕಾರ್ಯಾಚರಣೆ ವ್ಯವಸ್ಥೆ ಲಭ್ಯವಾದ ನಂತರದಲ್ಲಿ ಗ್ರಾಹಕರು ತಮ್ಮ ಸ್ಮಾರ್ಟ್‌ಫೋನ್‌ಅನ್ನು ಸ್ಕೂಟರ್ ಜೊತೆ ಬ್ಲೂಟೂತ್ ಮೂಲಕ ಜೋಡಿಸಿಕೊಂಡು, ತಮ್ಮ ಇಷ್ಟದ ಹಾಡು ಆಲಿಸಬಹುದು. ದೂರದಿಂದಲೇ ಸ್ಕೂಟರ್‌ಅನ್ನು ಲಾಕ್, ಅನ್‌ಲಾಕ್ ಮಾಡಬಹುದು. ಆ್ಯಪ್ ಮೂಲಕವೇ ತಮ್ಮ ಸ್ಕೂಟರ್‌ನ ಚಾರ್ಜ್ ಸ್ಥಿತಿ, ಇನ್ನು ಎಷ್ಟು ದೂರ ಕ್ರಮಿಸುವಷ್ಟು ಬ್ಯಾಟರಿ ಇದೆ ಎಂಬ ವಿವರ ಪರಿಶೀಲಿಸಬಹುದು.

ಪ್ರೀಮಿಯಂ ವಿಭಾಗದ ಕಾರುಗಳಲ್ಲಿ ಇರುವ ಕ್ರೂಸ್ ಕಂಟ್ರೋಲ್ ಸೌಲಭ್ಯವನ್ನು ಈ ಕಾರ್ಯಾಚರಣೆ ವ್ಯವಸ್ಥೆಯು ಓಲಾ ಸ್ಕೂಟರ್‌ಗಳಲ್ಲಿಯೂ ನೀಡಲಿದೆ.

ಓಲಾ ಎಸ್1 ಪ್ರೊ ಸ್ಕೂಟರ್‌ನ 100ಕ್ಕೂ ಹೆಚ್ಚಿನ ಗ್ರಾಹಕರು ಎಕಾನಮಿ ಮೋಡ್‌ನಲ್ಲಿ ಒಂದು ಬಾರಿಯ ಚಾರ್ಜ್‌ನಲ್ಲಿ 200ಕ್ಕೂ ಹೆಚ್ಚು ಕಿ.ಮೀ. ಪ್ರಯಾಣ ಮಾಡಿದ್ದಾರೆ ಎಂದು ಕಂಪನಿ ತಿಳಿಸಿದೆ. ಭಾನುವಾರದ ಕಾರ್ಯಕ್ರಮದಲ್ಲಿ ಈ ಗ್ರಾಹಕರಿಗೆ ಹೊಸ ಎಸ್1 ಪ್ರೊ ಸ್ಕೂಟರ್‌ಗಳನ್ನು ಬಹುಮಾನವಾಗಿ ನೀಡಲಾಯಿತು.

ಓಲಾ ಎಲೆಕ್ಟ್ರಿಕ್ ಕಂಪನಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಭವೀಶ್ ಅಗರ್ವಾಲ್ ಅವರು, ಮುಂದೆ ಬರಲಿರುವ ಓಲಾ ವಿದ್ಯುತ್ ಚಾಲಿತ ಕಾರಿನ ಕೆಲವು ವಿಡಿಯೊ ತುಣುಕುಗಳನ್ನು ಹಂಚಿಕೊಂಡರು. ಹೊಸ ಕಾರ್ಯಾಚರಣೆ ವ್ಯವಸ್ಥೆಯ ಬಿಡುಗಡೆ ಕಾರ್ಯಕ್ರಮದ ಭಾಗವಾಗಿ ಕಂಪನಿಯು ಗ್ರಾಹಕರಿಗೆ ತನ್ನ ಸ್ಕೂಟರ್ ತಯಾರಿಕಾ ಘಟಕದ ಭೇಟಿಯ ಅವಕಾಶವನ್ನೂ ಒದಗಿಸಿತ್ತು.

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| **ಬೆಂಗಳೂರು** | |
| 100 ಮೊಟ್ಟೆಗೆ | ₹525 |
| 12 ಮೊಟ್ಟೆಗೆ | ₹70 |
| **ಮೈಸೂರು** | |
| 100 ಮೊಟ್ಟೆಗೆ | ₹525 |

**ರಾಮನಗರ ರೇಷ್ಮೆ ಧಾರಣೆ**

| | |
|---|---|
| ಮಿಶ್ರತಳಿ | ₹400-630 |
| ದ್ವಿತಳಿ | ₹427-817 |

## ಜಾಫ್ನಾದಿಂದ ವಿಮಾನ ಪುನರಾರಂಭ: ಸಚಿವ

ಕೊಲಂಬೊ (ಪಿಟಿಐ): ಉತ್ತರ ಜಾಫ್ನಾದ ಪೆನಿನ್ಸುಲಾದ ಪಲಾಲಿ ನಿಲ್ದಾಣದಿಂದ ಭಾರತಕ್ಕೆ ವಿಮಾನ ಸಂಚಾರ ಮುಂದಿನ ತಿಂಗಳು ಪುನರಾರಂಭಿಸಲಾಗುವುದು ಎಂದು ವಿಮಾನಯಾನ ಸಚಿವ ನಿಮಲ್ ಸಿರಿಪಾಲ ಡಿ ಸಿಲ್ವಾ ಹೇಳಿದ್ದಾರೆ.

ಇದು ದೇಶದ ಪ್ರವಾಸೋದ್ಯಮ ಉತ್ತೇಜಿಸುವ ಜತೆಗೆ ಆರ್ಥಿಕ ಬಿಕ್ಕಟ್ಟು ತಗ್ಗಿಸಲಿದೆ. 75 ಆಸನಗಳ ವಿಮಾನಗಳ ಕಾರ್ಯಾಚರಣೆಗೆ ಮಾತ್ರ ಅವಕಾಶವಿರುವ ಸದ್ಯದ ರನ್‌ವೇ ಸುಧಾರಣೆಗೆ ಭಾರತದ ನೆರವಿನ ನಿರೀಕ್ಷೆಯಲ್ಲಿದ್ದೇವೆ. ಈ ವರ್ಷ 8 ಲಕ್ಷ ಪ್ರವಾಸಿಗರನ್ನು ಆಕರ್ಷಿಸಲಾಗುವುದು ಎಂದು ಅವರು ತಿಳಿಸಿದರು.

### ಸ್ಪೈಸ್ ಜೆಟ್ ವಿಮಾನ ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಹಕ್ಕಿ ಡಿಕ್ಕಿ

# ಎಂಜಿನ್‌ನಲ್ಲಿ ಬೆಂಕಿ: ಪ್ರಯಾಣಿಕರು ಪಾರು

ಪ್ರಜಾವಾಣಿ ವಾರ್ತೆ



ಪ್ರಾತಿನಿಧಿಕ ಚಿತ್ರ

ಪಟ್ನಾ (ಪಿಟಿಐ): ಇಲ್ಲಿನ ಜಯಪ್ರಕಾಶ್ ನಾರಾ ಯಣ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಭಾನುವಾರ ದೆಹಲಿಗೆ ಹೊರಟಿದ್ದ ಸ್ಪೈಸ್ ಜೆಟ್ ವಿಮಾನ ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ಹಕ್ಕಿ ಡಿಕ್ಕಿ ಹೊಡೆದ ಪರಿಣಾಮ ಎಂಜಿನ್‌ಲ್ಲಿ ಬೆಂಕಿ ಕಾಣಿಸಿಕೊಂಡ ಪರಿಣಾಮ ತುರ್ತು ಭೂಸ್ಪರ್ಶ ಮಾಡಿದೆ. ವಿಮಾನದಲ್ಲಿದ್ದ 185 ಪ್ರಯಾಣಿಕರು ಸ್ವಲ್ಪದರಲ್ಲೇ ಅಪಾಯದಿಂದ ಪಾರಾಗಿದ್ದಾರೆ.

ಮಧ್ಯಾಹ್ನ ಸುಮಾರು 12.10ಕ್ಕೆ ಟೇಕಾಫ್ ಆದ ವಿಮಾನದ ಎಂಜಿನ್‌ಗೆ ಹಕ್ಕಿ ಡಿಕ್ಕಿಹೊಡೆದಿದ್ದು, ನಗರದ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ ಎಂದು ಸ್ಪೈಸ್ ಜೆಟ್ ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನ ಟೇಕ್‌ಆಫ್ ಆದ 10 ನಿಮಿಷಗಳಲ್ಲಿ ತುರ್ತು ಭೂಸ್ಪರ್ಶ ಮಾಡಿದೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಅನೇಕ ಪ್ರಯಾಣಿಕರು ‘ವಿಮಾನದೊಳಗೆ 15ರಿಂದ 20 ನಿಮಿಷಗಳು ಭಯದಿಂದ ಕಳೆದೆವು’ ಎಂದು ಹೇಳಿದ್ದಾರೆ.

‘ವಿಮಾನದ ಎಂಜಿನ್‌ಗೆ ಹಕ್ಕಿ ಡಿಕ್ಕಿ ಹೊಡೆದಿರುವುದಾಗಿ ಕಾಕ್‌ಪಿಟ್ ಸಿಬ್ಬಂದಿ ಶಂಕಿಸಿದ್ದಾರೆ. ಮುನ್ನೆಚ್ಚರಿಕೆ ಕ್ರಮವಾಗಿ, ಪ್ರಮಾಣಿತ ಕಾರ್ಯವಿಧಾನದ ಪ್ರಕಾರ ವಿಮಾನದ ಪೈಲಟ್, ತೊಂದರೆ ಕಾಣಿಸಿಕೊಂಡ ಒಂದು ಎಂಜಿನ್ ಅನ್ನು ಸ್ಥಗಿತಗೊಳಿಸಿ, ವಿಮಾನವನ್ನು ತುರ್ತು ಭೂಸ್ಪರ್ಶ ಮಾಡಿಸಿದ್ದಾರೆ. ರನ್‌ವೇ ಬಳಿ ನಿಯೋಜಿಸಿದ್ದ ಅಗ್ನಿಶಾಮಕ ವಾಹನಗಳು ವಿಮಾನಕ್ಕೆ ಹೊತ್ತಿದ್ದ ಬೆಂಕಿ ನಂದಿಸಿದವು’ ಎಂದು ಸ್ಪೈಸ್ ಜೆಟ್ ಹೇಳಿಕೆಯಲ್ಲಿ ತಿಳಿಸಿದೆ.

‘ವಿಮಾನ ಪರಿಶೀಲನೆ ನಡೆಸಿದಾಗ ಹಕ್ಕಿ ಡಿಕ್ಕಿ ಹೊಡೆದಿರುವ ಪರಿಣಾಮ ವಿಮಾನದ ಎಂಜಿನ್‌ನ ಮೂರು ಬ್ಲೇಡ್‌ಗಳು ಹಾನಿಗೊಳಗಾಗಿರುವುದು ದೃಢಪಟ್ಟಿದೆ’ ಎಂದು ಅದು ಹೇಳಿದೆ.

‘ಟೇಕ್ ಆಫ್ ಆದ ಕೂಡಲೇ ವಿಮಾನ ನಡುಗಿತು. ಲೈಟ್‌ಗಳು ಆಫ್ ಆಗಲು ಆರಂಭಿಸಿದವು. ತಕ್ಷಣ ನಾವು ಎಚ್ಚರಿಕೆಯ ಅಲಾರಂ ಒತ್ತಿದೆವು. ವಿಮಾನದ ಸಿಬ್ಬಂದಿ ನಮಗೆ ಶಾಂತವಾಗಿರುವಂತೆ ವಿನಂತಿಸಿದರು. ವಿಮಾನವು ಬಿಹ್ತಾ ಅಥವಾ ಅರ್ರಾಹ್‌ನಲ್ಲಿರುವ ಏರ್‌ಸ್ಟ್ರಿಪ್‌ನಲ್ಲಿ ಇಳಿಯಲಿದೆ ಎನ್ನುವ ಮಾಹಿತಿ ನೀಡಿದರು. ಅದೃಷ್ಟವಶಾತ್,ಅದು ವಿಮಾನ ನಿಲ್ದಾಣದಲ್ಲಿಯೇ ಸುರಕ್ಷಿತವಾಗಿ ತುರ್ತು ಭೂಸ್ಪರ್ಶ ಮಾಡಿತು’ ಎಂದು ಪ್ರಯಾಣಿಕರು ತಿಳಿಸಿದರು.

‘ಪ್ರಯಾಣಿಕರಿಗೆ ಪರ್ಯಾಯ ವಿಮಾನದ ಮೂಲಕ ಅವರ ಗಮ್ಯಸ್ಥಾನಕ್ಕೆ ಪ್ರಯಾಣಿಸಲು ವ್ಯವಸ್ಥೆ ಮಾಡಲಾಯಿತು’ ಎಂದು ವಿಮಾನ ನಿಲ್ದಾಣದ ನಿರ್ದೇಶಕ ಅಂಚಲ್ ಪ್ರಕಾಶ್ ಹೇಳಿದ್ದಾರೆ.

## ಭಾರತದ 20 ಮೀನುಗಾರರ ಬಿಡುಗಡೆ

ಕರಾಚಿ (ಪಿಟಿಐ): ತನ್ನ ದೇಶದ ವ್ಯಾಪ್ತಿಯಲ್ಲಿರುವ ಸಮುದ್ರದಲ್ಲಿ ಅಕ್ರಮವಾಗಿ ಮೀನುಗಾರಿಕೆ ಮಾಡುತ್ತಿದ್ದಾರೆ ಎಂಬ ಆರೋಪದ ಮೇಲೆ, ಕಳೆದ ಐದು ವರ್ಷಗಳಿಂದ ಜೈಲು ಶಿಕ್ಷೆ ಅನುಭವಿಸುತ್ತಿದ್ದ ಭಾರತದ 20 ಮಂದಿ ಮೀನುಗಾರರನ್ನು ಪಾಕಿಸ್ತಾನವು ಸೌಹಾರ್ದತೆಯ ಆಧಾರದ ಮೇಲೆ ಭಾನುವಾರ ಬಿಡುಗಡೆಗೊಳಿಸಿದೆ.

‘20 ಮೀನುಗಾರರನ್ನು ಲಾಂಧಿ ಪ್ರದೇಶದ ಮಾಲಿರ್ ಜೈಲಿನಲ್ಲಿರಿಸಲಾಗಿತ್ತು. ಅವರನ್ನು ಈಧಿ ಸಂಸ್ಥೆಯ ಉಸ್ತುವಾರಿ ಹಾಗೂ ಪೊಲೀಸರ ರಕ್ಷಣೆಯೊಂದಿಗೆ ವಾಘಾ ಗಡಿಯಲ್ಲಿನ ಭಾರತದ ಅಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ’ ಎಂದು ಜೈಲ್ ಸೂಪರಿಂಟೆಂಡೆಂಟ್ ಮಹಮದ್ ಇರ್ಷಾದ್ ಹೇಳಿದರು.

## ‘ಆರೋಗ್ಯ ಸೇವೆಗೆ ಕೋ–ವಿನ್ ಬಳಕೆ’

ಪ್ಯಾರಿಸ್ (ಪಿಟಿಐ): ಮಕ್ಕಳ ಲಸಿಕೆ ಅಭಿಯಾನ, ಅಂಗಾಂಗ ಮತ್ತು ರಕ್ತದಾನ ಸೇವೆ ಒದಗಿಸಲು ಸರ್ಕಾರದ ಆನ್‌ಲೈನ್ ವೇದಿಕೆಗಳು ಆರು ತಿಂಗಳೊಳಗೆ ಸಿದ್ಧವಾಗುವ ನಿರೀಕ್ಷೆಯಿದೆ. ಆದರೆ, ಈ ವೇದಿಕೆಗಳಿಗೆ ಅಗತ್ಯ ದತ್ತಾಂಶ ಸೇರಿಸಲು ಇನ್ನಷ್ಟು ಸಮಯ ಬೇಕಾಗಬಹುದು ಎಂದು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ ಉನ್ನತ ಅಧಿಕಾರಿ ತಿಳಿಸಿದ್ದಾರೆ.

ವಿವಾಟೆಕ್ 2022ರ ವೇಳೆ ಕೋ-ವಿನ್ ಮುಖ್ಯಸ್ಥ ಮತ್ತು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ ಸಿಇಒ ಆರ್. ಎಸ್. ಶರ್ಮಾ, ‘ಪೋಷಕರು ತಮ್ಮ ಮಕ್ಕಳ ಲಸಿಕೆ ವೇಳಾಪಟ್ಟಿ ಪತ್ತೆಹಚ್ಚಲು ಮಗುವಿನ ಜನನ ಮತ್ತು ಲಸಿಕೆಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸಬೇಕಾಗುತ್ತದೆ. ಲಸಿಕಾ ಕೇಂದ್ರಗಳಂತಹ ಇನ್ನಿತರ ಅಗತ್ಯ ಮಾಹಿತಿಯನ್ನು ಇಲಾಖೆಗಳೂ ನೀಡುವ ಅಗತ್ಯವಿದೆ’ ಎಂದು ಹೇಳಿದರು.

‘ಒಂದೇ (ಕೋ-ವಿನ್) ಆರ್ಕಿಟೆಕ್ಚರ್ ಅನ್ನು ಆಧರಿಸಿ ಮೂರು ವಿಭಿನ್ನ ಅಪ್ಲಿಕೇಶನ್ ಸಿದ್ಧಪಡಿಸುತ್ತಿದ್ದೇವೆ’ ಎಂದರು.

# ಉಲ್ಬಣಿಸಿದ ಅಸ್ಸಾಂ ಪ್ರವಾಹ: 8 ಜನರ ಸಾವು

### ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ಬ್ರಹ್ಮಪುತ್ರಾ ನದಿ



ಅಸ್ಸಾಂ ಬಕ್ಸಾ ಜಿಲ್ಲೆಯಲ್ಲಿ ಭಾನುವಾರ ಭಾರಿ ಮಳೆಯಿಂದ ಧಮಧಾಮ–ಖಟಿಕುಚಿ ಸಂಪರ್ಕ ರಸ್ತೆಯು ಕುಸಿದಿದೆ– ಪಿಟಿಐ ಚಿತ್ರ

ಗುವಾಹಟಿ: ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿ ಉಲ್ಬಣಿಸಿದ್ದು, ಶನಿವಾರ ರಾತ್ರಿ ಎಡೆಬಿಡದೆ ಸುರಿದ ಮಳೆಯಿಂದಾಗಿ ಗುವಾಹಟಿ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳ ವಿವಿಧ ಪ್ರದೇಶಗಳು ಜಲಾವೃತವಾಗಿವೆ, 30 ಜಿಲ್ಲೆಗಳಲ್ಲಿ 37 ಲಕ್ಷ ಜನರು ಸಂಕಷ್ಟಕ್ಕೀಡಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬ್ರಹ್ಮಪುತ್ರಾ ಸೇರಿದಂತೆ ಅದರ ಉಪನದಿಗಳು ಅಪಾಯದ ಮಟ್ಟ ಮೀರಿ ಹರಿಯು ತ್ತಿವೆ. ಪ್ರವಾಹ, ಭೂಕುಸಿತ ದಿಂದಾಗಿ ಭಾನುವಾರ 8 ಮಂದಿ ಸಾವಿಗೀಡಾಗಿದ್ದಾರೆ. ಇದರೊಂದಿಗೆ ರಾಜ್ಯದಲ್ಲಿ ಈ ವರ್ಷದ ಪ್ರವಾಹ ಮತ್ತು ಭೂಕುಸಿತದಲ್ಲಿ ಸತ್ತವರ ಸಂಖ್ಯೆ 70ಕ್ಕೆ ಏರಿದೆ.

ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ವರದಿಗಳ ಪ್ರಕಾರ, ಕಳೆದ ಆರು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ರಾಜ್ಯದ ವಿವಿಧೆಡೆ ಪ್ರವಾಹ ಮತ್ತು ಭೂಕುಸಿತವುಂಟಾಗಿದೆ. ರಾಜ್ಯದ 118 ಕಂದಾಯ ವಲಯಗಳು ಮತ್ತು 4,462 ಗ್ರಾಮಗಳನ್ನು ಒಳಗೊಂಡ 30 ಜಿಲ್ಲೆಗಳು ಪ್ರವಾಹಕ್ಕೆ ಸಿಲುಕಿವೆ.

ಮಳೆಯಿಂದಾಗಿ ಗುವಾಹಟಿಯಲ್ಲಿ ಅಪಾರ ಪ್ರಮಾಣದಲ್ಲಿ ಹಾನಿಯುಂಟಾಗಿದೆ. ಬ್ರಹ್ಮಪುತ್ರ ನದಿಯಿಂದ ಹೆಚ್ಚುವರಿ ನೀರನ್ನು ಹೊರಬಿಡಲಾಗುತ್ತಿದ್ದು, ಗುವಾಹಟಿಯಲ್ಲಿ ನದಿಯ ನೀರಿನ ಮಟ್ಟವು ಅದರ ಉಪನದಿ ಭಾರಲುಗಿಂತ ಗಣನೀಯವಾಗಿ ಏರಿದೆ. ಹಾಗಾಗಿ, ಭಾರಲು ನದಿಯ ಸ್ಲೂಸ್ ಗೇಟ್‌ಗಳನ್ನು ಮುಚ್ಚಲಾಗಿದೆ ಎಂದು ಗುವಾಹಟಿ ಮಹಾನಗರ ಪಾಲಿಕೆ ಆಯುಕ್ತ ದೇವಶಿಶ್ ಶರ್ಮಾ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಪ್ರವಾಹದಿಂದಾಗಿ ಸಂಕಷ್ಟಕ್ಕೀಡಾದವರ ಪೈಕಿ 1. 56 ಲಕ್ಷ ಮಂದಿ ರಾಜ್ಯದ 514 ಪರಿಹಾರ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ. ರಾಜ್ಯ ವಿಪತ್ತು ನಿರ್ವಹಣಾ ಪಡೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿ, ಪೊಲೀಸರು ಮತ್ತು ಎಎಸ್‌ಡಿಎಂಎ ಸ್ವಯಂಸೇವಕರನ್ನು ರಕ್ಷಣಾ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ. ಇದುವರೆಗೆ 20,983 ಜನರನ್ನು ಸ್ಥಳಾಂತರಿಸಲಾಗಿದೆ ಎಂದು ವರದಿ ಹೇಳಿದೆ.

## ಅಫ್ಗನ್ ಹಿಂದೂ ಸಿಖ್‌ರಿಗೆ ಭಾರತದ ಇ–ವೀಸಾ

ನವದೆಹಲಿ(ಪಿಟಿಐ): ಕಾಬೂಲ್ ಗುರುದ್ವಾರದ ಮೇಲೆ ನಡೆದ ಭೀಕರ ಭಯೋತ್ಪಾದಕ ದಾಳಿಯ ನಂತರ ಅಫ್ಗಾನಿಸ್ತಾನದಲ್ಲಿ ವಾಸಿಸುತ್ತಿರುವ ನೂರಕ್ಕೂ ಹೆಚ್ಚು ಸಿಖ್ ಮತ್ತು ಹಿಂದೂಗಳಿಗೆ ಕೇಂದ್ರ ಸರ್ಕಾರ ಆದ್ಯತೆಯ ಇ–ವೀಸಾ ನೀಡಿದೆ.

ಈ ಜನರಿಗೆ ಎಲೆಕ್ಟ್ರಾನಿಕ್ ವೀಸಾಗಳನ್ನು ಗೃಹ ವ್ಯವಹಾರಗಳ ಸಚಿವಾಲಯವು ಆದ್ಯತೆಯ ಮೇಲೆ ವಿತರಿಸಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ಭಾನುವಾರ ತಿಳಿಸಿವೆ.

ಅಫ್ಘಾನಿಸ್ತಾನದ ರಾಜಧಾನಿಯ ಗುರುದ್ವಾರದ ಮೇಲಿನ ದಾಳಿಯ ಹೊಣೆಯನ್ನು ಇಸ್ಲಾಮಿಕ್ ಸ್ಟೇಟ್ ಭಯೋತ್ಪಾದಕ ಗುಂಪು ಹೊತ್ತಿದೆ. ಈ ದಾಳಿಯಲ್ಲಿ ಒಬ್ಬ ಸಿಖ್ ಸೇರಿ ಇಬ್ಬರು ಹತರಾಗಿದ್ದು, ಇದು ಪ್ರವಾದಿ ಮಹಮ್ಮದ್‌ರನ್ನು ಬೆಂಬಲಿಸುವ ಕ್ರಿಯೆ ಎಂದು ಉಗ್ರ ಸಂಘಟನೆ ಹೇಳಿಕೊಂಡಿದೆ.

ಕಾಬೂಲ್‌ನ ಬಾಗ್-ಎ ಬಾಲಾ ಪಕ್ಕದ ಗುರುದ್ವಾರ ಕರ್ತೆ ಪರ್ವಾನ್‌ನಲ್ಲಿ ಶನಿವಾರ ಹಲವು ಬಾರಿ ಸ್ಫೋಟಗಳು ಸಂಭವಿಸಿವೆ. ಸ್ಫೋಟಕಗಳಿದ್ದ ವಾಹನವು ಸಿಖ್‌ರ ಆರಾಧನಾ ಸ್ಥಳ ಪ್ರವೇಶಿಸಿದಂತೆ ಅಫ್ಗಾನ್ ಭದ್ರತಾ ಸಿಬ್ಬಂದಿ ತಡೆಯುವ ಮೂಲಕ ಭಾರಿ ದುರಂತ ತಪ್ಪಿಸಿದ್ದಾರೆ.

## ಪತ್ರಿಕಾ ಛಾಯಾಗ್ರಾಹಕ ಆರ್.ರವೀಂದ್ರನ್ ನಿಧನ

ನವದೆಹಲಿ: ಮಹತ್ವದ ಚಿತ್ರಗಳನ್ನು ತಮ್ಮ ಕ್ಯಾಮೆರಾದಲ್ಲಿ ಸೆರೆ ಹಿಡಿದು ಜನಪ್ರಿಯರಾಗಿದ್ದ ಪತ್ರಿಕಾ ಛಾಯಾಗ್ರಾಹಕ ಆರ್. ರವೀಂದ್ರನ್ (69) ಅವರು ಅಲ್ಪಕಾಲದ ಅನಾರೋಗ್ಯದಿಂದಾಗಿ ಭಾನುವಾರ ನಿಧನ ಹೊಂದಿದ್ದಾರೆ.

ವಿ.ಪಿ. ಸಿಂಗ್ ಸರ್ಕಾರದ ರಾಜೀನಾಮೆಗೆ ಕಾರಣವಾದ ಮಂಡಲ್ ಆಯೋಗದ ವರದಿ ವಿರುದ್ಧ ಪ್ರತಿಭಟನೆ ವೇಳೆ ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ರಾಜೀವ್ ಗೋಸ್ವಾಮಿ ಬೆಂಕಿ ಹಚ್ಚಿಕೊಂಡು ಆತ್ಮಾಹುತಿ ಮಾಡಿಕೊಂಡ ಚಿತ್ರವನ್ನು ಆರ್. ರವೀಂದ್ರನ್ ಸೆರೆ ಹಿಡಿದಿದ್ದರು.

## ಕಾಮೆಡ್–ಕೆ ‘ಯುಜಿಇಟಿ 2022’ ಪರೀಕ್ಷೆ ಸುಸೂತ್ರ


ಬೆಂಗಳೂರು: ರಾಜ್ಯದ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಹಾಗೂ ದೇಶದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿರುವ ಆಡಳಿತ ಮಂಡಳಿ ಕೋಟಾದ ಸೀಟುಗಳ ಪ್ರವೇಶಕ್ಕೆ ‘ಕರ್ನಾಟಕ ವೃತ್ತಿಪರ ಕಾಲೇಜುಗಳ ಒಕ್ಕೂಟ’ದ (ಕಾಮೆಡ್-ಕೆ) ‘ಯುಜಿಇಟಿ-2022’ ಪರೀಕ್ಷೆ ಭಾನುವಾರ ಆನ್‌ಲೈನ್ ಮೂಲಕ ದೇಶಾದ್ಯಂತ ಯಶಸ್ವಿಯಾಗಿ ಜರುಗಿತು. ಜುಲೈ 5 ರಂದು ಪರೀಕ್ಷೆಯ ಫಲಿತಾಂಶ ಪ್ರಕಟವಾಗಲಿದೆ.

ರಾಜ್ಯದ 22 ಸೇರಿದಂತೆ ದೇಶದಾದ್ಯಂತ 154 ನಗರಗಳ 230 ಕೇಂದ್ರಗಳಲ್ಲಿ ಭಾನುವಾರ ಭಾನುವಾರ ಬೆಳಿಗ್ಗೆ 9 ರಿಂದ 12 ಮತ್ತು ಮಧ್ಯಾಹ್ನ 2.30 ರಿಂದ 5.30 ರವರೆಗೆ ಪರೀಕ್ಷೆ ನಡೆಯಿತು. ರಾಜ್ಯದ 150 ಖಾಸಗಿ ಎಂಜಿನಿಯರಿಂಗ್ ಕಾಲೇಜಿನ ಸುಮಾರು 20 ಸಾವಿರ ಸೀಟುಗಳು ಹಾಗೂ ದೇಶದ ವಿವಿಧ 40 ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯಲು ಕಾಮೆಡ್-ಕೆ ಅರ್ಹತಾ ಪರೀಕ್ಷೆಯಾಗಿದೆ.

ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದ 61,635 ಅಭ್ಯರ್ಥಿಗಳ ಪೈಕಿ, ಬೆಳಗ್ಗಿನ ಅವಧಿಯಲ್ಲಿ ನಡೆದ ಪತ್ರಿಕೆ–1ಕ್ಕೆ ಶೇ 94.28 ಮತ್ತು ಮಧ್ಯಾಹ್ನ ನಡೆದ ಪತ್ರಿಕೆ-2 ಕ್ಕೆ ಶೇ 92.64 ಅಭ್ಯರ್ಥಿಗಳು ಹಾಜರಾಗಿದ್ದರು.

’ಕೋವಿಡ್ ಮಾರ್ಗಸೂಚಿಗಳನ್ನು ಅನುಸರಿಸಿ ಪರೀಕ್ಷೆಯನ್ನು ನಡೆಸಲಾಯಿತು. ಪರೀಕ್ಷೆ ವೇಳೆ ಯಾವುದೇ ಗೊಂದಲಗಳು ಉಂಟಾಗಿಲ್ಲ’ ಎಂದು ಕಾಮೆಡ್–ಕೆ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎಸ್. ಕುಮಾರ್ ತಿಳಿಸಿದ್ದಾರೆ.

‘ಪರೀಕ್ಷೆಯ ತಾತ್ಕಾಲಿಕ ಸರಿ ಉತ್ತರಗಳನ್ನು ಇದೇ 22 ರಂದು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಅಂತಿಮ ಉತ್ತರಗಳನ್ನು 30 ರಂದು ಪ್ರಕಟಿಸಲಾಗುವುದು’ ಎಂದೂ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



❦ ಸುಭಾಷಿತ ❦

ನಮ್ಮ ಅಜ್ಞಾನದ ಮಿತಿಯನ್ನು ತಿಳಿದುಕೊಳ್ಳುವುದೇ ನಿಜವಾದ ಜ್ಞಾನ. -ಕನ್‌ಫ್ಯೂಷಿಯಸ್

# ಪಿಯುಸಿ ಫಲಿತಾಂಶ ಕೊಂಚ ಏರಿಕೆ ಶಿಕ್ಷಣ ಕ್ಷೇತ್ರ ಪುನಶ್ಚೇತನದ ಸೂಚನೆ

**2021–22ನೇ** ಸಾಲಿನ ಶೈಕ್ಷಣಿಕ ವರ್ಷದ ಪಿಯುಸಿ ಫಲಿತಾಂಶವು ಕೊರೊನಾ ಆತಂಕದ ನಡುವೆಯೂ ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳ ಇಚ್ಛಾಶಕ್ತಿಯ ದ್ಯೋತಕವಾಗಿದೆ. ಕಳೆದ ವರ್ಷ ಕೊರೊನಾ ಸೋಂಕು ಉಲ್ಬಣಿಸಿದ ಕಾರಣದಿಂದಾಗಿ ಪರೀಕ್ಷೆಗಳನ್ನು ನಡೆಸದೆಯೇ ಫಲಿತಾಂಶ ಪ್ರಕಟಿಸಲಾಗಿತ್ತು. ಅದಕ್ಕೆ, ಹಿಂದಿನ ಸಾಲಿನಲ್ಲಿ ವಿದ್ಯಾರ್ಥಿಗಳು ತೋರಿದ ಸಾಧನೆಯನ್ನು ಪರಿಗಣಿಸಲಾಗಿತ್ತು. 2021–22ರ ಶೈಕ್ಷಣಿಕ ವರ್ಷದಲ್ಲೂ ಕೊರೊನಾ ಕಣ್ಣಾಮುಚ್ಚಾಲೆ ಮುಂದುವರಿದಿತ್ತಾದರೂ, ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಮನೋಭಾವ ಉಳಿಸಿಕೊಂಡು ದೃಢಮನಸ್ಸಿನಿಂದ ಪರೀಕ್ಷೆಯ ಸವಾಲನ್ನು ಎದುರಿಸಿದ್ದರ ಫಲಿತಾಂಶ ಈಗ ಪ್ರಕಟವಾಗಿದೆ. ಪ್ರಸಕ್ತ ಫಲಿತಾಂಶ ಹಾಗೂ ಕಳೆದ ತಿಂಗಳು ಪ್ರಕಟಗೊಂಡ ಎಸ್‌ಎಸ್‌ಎಲ್‌ಸಿ ಫಲಿತಾಂಶವು ಕೊರೊನಾ ಕಾರಣದಿಂದಾಗಿ ಏರುಪೇರಾಗಿದ್ದ ಶೈಕ್ಷಣಿಕ ವ್ಯವಸ್ಥೆಯನ್ನು ಮರಳಿ ಹಳಿಗೆ ತರುವ ದಿಸೆಯಲ್ಲಿ ಉತ್ತೇಜನ ನೀಡುವಂತಿವೆ. ಪರೀಕ್ಷೆಗೆ ಹಾಜರಾದ 6.68 ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳಲ್ಲಿ, ಶೇಕಡ 61.88ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿರುವುದು ಉತ್ತಮ ಸಾಧನೆಯೆಂದೇ ಹೇಳಬೇಕು. 2019–20ನೇ ಸಾಲಿನ ಶೇ 61.80ರಷ್ಟು ಫಲಿತಾಂಶ ಸಾಧನೆಗೆ ಹೋಲಿಸಿದರೆ, ಈ ಬಾರಿ ಫಲಿತಾಂಶದಲ್ಲಿ ಶೇ 0.08ರಷ್ಟು ಏರಿಕೆಯಾಗಿದೆ. ಪರೀಕ್ಷೆ ಸಂದರ್ಭದಲ್ಲಿ ತಲೆದೋರಿದ್ದ ಹಿಜಾಬ್ ವಿವಾದದಿಂದಾಗಿ ವಿಚಲಿತರಾಗದೆ, ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದಾರೆ. ಎಂದಿನಂತೆ ಈ ಬಾರಿಯೂ ಫಲಿತಾಂಶದಲ್ಲಿ ಬಾಲಕಿಯರು ಮೇಲುಗೈ ಸಾಧಿಸಿರುವುದು ಅಚ್ಚರಿಯ ಸಂಗತಿಯಲ್ಲವಾದರೂ, ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳ ಸಾಧನೆ ನಗರ ಪ್ರದೇಶಗಳ ಕಾಲೇಜುಗಳಿಗಿಂತ ಕೊಂಚ ಉತ್ತಮವಾಗಿರುವುದು ಗಮನಸೆಳೆಯುವಂತಿದೆ. ನಗರ ಪ್ರದೇಶಗಳ ಶೇ 61.78ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರೆ, ಗ್ರಾಮೀಣ ಪ್ರದೇಶಗಳ ಶೇ 62.18ರಷ್ಟು ಮಕ್ಕಳು ಯಶಸ್ಸು ಗಳಿಸಿದ್ದಾರೆ.



**ಆರ್ಥಿಕ ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಪ್ರದೇಶಗಳು ಶೈಕ್ಷಣಿಕ ಸಾಧನೆಯಲ್ಲೂ ಹಿನ್ನಡೆ ಅನುಭವಿಸುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು**

ಸವಲತ್ತುಗಳ ಕೊರತೆಯ ನಡುವೆಯೂ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳ ಸಾಧನೆ ವಿಶೇಷವಾದುದು. ಆದರೆ, ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು, ವಿಶೇಷವಾಗಿ ಕಲಾ ವಿಭಾಗದ ವಿದ್ಯಾರ್ಥಿಗಳ ಹಿನ್ನಡೆ ಕಳವಳ ಹುಟ್ಟಿಸುವಂತಹದ್ದು. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಶೇ 51.38ರಷ್ಟು ಉತ್ತೀರ್ಣರಾಗಿದ್ದಾರೆ, ಇಂಗ್ಲಿಷ್ ಮಾಧ್ಯಮದ ಶೇ 69.99ರಷ್ಟು ವಿದ್ಯಾರ್ಥಿಗಳು ಯಶಸ್ಸು ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಶೇ 64.97 ಹಾಗೂ ವಿಜ್ಞಾನ ವಿಷಯಗಳಲ್ಲಿ ಶೇ 72.53ರಷ್ಟು ವಿದ್ಯಾರ್ಥಿಗಳು ಯಶಸ್ಸು ಗಳಿಸಿದ್ದರೆ, ಕಲಾ ವಿಭಾಗದಲ್ಲಿನ ಯಶಸ್ಸಿನ ಪ್ರಮಾಣ ಶೇ 48.71ರಷ್ಟು ಮಾತ್ರ. 2019–20ರಲ್ಲಿ 41.27 ಹಾಗೂ 2018–19ರಲ್ಲಿ ಶೇ 50ಕ್ಕಿಂತಲೂ ಹೆಚ್ಚಿನ ಫಲಿತಾಂಶವನ್ನು ಕಲಾ ವಿಭಾಗ ಸಾಧಿಸಿತ್ತು. ಈ ಅಂಕಿಅಂಶಗಳು, ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಗಳಿಗೆ ದೊರೆಯುತ್ತಿರುವ ಉತ್ತೇಜನವು ಕಲಾ ವಿಭಾಗಕ್ಕೆ ದೊರೆಯದಿರುವುದನ್ನು ಸೂಚಿಸುವಂತಿವೆ. ಕಲಾ ವಿಭಾಗ ಮತ್ತು ವಿಜ್ಞಾನ ವಿಭಾಗಗಳ ನಡುವೆ ಶೇ 20ಕ್ಕಿಂತಲೂ ಹೆಚ್ಚಿನ ಫಲಿತಾಂಶದ ವ್ಯತ್ಯಾಸ ಇರುವುದು ಭಿನ್ನ ಜ್ಞಾನಕ್ಷೇತ್ರಗಳ ಬೆಳವಣಿಗೆಗೆ ಸಂಬಂಧಿಸಿದಂತೆ ಉಂಟಾಗಿರುವ ಅಸಮತೋಲನವನ್ನು ಸೂಚಿಸುವಂತಿದೆ.

ಫಲಿತಾಂಶ ಸಾಧನೆಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಮೊದಲೆರಡು ಸ್ಥಾನಗಳಲ್ಲಿವೆ. 2019–20ರ ಸಾಲಿನಲ್ಲಿ ಕೊನೆಯ ಸ್ಥಾನದಲ್ಲಿದ್ದ ವಿಜಯಪುರ ಜಿಲ್ಲೆಯು ಈ ಬಾರಿ ಪುಟಿದೇಳುವ ಮೂಲಕ ಮೂರನೇ ಸ್ಥಾನ ಪಡೆದಿದೆ. ಬೆಂಗಳೂರು ದಕ್ಷಿಣ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆಯು ನಾಲ್ಕು ಮತ್ತು ಐದನೇ ಸ್ಥಾನ ಪಡೆದಿವೆ. ರಾಯಚೂರು, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳು ಜಿಲ್ಲಾವಾರು ಫಲಿತಾಂಶ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿವೆ. 2019–20ರ ಸಾಲಿನ ಶೈಕ್ಷಣಿಕ ವರ್ಷದಲ್ಲೂ ಚಿತ್ರದುರ್ಗ ಮತ್ತು ರಾಯಚೂರು ಜಿಲ್ಲೆಗಳು ಕಳಪೆ ಸಾಧನೆ ತೋರಿದ್ದವು. ಉತ್ತೀರ್ಣತೆಯ ಪ್ರಮಾಣ ಕಡಿಮೆಯಿರುವ ಜಿಲ್ಲೆಗಳಲ್ಲಿ ಫಲಿತಾಂಶ ಸುಧಾರಣೆಗೆ ಸಂಬಂಧಿಸಿದಂತೆ [illegible]. ಆರ್ಥಿಕ ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಪ್ರದೇಶಗಳು ಶೈಕ್ಷಣಿಕ ಸಾಧನೆಯಲ್ಲೂ ಹಿನ್ನಡೆ ಅನುಭವಿಸುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಪ್ಯಾಕೇಜ್ ಪ್ರಕಟಿಸುವಂತೆ, ಶೈಕ್ಷಣಿಕವಾಗಿ ಹಿಂದುಳಿದಿರುವ ಜಿಲ್ಲೆಗಳ ವಿದ್ಯಾರ್ಥಿಗಳನ್ನು ಉತ್ತೇಜಿಸುವ ವಿಶೇಷ ಕಾರ್ಯಕ್ರಮಗಳನ್ನು ಸರ್ಕಾರ ರೂಪಿಸಬೇಕಾಗಿದೆ. ಕಲಾ ವಿಭಾಗಕ್ಕೆ ಹೆಚ್ಚಿನ ವಿದ್ಯಾರ್ಥಿಗಳನ್ನು ಸೆಳೆಯುವ ದಿಸೆಯಲ್ಲಿ ಕೂಡ ಶೈಕ್ಷಣಿಕ ವಲಯದಲ್ಲಿ ಚಿಂತನೆ ನಡೆಯಬೇಕಾಗಿದೆ. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಫಲಿತಾಂಶಗಳು ಪ್ರಕಟವಾದ ಸಂದರ್ಭದಲ್ಲಿ ಪ್ರದೇಶವಾರು ಶೈಕ್ಷಣಿಕ ಸ್ಥಿತಿಗತಿ ಬಗ್ಗೆ ವಿಶ್ಲೇಷಣೆ ನಡೆಯುತ್ತದೆ. ಈ ಚರ್ಚೆ ನಿರಂತರವಾಗಿರಬೇಕು ಹಾಗೂ ಶಿಕ್ಷಣದ ಗುಣಮಟ್ಟವನ್ನು ರಾಜ್ಯದ ಎಲ್ಲೆಡೆ ಏಕರೂಪದಲ್ಲಿರುವಂತೆ ನೋಡಿಕೊಳ್ಳುವ ದಿಸೆಯಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ.

## ದಿನದ ಟ್ವೀಟ್

**ಅಗ್ನಿಪರೀಕ್ಷೆಗೆ ಹೆದರಬೇಕಿಲ್ಲ**



ಶೈಕ್ಷಣಿಕ ವ್ಯವಸ್ಥೆಯಲ್ಲಿ ಪರೀಕ್ಷಾ ಹಂತಗಳು ಇರುವಂತೆಯೇ ಬದುಕಿನುದ್ದಕ್ಕೂ ಅಗ್ನಿಪರೀಕ್ಷೆಗಳೇ ಇರುತ್ತವೆ. ಅವನ್ನು ಧೈರ್ಯ, ಛಲದಿಂದ ಎದುರಿಸಬೇಕು ಎಂಬುದನ್ನು ವಿದ್ಯಾರ್ಥಿಗಳಿಗೆ ಪೋಷಕರು, ಬೋಧಕರು, ಶಿಕ್ಷಣ ಸಂಸ್ಥೆಗಳು & ಶಿಕ್ಷಣ ಇಲಾಖೆ ಮನದಟ್ಟು ಮಾಡಿಸಬೇಕು.

**ಎಚ್.ಡಿ.ಕುಮಾರಸ್ವಾಮಿ**, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

## ಕಿಡಿನುಡಿ



**ಅಗ್ನಿವೀರರು ಬಿಜೆಪಿ ಕಚೇರಿಯಲ್ಲಿ ಗಾರ್ಡುಗಳಾಗಿ ಸೇರಿಕೊಳ್ಳುವುದಾದರೆ ಅದು ಸ್ವಾಗತಾರ್ಹ ಎಂದು ಬಿಜೆಪಿಯ ಕೈಲಾಶ್ ವಿಜಯ್‌ವರ್ಗೀಯ ಹೇಳಿದ್ದಾರೆ. ಭದ್ರತಾ ಸಿಬ್ಬಂದಿಯ ಪಾತ್ರ ಪ್ರಮುಖವಾದುದು. ಆದರೆ, ಸೈನಿಕರು ಇನ್ನೂ ಹೆಚ್ಚಿನ ಗೌರವ ಬೇಕು ಎಂಬ ಆಕಾಂಕ್ಷೆ ಹೊಂದಿರುತ್ತಾರೆ- 'ಗೌರವ' ಎಂದರೆ ಮೇಲ್ಮುಖ ಚಲನೆ ಎಂದರ್ಥ. ಟಿ-90 ಟ್ಯಾಂಕ್ ಗನ್ ಅನ್ನು ನಿರ್ವಹಿಸಿದ ಯೋಧನೊಬ್ಬ, ಕೈಯಲ್ಲಿ ಲಾಠಿ ಹಿಡಿದು ಬೆಂಚ್ ಮೇಲೆ ಕುಳಿತುಕೊಳ್ಳಲು ಬಯಸುವುದಿಲ್ಲ.**

**ವಿಷ್ಣು ಸೋಮ್**, ಪತ್ರಕರ್ತ

## 25 ವರ್ಷಗಳ ಹಿಂದೆ

ಶುಕ್ರವಾರ, 20-6-1997

● **ಸಮವಸ್ತ್ರಗಳಿಗೆ ಇನ್ನೂ ರಜೆ!**

**ಬೆಂಗಳೂರು, ಜೂನ್ 19**– ಕಳೆದ ವರ್ಷದಂತೆ ಈ ಬಾರಿಯೂ ರಾಜ್ಯದಲ್ಲಿ ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರ ವಿತರಣೆಯಲ್ಲಿ ವಿಳಂಬವಾಗಲಿದೆ. ಇದರಿಂದಾಗಿ ಪ್ರಸ್ತಕ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಮೊದಲ ಅರ್ಧ ಭಾಗದಲ್ಲಿ, ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸುಮಾರು 28 ಲಕ್ಷ ವಿದ್ಯಾರ್ಥಿಗಳು ಸಮವಸ್ತ್ರ ಧರಿಸದೆಯೇ ಶಾಲೆಗೆ ಹೋಗಬೇಕಾಗಿದೆ.

ಶೈಕ್ಷಣಿಕ ವರ್ಷ ಪ್ರಾರಂಭವಾಗಿ ಮೂರು ವಾರವಾಗಿದೆ. ರಾಜ್ಯದ ಬಹುತೇಕ ಕಡೆ ಶಾಲೆಗಳಲ್ಲಿ ಪ್ರವೇಶ ಪ್ರಕ್ರಿಯೆ ಪೂರ್ಣಗೊಂಡಿದೆ. ಆದರೆ, ಸರ್ಕಾರ ಜಾರಿಗೆ ತಂದಿರುವ, ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರ ವಿತರಣೆ ಮಾಡುವ ಕಾರ್ಯಕ್ರಮಕ್ಕೆ ಮಾತ್ರ ಇನ್ನೂ ಚಾಲನೆ ದೊರೆತಿಲ್ಲ.

## 50 ವರ್ಷಗಳ ಹಿಂದೆ

ಮಂಗಳವಾರ, 20-6-1972

● **ಎರಡೂ ಕಾಂಗ್ರೆಸ್ಸಿಗೆ ತಲಾ 3 ಸ್ಥಾನಗಳು: ಇನ್ನೊಂದು ಪಕ್ಷೇತರರಿಗೆ**

**ಬೆಂಗಳೂರು, ಜೂನ್ 19**– ಮೂರು ಸ್ಥಾನಗಳು ಕಾಂಗ್ರೆಸ್ಸಿಗೆ, ಮೂರು ಸ್ಥಾನಗಳು ಸಂಸ್ಥಾ ಕಾಂಗ್ರೆಸ್ಸಿಗೆ, ಒಂದು ಜನಸಂಘದ ಬೆಂಬಲ ಪಡೆದ ಪಕ್ಷೇತರರಿಗೆ.

ಚುನಾವಣೆ ನಡೆದ 11 ವಿಧಾನಪರಿಷತ್ ಸ್ಥಾನಗಳಲ್ಲಿ ಇಂದು ಪ್ರಕಟವಾದ ಏಳು ಸ್ಥಾನಗಳಲ್ಲಿ ಈ ರೀತಿಯ ಫಲಿತಾಂಶ ಬಂದಿದೆ.

● **ಕನ್ನಡದಲ್ಲಿ ನವೋದಯ ಸಾಹಿತ್ಯದ ದ್ರೋಣಾಚಾರ್ಯ ಶ್ರೀನಿವಾಸರಿಗೆ ಸನ್ಮಾನ**

**ಬೆಂಗಳೂರು, ಜೂನ್ 19**– 81 ತುಂಬಿದ ಸಣ್ಣ ಕತೆಗಳ 'ಶ್ರೀನಿವಾಸ' 'ಕನ್ನಡ ನವೋದಯ ಸಾಹಿತ್ಯದ ದ್ರೋಣಾಚಾರ್ಯ' ಎಂದು ವರ್ಣಿಸಲ್ಪಟ್ಟಾಗ, 'ಶತಾಯುವಾಗಿ ಬಾಳು' ಎಂದು ಹರಸಿದರು 'ನವೋದಯ ಸಾಹಿತ್ಯದ ಭೀಷ್ಮಾಚಾರ್ಯ' ಡಿ.ವಿ.ಜಿ.

ನವೋದಯ ಸಾಹಿತ್ಯದ ಈ ಭೀಷ್ಮ, ದ್ರೋಣರನ್ನು ಒಂದೇ ವೇದಿಕೆಯಲ್ಲಿ ಏಕಕಾಲದಲ್ಲಿ ಕಾಣುವ ಈ ಅಪೂರ್ವ ಸುಯೋಗ ಒದಗಿದ್ದು, ಹಿರಿಯ ಸಾಹಿತಿಗಳಿಗೆ ಸಂಭಾವನಾ ಗ್ರಂಥ ಅರ್ಪಿಸುವ ಸಂಪ್ರದಾಯಕ್ಕೆ ನಾಂದಿ ಹಾಡಿದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರಿಗೇ 'ಶ್ರೀನಿವಾಸ' ಸಂಭಾವನಾ ಗ್ರಂಥವನ್ನು ಅರ್ಪಿಸಿದ ಸಮಾರಂಭದಲ್ಲಿ.

'ಜೀವನವನ್ನೇ ತಮ್ಮ ಸಂದೇಶಗಳ ದರ್ಪಣವನ್ನಾಗಿ ಮಾಡಿಕೊಂಡ' ಶ್ರೀ ಮಾಸ್ತಿ ಅವರಿಗೆ 81 ತುಂಬಿದೆ. ಅವರು ನೂರು ಕಾಲ ಬಾಳಲಿ, ನೂರಕ್ಕೂ ಹೆಚ್ಚು ಕಾಲ ಬಾಳಲಿ ಎಂದು 'ಕಿರಿಯ' ಸಾಹಿತಿಗಳ ಹಾರೈಕೆ, ಡಿ.ವಿ.ಜಿ ಅವರ ಆಶೀರ್ವಾದ.

ಅಭಿನಂದನ ಭಾಷಣ ಮಾಡಿದ ಪ್ರೊ. ವಿ. ಸೀತಾರಾಮಯ್ಯ ಅವರು, ನಾಟಕ, ಕವಿತೆ, ವಿಮರ್ಶೆ, ಸಣ್ಣಕತೆಗಳನ್ನೆಲ್ಲ ಬರೆದಿದ್ದರೂ ಮಾಸ್ತಿಯವರನ್ನು ಸಣ್ಣಕತೆಗಳ 'ಶ್ರೀನಿವಾಸ' ಎಂದು ಕರೆಯುವುದನ್ನು ಆಕ್ಷೇಪಿಸಿದರು. 'ಮಾಸ್ತಿಯವರಿಗೆ ಸಂಭಾವನಾ ಗ್ರಂಥ ಅರ್ಪಿಸುವ ಕಾರ್ಯ 30–40 ವರ್ಷಗಳ ಹಿಂದೆಯೇ ಆಗಬೇಕಿತ್ತು' ಎಂದರು.

### ಕೊಲೆಗಾರರೇ ದಾರಿಯಾಗುವುದಾದರೆ ಆ ದಾರಿಯಲ್ಲಿ ಜೀವ ಹುಟ್ಟುವುದೆಂತು?

# ಇಂದಿನ ಗೋಜಲಲ್ಲಿ ನಾಳೆಯನ್ನು ಕಾಣದವರು



ವಿಶ್ಲೇಷಣೆ

ಸಬಿತಾ ಬನ್ನಾಡಿ

**ಹತ್ಯೆಯ** ಪಾಠವು ಆತ್ಮಹತ್ಯೆಯ ದಾರಿಯನ್ನಲ್ಲದೆ ಬೇರೆ ದಾರಿ ತೋರೀತೇ? ಹತ್ಯೆ ಎನ್ನುವುದನ್ನು ನಾನಿಲ್ಲಿ ಕೇವಲ ದೇಹದ ಹತನವೆಂದಷ್ಟೇ ಹೇಳುತ್ತಿಲ್ಲ. ಎಷ್ಟೋ ಬಾರಿ ನಾವು ನಮ್ಮ ಸುತ್ತಲಿನವರ ಬದುಕನ್ನು ಕಟ್ಟುಪಾಡುಗಳ ಹೆಸರಿನಲ್ಲಿ ಉಸಿರುಕಟ್ಟಿಸಿ ಕೊಂದು, ನಮ್ಮ ಬದುಕನ್ನೂ ಕೊಂದುಕೊಳ್ಳುತ್ತಾ ಅದರ ಅರಿವಿಲ್ಲದ ಮೂರ್ಖರಂತೆ ಮೆರೆಯಲು ಪ್ರಯತ್ನಿಸುತ್ತಿರುತ್ತೇವಲ್ಲವೇ?


ರವೀಂದ್ರನಾಥ ಟ್ಯಾಗೋರ್ 1903ರಲ್ಲಿ ಬರೆದ ಕಾದಂಬರಿ 'ಚೋಕೇರ್ ಬಾಲಿ'. ಮಹೇಂದ್ರ ಎಂಬ ಡಾಕ್ಟರ್ ತಾನು ನೋಡದೇ ತಿರಸ್ಕರಿಸಿದ ಕುಮುದಿನಿಯನ್ನು, ತಾನು ಅತ್ಯಂತ ಮೆಚ್ಚಿಕೊಂಡು ಮದುವೆಯಾದ ಹೆಂಡತಿ ಆಶಾಲತಾಳೊಂದಿಗೆ ಪ್ರೇಮದ ತೀವ್ರತೆಯಲ್ಲಿರುವಾಗ ಆಕಸ್ಮಿಕವಾಗಿ ನೋಡುತ್ತಾನೆ. ಬೇರೊಬ್ಬನನ್ನು ಮದುವೆಯಾಗಿ ಆರು ತಿಂಗಳಿಗೇ ವಿಧವೆಯಾಗಿರುವ ಅವಳ ರೂಪು, ಚುರುಕುಮತಿ, ಪ್ರತಿಭೆ ನೋಡ ನೋಡುತ್ತಾ ಹೆಂಡತಿಯನ್ನು ನಿರ್ಲಕ್ಷಿಸಿ ಅವಳೆಡೆಗೆ ಸೆಳೆತಕ್ಕೆ ಒಳಗಾಗುತ್ತಾನೆ. ಅವಳೋ, ಮಹೇಂದ್ರನ ಗೆಳೆಯ ಡಾ. ಬೆಹಾರಿಯನ್ನು ಇಷ್ಟಪಟ್ಟಿರುತ್ತಾಳೆ. ಬೆಹಾರಿ ಮದುವೆಗೆ ಸಿದ್ಧನಾಗುತ್ತಾನೆ. ಆದರೆ ವಿಧವೆಯಾದ ತಾನು ಅವನಿಗೆ ಸೂಕ್ತಳಲ್ಲ ಎಂಬ ಭಾವನೆಯಿಂದ ಕೊನೆಯ ಕ್ಷಣದಲ್ಲಿ ತನ್ನಾಸೆಯನ್ನು ಕೈಚೆಲ್ಲಿ ವಿಧವಾಶ್ರಮ ಸೇರಿಕೊಳ್ಳುವ ನಿರ್ಧಾರಕ್ಕೆ ಬರುತ್ತಾಳೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ್ದು ಮಹೇಂದ್ರನ ನಡವಳಿಕೆ. ತನಗೆ ಬೇಡವಾದಾಗ ತಿರಸ್ಕರಿಸುವ, ಬೇಕಾದಾಗ ತನ್ನ ಹೆಂಡತಿಯನ್ನೇ ತಿರಸ್ಕರಿಸುವ, ಬೇಕೆನಿಸಿದಾಗ ಕುಮುದಿನಿಯ ಬೆನ್ನು ಬೀಳುವ ಈತ, ಕುಮುದಿನಿ ತನ್ನ ಗೆಳೆಯನಿಗಾಗಿ ತನ್ನನ್ನು ಬಳಸಿಕೊಳ್ಳುತ್ತಿದ್ದಾಳೆ ಎಂದು ತಿಳಿಯುತ್ತಲೇ, ಅವಳನ್ನೇ ದೂಷಿಸುತ್ತಾನೆ. ತಾನು ತನಗಾಗಿ ಎಲ್ಲರನ್ನೂ ಬಳಸಿ ಎಸೆಯುತ್ತಿದ್ದೇನೆ ಎಂದು ಆತನಿಗೆ ಎಂದಿಗೂ ಅನ್ನಿಸುವುದೇ ಇಲ್ಲ. ಕಿರು ಹರೆಯದ ವಿಧವೆಗೆ ಬದುಕಿನ ಎಲ್ಲ ಸವಿಗಳ ನಿರಾಕರಣೆಯೆನ್ನುವುದು, ಅವನನ್ನೂ ಸೇರಿಸಿ, ಸ್ವತಃ ವಿಧವೆಯರಾದ ಹಿರಿಯ ಹೆಂಗಸರಿಗೂ ಕ್ರೌರ್ಯವೆಂದೆನಿಸುವುದಿಲ್ಲ. ಅಷ್ಟರಮಟ್ಟಿಗೆ ಅದನ್ನು ಒಪ್ಪಿಸಲಾಗಿದೆ.

ಅವಳ ಬದುಕಿನ ಹತ್ಯೆಯಷ್ಟೇ ಅಲ್ಲ, ಅವನ ಹೆಂಡತಿಯ ಬದುಕಿನದೂ ಹತ್ಯೆಯೇ ಆದರೂ ಅದು ಯಾರಿಗೂ ಹಾಗೆ ಅನ್ನಿಸುವುದೇ ಇಲ್ಲ. ಅವನದಾದರೂ ಆತ್ಮಹತ್ಯೆಯ ನಡೆ. ಆದರೆ ಆತ ಅಂದುಕೊಂಡಿದ್ದು ಅದು ಅವನ ಅಧಿಕಾರ. ಅವನಿಗೆ ಈ ಹಕ್ಕು ಎಲ್ಲಿಂದ ಹೇಗೆ ಬಂತು? ಈ ಶಸ್ತ್ರವನ್ನು ಅವನಿಗೆ ನೀಡಿದವರಾರು? ಇಲ್ಲಿ ಅವನೊಂದು ನೆಪ. ತನ್ನಿಚ್ಛೆ ಬಂದಂತೆ ವರ್ತಿಸುವ ಅವನು ಈ ವ್ಯವಸ್ಥೆಯ ಅಧಿಕಾರಸ್ಥರ ಪ್ರತಿನಿಧಿ. ಕುಮುದಿನಿ, ಆಶಾಲತಾ ಈ ಅಧಿಕಾರಸ್ಥರು ಆಳುವ ಪ್ರಜೆಗಳು. ಅವರು ಹೇಳಿದ್ದೇ ಶಾಸನ. ಪ್ರಜೆಗಳು ಪ್ರಶ್ನೆ ಎತ್ತಿದರೆ ಅದು ಯಾರೋ ಅವರ ತಲೆಗೆ ತುಂಬಿದ ಅಪಚಾರ. ಹಿರಿಯ ಹೆಂಗಸರು ಒಪ್ಪಿತ ಬದುಕನ್ನು 'ಸುಖವಾಗಿ' ಕಳೆಯುತ್ತಿಲ್ಲವೇ? ನಿಮ್ಮದೇನು ನಡುವೆ ತಕರಾರು? ಎಂದು ಝುಂಕಿಸುವ ವಕ್ತಾರರು ಮತ್ತೆ ಬಂಡಿ ಹಿಂದೆಳೆಯಲು, ಸೇವಕರನ್ನು ಹುಟ್ಟುಹಾಕಿಕೊಳ್ಳಲು ಎಲ್ಲ ನ್ಯಾಯಬದ್ಧ ಚಿಂತನೆಗಳ ಮೇಲೆ ದಾಳಿ ಮಾಡುತ್ತಾ, ದಾಳಿಕೋರರನ್ನು ವಿಜೃಂಭಿಸುತ್ತಾರೆ.

ಎಲ್ಲ ಅಡಚಣೆಗಳಾಚೆಗೆ ಇಂದು ಹೆಣ್ಣುಮಕ್ಕಳು, ಎಲ್ಲ ಜಾತಿಯ ದಮನಿತರು ತಮ್ಮನ್ನು ತಾವು ನಿರೂಪಿಸಿಕೊಂಡಿದ್ದಾರೆ. ಆದರೆ ತಾವೂ ಅಧಿಕಾರಸ್ಥರಾಗುತ್ತಿದ್ದಂತೆಯೇ ಹತ್ತಿದ ಏಣಿಯನ್ನು ಮರೆಯುತ್ತಿದ್ದಾರೆ. ಅಥವಾ ಕೆಡವಿದ ಬಲೆಗೆ ಬೀಳುತ್ತಿದ್ದಾರೆ. ದ್ವೇಷವನ್ನು ರಕ್ತಗತಗೊಳಿಸಿಕೊಳ್ಳುವಲ್ಲಿ ಮುಳುಗಿದ್ದಾರೆ. ಯಾರು ಗಾಂಧಿಯನ್ನು ದ್ವೇಷಿಸುತ್ತಿದ್ದಾರೋ ಅವರೇ ಅಂಬೇಡ್ಕರ್ ಮತ್ತು ಕುವೆಂಪು ಅವರನ್ನೂ ದ್ವೇಷಿಸುವುದು ಗುಟ್ಟಾಗಿತ್ತು. ಈಗ ರಟ್ಟಾಗತೊಡಗಿದೆ. ಅಂಬೇಡ್ಕರ್, ಕುವೆಂಪು ಅವರು ಅಂದು ಎತ್ತಿದ ಪ್ರಶ್ನೆಗಳ ಫಲವಾಗಿ ಇಂದು ಬದುಕಿನ ಸ್ವಾತಂತ್ರ್ಯ ಅನುಭವಿಸುತ್ತಿರುವವರೂ ಮೂಲದಲ್ಲಿ ಅವರ್ಯಾರನ್ನೂ ಸಮಗ್ರವಾಗಿ ಓದದೆ, ಯಾರೋ ಉಲ್ಲೇಖಿಸಿದ ಅರೆಬರೆ ಹೇಳಿಕೆಗಳನ್ನೇ ನಂಬಿ ಈ ಎಡಬಿಡಂಗಿತನದ ಬೆನ್ನು ಬಿದ್ದಿದ್ದಾರೆ. ತಮ್ಮ ಅಸ್ಮಿತೆಯು ಆಳವಾಗಿ ಈ ನೆಲದಲ್ಲಿ ಬೇರೂರಿದಾಗಲೇ ದೇಶವೆಂಬ ಹೆಮ್ಮರ ದೃಢವಾಗಿ ಬೆಳೆಯುವುದು ಎಂದು ಅರಿಯದೇ ತಮ್ಮ ಅಸ್ಮಿತೆಯ ಮೇಲೇ ಯಾಕೆ ದಾಳಿಯಾಗುತ್ತಿದೆ ಎಂದು ಕೇಳಲಾರದವರಾಗಿದ್ದಾರೆ.

ಗೋಜಲುಗಳ ಸಂತೆ ಸೃಷ್ಟಿಸಿ, ಎಳೆಯರಿಗೆ 'ಒಡೆಯುವುದು', 'ಬಡಿಯುವುದು', 'ಕೊಲ್ಲುವುದು', 'ಆಕ್ರಮಿಸುವುದು' ಮೊದಲಾದವುಗಳನ್ನೇ ದೃಶ್ಯ ಮಾಧ್ಯಮಗಳಲ್ಲಿ, ಸುದ್ದಿ ಮಾಧ್ಯಮಗಳಲ್ಲಿ ವೈಭವೀಕರಿಸುತ್ತಾ, ಅಂತಹ ವಿಡಿಯೊಗಳನ್ನು ಅಲ್ಲಲ್ಲಿ ಕೆಲವು ಕಲಿಕಾ ಕೇಂದ್ರಗಳಲ್ಲಿ ತೋರಿಸುತ್ತಾ, ಶಸ್ತ್ರ ತರಬೇತಿ ನೀಡುತ್ತಾ, ವಿಜಯೋನ್ಮಾದದಲ್ಲಿ ಹ್ಹೂಂಕರಿಸುತ್ತಾ, ಕೊಲೆಗಾರರನ್ನೇ ನಾಯಕರನ್ನಾಗಿಸುತ್ತಾ ಪುಳಕಿತರಾಗುತ್ತಿದ್ದೇವೆ. ಈಚೆಗೆ ದಕ್ಷಿಣ ಕನ್ನಡದ ರಸ್ತೆಯೊಂದಕ್ಕೆ ಗೋಡ್ಸೆ ಹೆಸರನ್ನು ನಾಮಕರಣ ಮಾಡಿದ ಫಲಕ ಹಾಕುವ ಮತ್ತು ತೆಗೆಯುವ ಪ್ರಹಸನ ನಡೆಯಿತು. ಆದರೆ ಇದು ನಿರ್ಲಕ್ಷಿಸುವ ಸಂಗತಿ ಖಂಡಿತಾ ಅಲ್ಲ. ಗೋಡ್ಸೆಯನ್ನು ಸಮರ್ಥಿಸುವವರಿಗೆ ಸಾವಿರ ಕಾರಣಗಳಿರಬಹುದು. ಆದರೆ ಆತ ಒಬ್ಬ ಮರೆಮೋಸದ ಕೊಲೆಗಾರ ಎಂಬುದು ವಾಸ್ತವ. ಗಾಂಧಿಯನ್ನು ವಿರೋಧಿಸುವವರಿಗೂ ಸಾವಿರ ಕಾರಣಗಳಿರಬಹುದು.



ಆದರೆ ಅವರು ತಮ್ಮ ಜೀವನವನ್ನು ಭಾರತದ ಸ್ವಾತಂತ್ರ್ಯಕ್ಕಾಗಿಯೇ ಮುಡಿಪಿಟ್ಟರು ಎಂಬುದೂ ವಾಸ್ತವವೇ. ಅವರನ್ನೂ ಸೇರಿಸಿಕೊಂಡು ಲಕ್ಷಾಂತರ ಜನರ ಸಂಘಟಿತ ಪ್ರಯತ್ನದಿಂದ ಸಿಕ್ಕಿದ ಸ್ವಾತಂತ್ರ್ಯದ ಫಲಾನುಭವಿಗಳು ಅವರನ್ನು ಕೊಂದಾತನನ್ನು ಆರಾಧಿಸು ವುದೆಂದರೆ, ಕೊಲೆಗಾರನನ್ನು ಆರಾಧಿಸುವುದಲ್ಲದೆ ಇನ್ನೇನೂ ಅಲ್ಲ.

ವಿರೋಧಿಯನ್ನು ಕೊಲ್ಲುವುದನ್ನು ಆದರ್ಶವಾಗಿಸಿ ಮಕ್ಕಳಿಗೆ ಕಲಿಸುವುದಾದರೆ, ಅವರು ಮುಂದೆ ನಡೆಸುವ ಯಾವ ಹತ್ಯೆಯನ್ನೂ ನಾವು ಖಂಡಿಸುವುದು ಸಾಧ್ಯವಿಲ್ಲ. ಮುಂದೇನು ಇಂದೇ ಮಕ್ಕಳು ಹತ್ಯೆಗೆ ತೊಡಗಿರುವುದು ಕೇವಲ ದೂರದ ಅಮೆರಿಕದಿಂದಷ್ಟೇ ಸುದ್ದಿಯಾಗಿ ಬರುತ್ತಿಲ್ಲ. ನಮ್ಮ ನಡುವೆಯೇ ಬರತೊಡಗಿದೆ. ಪಬ್ಜಿ ಆಡಲು ಬಿಡದ ಅಮ್ಮನನ್ನು ಮಗ ಕೊಂದ ಸುದ್ದಿ ಆಟದ ವ್ಯಸನದ್ದು ಮಾತ್ರವೇ? ಅಥವಾ ಕೊಲೆಪಾತಕತನವನ್ನು ಸಾಮಾನ್ಯವಾಗಿಸಿದ್ದು ಮನೆ ಮನೆ ತಲುಪಿದ್ದರ ಪರಿಣಾಮವೇ? ಅಮೆರಿಕದಂತಹ ದೇಶದಲ್ಲಿ ಶಾಲಾ ವಿದ್ಯಾರ್ಥಿಗಳನ್ನೂ ಸೇರಿಸಿಕೊಂಡು ಹಲವರು, ಹತ್ತಾರು ವರ್ಷಗಳಲ್ಲಿ ಸಾವಿರಾರು ಜನರನ್ನು ಕಾರಣವೇ ಇಲ್ಲದೆ ಸಾಮೂಹಿಕ ಹತ್ಯೆ ಮಾಡುವುದು ಸಾಮಾನ್ಯ ಸಂಗತಿಯಾಗಿದೆ. ಹಾಗೆಯೇ ಅಮೆರಿಕದಲ್ಲಿ ರಾತ್ರಿ ಮಲಗುವ ಮುಂಚೆ ಕ್ರೈಮ್‌ಸ್ಟೋರಿಗಳನ್ನು ನೋಡಿಕೊಂಡು ಮಲಗುವ ಅಭ್ಯಾಸವೂ ಸಾಮಾನ್ಯ ಸಂಗತಿಯೇ ಆಗಿದೆ.

ಬಂದೂಕು ತಯಾರಕರು, ಮಾರಾಟಗಾರರ ಲಾಬಿಯು ಸರ್ಕಾರಗಳನ್ನೇ ನಿಯಂತ್ರಿಸುವುದರಿಂದ, ಸಲೀಸಾಗಿ ನಡೆಯುವ ಮಾರಾಟ ನಿಷೇಧಿಸಲು ಸಾಧ್ಯವಾಗಿಲ್ಲ. ಬಂಡವಾಳಶಾಹಿಯು ಸರ್ಕಾರದ ಜುಟ್ಟು ಹಿಡಿಯುವುದು, ಸರ್ಕಾರ, ಪಕ್ಷಗಳು, ವ್ಯಕ್ತಿಗಳು ತಮಗೆ ಅನುಕೂಲ ಮಾಡಿಕೊಡುವ ಬಂಡವಾಳಶಾಹಿಗೆ ನೆರವಾಗುವುದು, ಅದನ್ನೆಲ್ಲ ಮರೆಮಾಚಲು ಹೊಸ ಹೊಸ ಸಾಮಾಜಿಕ, ಭಾವುಕ ಸಮಸ್ಯೆಗಳನ್ನು ಮುನ್ನೆಲೆಗೆ ತರುತ್ತಾ ಪ್ರಜೆಗಳ ಗಮನವನ್ನು ತಮಗೆ ಬೇಕಾದಲ್ಲಿಗೆ ತಿರುಗಿಸುವುದು ನಡೆಯುತ್ತಲೇ ಇರುತ್ತದೆ. ಇದಕ್ಕಾಗಿ ಅಧಿಕಾರಸ್ಥರನ್ನು ಬೆಂಬಲಿಸಿ ಲಾಭ ಮಾಡಿಕೊಳ್ಳುವ ಬುದ್ಧಿಜೀವಿ ಪಡೆಯೊಂದು ಸದಾ ಅವರ ಸುತ್ತ ಠಳಾಯಿಸಿ, ಕಾಲಿಗೆ ಬೀಳುವಂತೆ ನಟಿಸಿ ಎದೆಗೆ ಗುಂಡು ಹೊಡೆಯುವ ಕೆಲಸ ಮಾಡುತ್ತಲೇ ಇರುತ್ತದೆ. ಇದೆಲ್ಲವೂ ಕೊನೆಯಿಲ್ಲದ ಆತ್ಮಹತ್ಯೆಯ ದಾರಿ.

'ಚೋಕೇರ್ ಬಾಲಿ' ಎಂದರೆ ಕಣ್ಣೊಳಗಿನ ಮರಳು. ಕುಮುದಿನಿಗೂ ಬಾಳಸಂಗಾತಿಯ ಆಯ್ಕೆಯ ಅವಕಾಶ ಇದ್ದು, ಮಹೇಂದ್ರನು ತನ್ನೊಬ್ಬನ ಸುಖಕ್ಕಾಗಿ ತಾನು ಯಾರ ಬದುಕಿನೊಂದಿಗೆ ಬೇಕಾದರೂ ಆಟ ಆಡುವುದು ತನಗೆ ದತ್ತವಾದ ಅಧಿಕಾರವಲ್ಲ ಎಂಬ ಸಾಮಾಜಿಕ ವ್ಯವಸ್ಥೆಯೊಂದು ನಿರ್ಮಾಣವಾಗಿ, ತಮ್ಮ ಬದುಕುಗಳೆಲ್ಲವೂ ಪರರ ಅಭಿಪ್ರಾಯದಿಂದ ರೂಪಿತವಾಗಿದ್ದು, ಇದು ಸರಿಯಲ್ಲ ಎಂಬ ಪ್ರಜ್ಞೆಯು ಎಲ್ಲರೊಳಗೊಂದು ಎಚ್ಚರ ತರುವುದರೊಂದಿಗೆ, ತಾವು ಕೂಡಾ ಹಾಗೆ ನಡೆದುಕೊಳ್ಳಬಾರದು ಎಂಬ ನೈತಿಕತೆಯನ್ನು ಹುಟ್ಟುಹಾಕಿದಲ್ಲಿ, ಅಲ್ಲಿ ಯಾವುದೇ ರೂಪದ ಹತ್ಯೆ ಮುನ್ನೆಲೆಗೆ ಬರುವುದಿಲ್ಲ. ಕೋಟಿ ದುಡಿದೂ ಒಂಟಿತನ ಕಾಡಿ ಜೀವ ಕಳೆಯುವ/ ಕಳೆದುಕೊಳ್ಳುವ ವಿನಾಶದ ದಾರಿಯ ಖಿನ್ನತೆಯ ಗೆದ್ದಲು ಲೋಕಕ್ಕೆ ಹತ್ತುವುದಿಲ್ಲ. ಈ ನಿರಾಳದ ಜೀವನ್ಮುಖತೆಯೆಡೆಗೆ ನಡೆಯುವುದೆಂದು?

ಲೇಖಕಿ: ಪ್ರಾಧ್ಯಾಪಕಿ,
ಸರ್ಕಾರಿ ಪ್ರಥಮದರ್ಜೆ ಕಾಲೇಜು, ತರೀಕೆರೆ

## ಚುರುಮುರಿ



# ಇ.ಡಿ. ಏಟು

● ಮಣ್ಣೆರಾಜು

'ಶಾಂತಿ ಸುವ್ಯವಸ್ಥೆ ಕಾಪಾಡಲು ಇನ್ಮೇಲೆ ಪೊಲೀಸರ ಜೊತೆಗೆ ಬುಲ್ಡೋಜರ್ ಬಳಸುವ ವ್ಯವಸ್ಥೆ ಬರಬಹುದು ಅಲ್ವೇನ್ರೀ?' ಕೇಳಿದಳು ಸುಮಿ.

'ಬರಬಹುದು. ಲಾಠಿ ಏಟು, ಟಿಯರ್ ಗ್ಯಾಸ್, ಜಲಫಿರಂಗಿ, ಗಾಳಿಯಲ್ಲಿ ಗುಂಡು ವಿಫಲವಾದಾಗ ಬುಲ್ಡೋಜರ್ ಭಯ ತೋರಿಸಿ ಪ್ರತಿಭಟನೆ ಹತ್ತಿಕ್ಕಬಹುದು' ಅಂದ ಶಂಕ್ರಿ.

'ಪ್ರತಿಭಟನಾ ಸ್ಥಳದಲ್ಲಿ ಪೊಲೀಸ್ ವ್ಯಾನ್ ಜೊತೆ ಒಂದು ಬುಲ್ಡೋಜರ್ ನಿಲ್ಲಿಸಿದರೆ ಹೋರಾಟಗಾರರು ಹೆದರಿ ಶಾಂತಿಯುತ ಹೋರಾಟ ಮಾಡ್ತಾರೇನೋ'.

'ಮಾಡಬಹುದು, ಪರಿಸ್ಥಿತಿ ನಿಯಂತ್ರಿಸುವಲ್ಲಿ ಒಂದು ಪೊಲೀಸ್ ಠಾಣೆ ಸಿಬ್ಬಂದಿ ಮಾಡುವ ಕೆಲಸವನ್ನು ಒಂದೇ ಬುಲ್ಡೋಜರ್ ಮಾಡಬಹುದು'.

'ಇ.ಡಿ. ಏಟಿನ ವಿರುದ್ಧ ನಡೆಯುತ್ತಿರುವ ಪ್ರತಿಭಟನೆ ತಡೆಗೆ ಬುಲ್ಡೋಜರ್ ಭೀತಿ ಬಳಸಬಹುದಲ್ವಾ?'

'ಇಲ್ಲ, ಇದು ಬುಲ್ಡೋಜರ್‌ಗೆ ಬಗ್ಗುವ ಹೋರಾಟವಲ್ಲ. ಸರ್ವ ರೋಗಕ್ಕೂ ಸಾರಾಯಿ ಮದ್ದಲ್ಲ, ಹೊಸ ರೋಗಕ್ಕೆ ಹೊಸ ಮದ್ದು ಹುಡುಕಬೇಕು'.

'ಬುಲ್ಡೋಜರ್‌ಗಿಂತ ಬಲವಾದ ಅಸ್ತ್ರ ಇನ್ಯಾವುದಿದೆ?'

'ಕೋವಿಡ್ ಅಸ್ತ್ರ ಇದೆ. ಕೋವಿಡ್ ಹೆಚ್ಚಳವಾದರೆ ಹೋರಾಟಗಾರರೇ ಹೊಣೆ ಅಂತ ಹೆಲ್ತ್ ಮಂತ್ರಿ ಹೇಳಿದ್ದಾರೆ'.

'ಕೋವಿಡ್ ಬೆದರಿಕೆಗೆ ಹೋರಾಟಗಾರರು ಹೆದರ್ತಾರಾ? ಮಾಸ್ಕ್ ಧರಿಸಿ, ಸ್ಯಾನಿಟೈಸರ್ ಬಳಸಿ, ಸಾಮಾಜಿಕ ಅಂತರ ಕಾಪಾಡಿಕೊಂಡು ಹೋರಾಟ ಮಾಡ್ತೀವಿ ಅನ್ನಬಹುದು'.

'ಅಂದೇ ಅನ್ತಾರೆ. ಇವರು ಇ.ಡಿ. ಏಟು ಕೊಟ್ಟರೆ ಅವರು ಪ್ರತಿಭಟನೆಯ ತಿರುಗೇಟು ಕೊಡ್ತಾರೆ. ಎಲೆಕ್ಷನ್ ಟೈಂನಲ್ಲಿ ಇಂಥಾ ಏಟಾಟಗಳು ಸಹಜ'.

'ಈ ಏಟಾಟದ ಫಲಾಫಲಗಳು ಏನಾಗಬಹುದು?'

'ಗೊತ್ತಿಲ್ಲ, ಏಟು ವೋಟಾಗಬಹುದು, ಇಲ್ಲವೆ ತಿರುಗೇಟಾಗಬಹುದು, ಚುನಾವಣೆವರೆಗೂ ಕಾದು ನೋಡಬೇಕು...' ಅಂದ ಶಂಕ್ರಿ.

## ಸಂಗತ

# ಅನಾಮಧೇಯ ಆಟಗಾರನ ರಣಾಂಗಣ

**ಕಂಪ್ಯೂಟರ್ ಆಟಗಳು ಮಕ್ಕಳಲ್ಲಿ ವ್ಯಸನ ಹುಟ್ಟಿಸುವುದರ ಜೊತೆಗೆ ಅವರ ಮನೋವಿಕಾಸ, ಮನೋವಿಲಾಸಗಳನ್ನು ಹೆಚ್ಚಿಸಬಲ್ಲ ಗುಣವನ್ನೂ ಹೊಂದಿರುವುದು ಗಮನಾರ್ಹ**

● ಡಾ. ಅ.ಶ್ರೀಧರ

**ಆಟ** ಆಡುವುದಕ್ಕೆ ಯಾರಿಗೆ ತಾನೇ ಇಷ್ಟವಿರುವುದಿಲ್ಲ? ಆದರೂ ಆಟಗಳೇನೂ ಸದಾಕಾಲ ಎಲ್ಲರಿಗೂ ಸುಖ, ಹಿತ ಕೊಡುವುದಿಲ್ಲ ಎನ್ನುವುದು ತಿಳಿಯದ ಸಂಗತಿಯೇನಲ್ಲ. ಜೂಜಾಟ, ಪಗಡೆಯಾಟಗಳನ್ನಾಡಿ ದೇಶ, ಕೋಶಗಳನ್ನು ಕಳೆದುಕೊಂಡ ಶೂರಾಧಿಶೂರರ ಕತೆಯು ಪುರಾಣಗಳಲ್ಲಿ ತುಂಬಿದೆ. ಧಾರ್ಮಿಕ, ನೈತಿಕ ಗೊಂದಲಗಳ ನಡುವೆಯೂ, ಅವುಗಳಿನ್ನೂ ಕುತೂಹಲ ಕೆರಳಿಸಬಲ್ಲವಾಗಿವೆ.

ಆಟ ಅಂದಮೇಲೆ ನಿಯಮ, ರೀತಿ, ಆಟಿಕೆಗಳು ಇರಲೇಬೇಕು. ಬದಲಾದ ವೇಗ- ಆವೇಗ ಪ್ರಧಾನವಾಗುತ್ತಿರುವ ಈ ಕಾಲದಲ್ಲಿ, ಆಟ ಆಡುವುದಕ್ಕೆ ಅಂಗೈ ಅಗಲದ ಕಂಪ್ಯೂಟರ್, ಮೊಬೈಲ್ ಸಲಕರಣೆಗಳು ಬಂದಿವೆ. ಹಳೆಯ ಆಟಗಳಿಗೆ ಪೈಪೋಟಿಯೊಡ್ಡಬಲ್ಲ ಅಮೋಘ ಸಾಮರ್ಥ್ಯ, ಶಕ್ತಿ ಅವುಗಳಲ್ಲಿ ಅಡಗಿರುವುದರಿಂದಲೇ ಅತಿ ಜನಪ್ರಿಯತೆ ಪಡೆದಿವೆ.

ಈ ಆಟಗಳನ್ನು ರಚಿಸುವುದಕ್ಕೆ ತಂತ್ರಜ್ಞಾನದ ನೈಪುಣ್ಯ ಇರಬೇಕಾಗುತ್ತದೆ. ಅತಿ ಸೂಕ್ಷ್ಮ ಮತ್ತು ವಿಚಿತ್ರ ಎನ್ನುವಂತಹ ಸಮಸ್ಯೆಗಳನ್ನು ಸೃಷ್ಟಿಸುವುದು, ಅದಕ್ಕೆ ಪರಿಹಾರ ಕೊಡುವ ಕ್ರಿಯೆಗಳನ್ನು ರಚಿಸುವ ತಂತ್ರ ಸುಲಭ ಅಥವಾ ಬೇಕಾಬಿಟ್ಟಿಯ ಕೆಲಸವಲ್ಲ. ಯಂತ್ರಗಳ ಮೂಲಕ ಮನುಷ್ಯನ ಮನಸ್ಸಿನಲ್ಲಿ ಅಡಗಿರುವ ರಹಸ್ಯಗಳನ್ನು ಬಯಲಿಗೆಳೆಯುವಷ್ಟು ಚಾತುರ್ಯ ಈ ಕಂಪ್ಯೂಟರ್ ಆಟಗಳಲ್ಲಿದೆ. ಹೀಗಾಗಿ ಇವುಗಳನ್ನು ಆಡುವವರಲ್ಲಿಯೂ ಉನ್ನತ ಮಟ್ಟದ ಮಾನಸಿಕ ಶಕ್ತಿ ಇರಬೇಕಾಗುತ್ತದೆ.

ಇಂತಹದೊಂದು ಕಂಪ್ಯೂಟರ್, ಮೊಬೈಲ್ ಆಟವಿದೀಗ ಖ್ಯಾತಿ, ಕುಖ್ಯಾತಿಯನ್ನು ಏಕಕಾಲದಲ್ಲಿ ಪಡೆದಿದ್ದು, ಜನರಲ್ಲಿ ಭಯ, ಭೀತಿಯ ಭಾವನೆಗಳಿಗೆ ಕಾರಣವಾಗಿದೆ. ಪಬ್-ಜಿ (ಅನಾಮಧೇಯ ಆಟಗಾರನ ಕಾಳಗಗಳು) ಎಂದು ಕರೆಯ ಲಾಗುವ ಈ ಆಟದ ಉದ್ದೇಶವೆಂದರೆ, ಸದಾ ಸವಾಲುಗಳನ್ನು ಒಡ್ಡುವ ವೈರಿಗಳನ್ನು ಏಕಾಏಕಿ ಸದೆಬಡಿಯುವುದು. ಶತ್ರುಗಳ ಪ್ರತಿಯೊಂದು ದಾಳಿಯನ್ನೂ ಪ್ರತಿಅಸ್ತ್ರ, ಯುಕ್ತಿಯ ಮೂಲಕ ಸಂಹಾರ ಮಾಡುವ ಕಪೋಲ ಕಲ್ಪಿತ ಚಲನವಲನಗಳ ಆಟವಿದು. ಹೊಸಹೊಸ ಕಠಿಣ ಸವಾಲುಗಳನ್ನು ಒಡ್ಡುವ ಆಟವೆಂದು ಕೋಟ್ಯಾನುಕೋಟಿ ಜನ ಇದನ್ನಿಂದು ಬಳಸುತ್ತಿದ್ದಾರೆ. ಉದಾಹರಣೆಗೆ, ನೀವು ಈ ಬರಹವನ್ನು ಓದಿ ಮುಗಿಸುವುದರೊಳಗೆ ಕೋಟಿ ಜನರು ಈ ಆಟದಲ್ಲಿ ಮಗ್ನರಾಗಿರಬಹುದು.

ವೇಗ, ಸರಳತೆ, ಸುಲಭ ಲಭ್ಯತೆ, ಚಿತ್ರವಿಚಿತ್ರ ಸನ್ನಿವೇಶಗಳ ಮೂಲಕ ಎದುರಾಳಿಯನ್ನು ಹೈರಾಣಾಗಿಸುವ ಹೇರಳ ಚಟುವಟಿಕೆಗಳಿಂದ ಕಂಪ್ಯೂಟರ್ ಆಟಗಳು ಎಲ್ಲ ವಯಸ್ಸಿನವರಿಗೂ ಅತ್ಯಾಕರ್ಷಕ. ಅನ್ನ, ನಿದ್ದೆ, ಓದು, ಕೆಲಸಗಳಿಂದ ತಪ್ಪಿಸಿಕೊಳ್ಳಬೇಕೆಂಬ ಮನಸ್ಸಿನವರಿಗೆ ಇದಂತೂ ಮಹಾಹಿತ ಕೊಡುವಂತಹ ಸೆಳೆತವೇ ಸರಿ. ಅಂತೆಯೇ ಆಕ್ರೋಶ, ಆವೇಶದ ಸ್ವಭಾವದವರಿಗೆ ಇದೇ ರಸದೌತಣ ಇದ್ದಂತೆ. ಹೀಗಾಗಿ ದುರಭ್ಯಾಸವಿರುವ, ಅತೃಪ್ತ ಮನಸ್ಸಿನ, ಅದರಲ್ಲಿಯೂ ತಂತ್ರಜ್ಞಾನದತ್ತ ಒಲವು ಇರುವವರಿಗೆ ಹೇಳಿಮಾಡಿಸಿದ ಚಟುವಟಿಕೆ.

ದುರಭ್ಯಾಸ ಹುಟ್ಟಿಸುವ ಮನದ ಅತೃಪ್ತಿಗೆ ಕಾರಣಗಳು ಹಲವಾರು: ಬಾಲ್ಯದ ಮನೋವಿಕಾಸಕ್ಕೆ ತಡೆಯೊಡ್ಡುವ ಸಾಮಾಜಿಕ ಸನ್ನಿವೇಶಗಳು, ಸದಾ ಅಪಮಾನ, ಹಿಂಸೆ, ದಬ್ಬಾಳಿಕೆಯ ಧಾರ್ಮಿಕ, ನೈತಿಕ ವಾತಾವರಣವು ಬೆಳೆಯುವ ಮಕ್ಕಳ, ವಯಸ್ಕರ ವ್ಯಸನ, ಮನೋದೌರ್ಬಲ್ಯಕ್ಕೆ ಪ್ರೇರಕ. ಕಂಪ್ಯೂಟರ್ ಆಟಗಳು ಸರ್ವಾಧಿಕಾರ ಮತ್ತು ನಿರಂಕುಶ ಬಲದ ಭಾವನಾನುಭವ ಒದಗಿಸುತ್ತವೆ. ಎಡೆಬಿಡದ ಪುರಸ್ಕಾರದ ಆಕರ್ಷಣೆಗಳು ಆಟಕ್ಕೆ ಅಂಟಿಕೊಂಡಿರುವಂತೆ ಮಾಡುತ್ತವೆ. ಧ್ವಂಸ, ದಾಳಿಗೆ ಅಗತ್ಯವಾದ ಕುತಂತ್ರ ರಚಿಸುವುದನ್ನು ಉತ್ತೇಜಿಸುವ ವರ್ಣಮಯ ಸನ್ನಿವೇಶ, ಶಬ್ದ, ಸಂಗೀತ, ಮುಖಭಾವ, ಭಂಗಿಗಳು ಆಡುಗರ ಮನಸ್ಸನ್ನು ವಶಪಡಿಸಿಕೊಳ್ಳಬಲ್ಲವಾಗಿರುತ್ತವೆ. ಎಷ್ಟೋ ಸಲ ಇಂತಹ ಆಟಗಳಿಗೆ ಸಮಯ, ಸನ್ನಿವೇಶ, ಹಣವು ಬೇಕಾಗಿರುವುದಿಲ್ಲ.



ಹತಾಶೆ ಹೆಚ್ಚಾದಾಗ ಬೆನ್ನಟ್ಟಿ ಬರುವ ಹಂಬಲಗಳು ಅವಲಂಬನೆಯ ಚಟುವಟಿಕೆಗಳತ್ತ ವಾಲುವುದರ ಮೂಲಕ ವಾಸ್ತವದಿಂದ ದೂರ ಸರಿಯುವಂತೆ ಮಾಡುತ್ತವೆ. ಸಾಮಾಜಿಕ ಸ್ವರೂಪದ ಸಮಸ್ಯೆಗಳೇ ಹತಾಶೆಗಳಿಗೆ ಮಹಾಪ್ರೇರಣೆ. ಹೀಗಾಗಿ ಇಂತಹದೊಂದು ಸ್ಥಿತಿಯಿಂದ ಮೂಡುವ ನಡೆನುಡಿಗಳಲ್ಲಿ ಕಂಡುಬರುವ ಅಸಾಮಾನ್ಯತೆಯನ್ನು ಮನೋರೋಗವೆಂದು ಪರಿಗಣಿಸುತ್ತವೆ ವಿಶ್ವದ ಪ್ರಮುಖ ಮನೋರೋಗ ಗುರುತಿಸುವ ಸಂಸ್ಥೆಗಳು. ಹೀಗಾಗಿ ಕಂಪ್ಯೂಟರ್ ಗೇಮ್‌ಗಳು ಉಂಟುಮಾಡುವ ಸಾಮಾನ್ಯವಲ್ಲದ ಮಾನಸಿಕತೆಯನ್ನು ಮನೋ ಅಸ್ವಸ್ಥತೆಯ ಸಂಕೇತ ಎನ್ನುತ್ತವೆ ಅಧ್ಯಯನಗಳು. ಈ ಅಭಿಪ್ರಾಯಗಳನ್ನು ಅಲ್ಲಗಳೆಯುವ ವೈಜ್ಞಾನಿಕ ಅಧ್ಯಯನಗಳೇನೂ ಕಡಿಮೆಯಿಲ್ಲ.

ಕಂಪ್ಯೂಟರ್ ಆಟಗಳು ಮಕ್ಕಳೆಲ್ಲರಲ್ಲಿ ವ್ಯಸನ ಹುಟ್ಟಿಸುವುದರಿಂದ ಅಪಾಯಕಾರಿಯಾಗಿದ್ದು ಅವುಗಳ ನಿಷೇಧವೇ ಪರಿಹಾರ ಎನ್ನುವ ಅಭಿಪ್ರಾಯಗಳು ಬಲವಾಗಿವೆ. ಹೆಚ್ಚಿನ ಸಮಯದಲ್ಲಿ ಇವು ತಪ್ಪುಕಲ್ಪನೆಗಳಾಗಿರುವುದಂತೂ ಸತ್ಯ. ಇಂತಹ ತಪ್ಪುಕಲ್ಪನೆಗಳನ್ನು ಬಂಡವಾಳವನ್ನಾಗಿಸಿಕೊಳ್ಳುವುದಕ್ಕೆ ಸದಾ ಕಾದಿರುತ್ತವೆ ಪುರೋಗಾಮಿ ರಾಜಕೀಯ, ಧಾರ್ಮಿಕ ವಲಯಗಳು. ಆದರೆ ಮಕ್ಕಳ ಮನೋವಿಕಾಸ, ಮನೋವಿಲಾಸಗಳನ್ನು ಹೆಚ್ಚಿಸಬಲ್ಲ ಗುಣವೂ ಈ ಆಟಗಳಲ್ಲಿ ಇರುವುದುಂಟು. ಅಷ್ಟೇಅಲ್ಲ ಕೆಲವೊಂದು ಮಾನಸಿಕ ದುಃಸ್ಥಿತಿಗಳನ್ನು ಸಕಾರಾತ್ಮಕವಾಗಿ ಎದುರಿಸುವಂತಹ ಮಾರ್ಗವನ್ನೂ ಆಟಗಳು ಒದಗಿಸಬಲ್ಲವು ಎನ್ನುವುದನ್ನು ಮರೆಮಾಚಲಾಗದು.

ಲೇಖಕ: ಮನೋವಿಜ್ಞಾನಿ

## ವಾಚಕರ ವಾಣಿ

### ಕಲ್ಲಿನಕೋಟೆ ಜೀರ್ಣೋದ್ಧಾರವಾಗಲಿ

ಬೀದರ್ ಜಿಲ್ಲೆ ಬಸವಕಲ್ಯಾಣದಲ್ಲಿರುವ, ಬಿಜ್ಜಳ ರಾಜನು ರಾಜ್ಯಭಾರ ಮಾಡಿದ ಕೋಟೆ ಕೊತ್ತಲಗಳನ್ನು ನಾನು ಇತ್ತೀಚೆಗೆ ಕುಟುಂಬ ಸಮೇತ ವೀಕ್ಷಣೆ ಮಾಡಿದೆ. 12ನೇ ಶತಮಾನದಲ್ಲಿ ಇಡೀ ವಿಶ್ವಕ್ಕೆ ಸಾಮಾಜಿಕ ಸಮಾನತೆ ಸಾರಿದ ಬಸವಣ್ಣ ಹಾಗೂ 770 ಶರಣರು ಕೂಡಿ ನಾಡಿನ ಜನರಿಗೆ ಅತ್ಯುತ್ತಮ ಸಾಮಾಜಿಕ ನ್ಯಾಯ, ನೀತಿ ನೀಡಿರುವುದರಿಂದ ಅವರನ್ನು ಈಗಲೂ ನೆನೆಯುತ್ತೇವೆ. ಪ್ರಜೆಗಳ ಕುಂದುಕೊರತೆಯನ್ನು ಆಲಿಸಿ, ಚರ್ಚಿಸಿ ನ್ಯಾಯ ನೀಡಿರುವ ಅನುಭವ ಮಂಟಪವಿದು. ಬಿಜ್ಜಳ ರಾಜ ಹಾಗೂ ಕ್ರಾಂತಿಕಾರಿ ಬಸವಣ್ಣ ಅವರು ಇದ್ದು ಕಾರ್ಯಭಾರ ಮಾಡಿದ್ದ ಕಲ್ಲಿನಕೋಟೆ ಹಾಳು ಬಿದ್ದಿರುವುದನ್ನು ನೋಡಿ ನೋವಾಯಿತು. ಜೀರ್ಣೋದ್ಧಾರ ಮಾಡುವುದರಿಂದ ಕೋಟೆ ಉಳಿದೀತು, ಉದ್ಯೋಗಾವಕಾಶವೂ ದೊರೆತೀತು. ಸರ್ಕಾರಕ್ಕೆ ಆದಾಯದ ಮೂಲವಾದೀತು.

**ಎಂ.ಆಂಜನೇಯ**, ಹಾವೇರಿ

### ಪುಸ್ತಕಕ್ಕೆ ಅಗೌರವ ತರವಲ್ಲ

ಪರಿಷ್ಕೃತ ಪಠ್ಯಪುಸ್ತಕಗಳ ವಿರುದ್ಧ ಪಠ್ಯಪುಸ್ತಕವನ್ನು ಹರಿದುಹಾಕುವ ಮೂಲಕ ಪ್ರತಿಭಟಿಸಿರುವುದು ಸರಿಯಲ್ಲ. ಬಾಲ್ಯದಿಂದಲೂ ಪಠ್ಯಪುಸ್ತಕಗಳ ಬಗ್ಗೆ ಬಹಳ ಗೌರವದಿಂದ ನಡೆದುಕೊಳ್ಳಲು ಕಲಿಸಲಾಗುತ್ತದೆ. ಅವುಗಳ ಬಗ್ಗೆ ಅಗೌರವ ತೋರಿಸಿದರೆ ವಿದ್ಯೆ ಒಲಿಯುವುದಿಲ್ಲ ಎಂಬ ಭಾವನೆ ಮೂಡಿರುತ್ತದೆ. ನಮ್ಮೆಲ್ಲರ ಜೀವನದಲ್ಲಿ ಪಠ್ಯಪುಸ್ತಕಗಳಿಗೆ ವಿಶೇಷ ಸ್ಥಾನಮಾನವಿದೆ. ಅವುಗಳನ್ನು ನೆಲದ ಮೇಲೆ ಬಿಸಾಡುವುದಾಗಲೀ ಆಕಸ್ಮಿಕವಾಗಿ ಕಾಲು ತಾಗಿಸುವುದಾಗಲೀ ಮಾಡಿದಲ್ಲಿ ಅಪರಾಧಿ ಭಾವ ಮೂಡುವಷ್ಟರಮಟ್ಟಿಗೆ ಎಲ್ಲರಲ್ಲಿ ಒಂದು ಗೌರವಪೂರ್ವಕ ಸ್ಥಾನಮಾನ ನೀಡಲಾಗಿದೆ. ಅವುಗಳ ಒಳಗಿನ ವಿಷಯಗಳ ಬಗ್ಗೆ ಯಾವುದೇ ತರಹದ ಭಿನ್ನಾಭಿಪ್ರಾಯ ಇದ್ದರೂ ಪುಸ್ತಕ ಹರಿದು ವಿರೋಧಿಸುವ ಕ್ರಮ ಸರಿಯಲ್ಲ.

**ಎ.ಜೆ.ಜಾವೀದ್**, ಹಾಸನ

### ಬೆಂಕಿ ಹಚ್ಚಿ ತಿಳಿಸಬೇಕೆ?

ಕೇಂದ್ರ ಸರ್ಕಾರ ಪರಿಚಯಿಸಿರುವ ಅಗ್ನಿಪಥ ಯೋಜನೆಯ ವಿರುದ್ಧ ದೇಶದ ಹಲವು ರಾಜ್ಯಗಳಲ್ಲಿ ಪ್ರತಿಭಟನೆ ನಡೆಯುತ್ತಿದೆ. ಈ ಯೋಜನೆಯು ಸೇನಾ ನೇಮಕಾತಿಯಲ್ಲಿ ಶಾಶ್ವತ ಉದ್ಯೋಗ ಕಲ್ಪಿಸುವುದಿಲ್ಲ, ದೇಶದ ಅಭದ್ರತೆ ಮತ್ತು ಯುವಜನರಲ್ಲಿ ನಿರುದ್ಯೋಗದ ಸಮಸ್ಯೆ ಸೃಷ್ಟಿಸುತ್ತದೆ ಎನ್ನುವುದು ಹಲವರ ವಾದ.

ಯಾವುದೇ ಯೋಜನೆಯಾಗಲಿ ಅದರಲ್ಲಿ ನಕಾರಾತ್ಮಕ ಅಂಶಗಳು ಇದ್ದಾಗ ಆ ಯೋಜನೆಯನ್ನು ಪ್ರಶ್ನೆ ಮಾಡುವ ಹಕ್ಕು ಈ ಪ್ರಜಾಪ್ರಭುತ್ವ ದೇಶದಲ್ಲಿ ಇದೆ. ಆದರೆ ಪ್ರಶ್ನೆ ಮಾಡುವ, ಹೋರಾಡುವ ರೀತಿ- ನೀತಿ ಶಾಂತಿಯುತವಾಗಿರಬೇಕು. ಸಾರ್ವಜನಿಕ, ಖಾಸಗಿ ಆಸ್ತಿಗಳನ್ನು ಬೆಂಕಿ ಹಚ್ಚಿ ಧ್ವಂಸ ಮಾಡುವ, ಜನರ ಜೀವಕ್ಕೆ ಅಪಾಯ ತಂದೊಡ್ಡುವ ಹಿಂಸಾತ್ಮಕ ಪ್ರತಿಭಟನೆ ಅದಾಗಿರಬಾರದು. ಈಗಾಗಲೇ ನಿರುದ್ಯೋಗದ ಬೆಂಕಿಯಲ್ಲಿ ಬೇಯುತ್ತಿರುವ ಯುವಜನರಿಗೆ ಶಾಶ್ವತ ಉದ್ಯೋಗ ಬೇಕಿದೆಯೇ ವಿನಾ ತಾತ್ಕಾಲಿಕ ಉದ್ಯೋಗ ಅಲ್ಲ ಎನ್ನುವುದನ್ನು ಸರ್ಕಾರ ಈ ಮೂಲಕ ಅರಿಯಬೇಕೆ?

**ನಿರ್ಮಲಾ ನಾಗೇಶ್**, ಮುರ್ಡೇಶ್ವರ

### ಪ್ರಧಾನಿ ಪ್ರತೀ ಜಿಲ್ಲೆಗೂ ಭೇಟಿ ಕೊಡಲಿ!

ಎಲ್ಲರೂ ಅಚ್ಚರಿಪಡುವಂತೆ, ತೀವ್ರಗತಿಯಲ್ಲಿ ರಸ್ತೆ ನಿರ್ಮಾಣ, ರಸ್ತೆಗಳಲ್ಲಿ ಸ್ವಚ್ಛತೆ, ತ್ಯಾಜ್ಯ ನಿರ್ಮೂಲನೆ ಕಾರ್ಯ ಮೈಸೂರಿನಲ್ಲಿ ಕೆಲವೇ ದಿನಗಳ ಅಂತರದಲ್ಲಿ ಆಗುತ್ತಿದೆ. ಇದಕ್ಕೆ ಕಾರಣ, ಇದೇ ಮಂಗಳವಾರದಂದು (ಜೂನ್ 21) ಅಂತರರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ಪ್ರಧಾನಿ ನರೇಂದ್ರ ಮೋದಿ ಅವರು ಭೇಟಿ ನೀಡುತ್ತಿರುವುದು.

ಅದೇ ರೀತಿ ಒಂದು ಕೋರಿಕೆ. ಸನ್ಮಾನ್ಯರು, ರಾಜ್ಯದ ಪ್ರತೀ ಜಿಲ್ಲೆಗೂ ಭೇಟಿ ನೀಡುವ ಯೋಜನೆ ಹಾಕಿಕೊಂಡರೆ, ಇಡೀ ಕರ್ನಾಟಕದ ಚಿತ್ರಣವೇ ಬದಲಾಗುತ್ತದೆ. ಡಾಂಬರನ್ನೇ ಕಾಣದ ಎಷ್ಟೋ ರಸ್ತೆಗಳು ಡಾಂಬರು ರಸ್ತೆಗಳಾಗಬಹುದು, ಬೀದಿದೀಪವನ್ನೇ ಕಾಣದ ಪ್ರದೇಶಗಳು ಬೆಳಕಿನಿಂದ ಕಂಗೊಳಿಸಬಹುದು.

**ಬೋರೇಗೌಡ ಜೆ.ಬಿ.**, ಮೈಸೂರು

### ಅನಗತ್ಯ ಶುಲ್ಕ ಪಾವತಿಸಬೇಕೇಕೆ?

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಕಳೆದ ಏಪ್ರಿಲ್ 1ರಿಂದಲೇ ಜಾರಿಗೆ ಬರುವಂತೆ ಯುನಿಟ್‌ಗೆ ಸರಾಸರಿ 35 ಪೈಸೆ ಏರಿಕೆ ಮಾಡಿದೆ. ಆದರೆ ಇದರ ಜೊತೆಗೆ, ವಿದ್ಯುತ್ ಬಳಸದಿದ್ದರೂ ಪ್ರತೀ ತಿಂಗಳು ಪಾವತಿಸಬೇಕಾದ ನಿಗದಿತ ಶುಲ್ಕವನ್ನೂ ಏರಿಸಿದೆ. ಇದರಿಂದಾಗಿ 3 ಅಥವಾ 4 ಕಿಲೊವ್ಯಾಟ್ ಹೊಂದಿರುವ ಮನೆಯ ನಿಗದಿತ ವಿದ್ಯುತ್ ಶುಲ್ಕವೇ ಬಳಸುವ ವಿದ್ಯುತ್ ದರಕ್ಕಿಂತ ಅಧಿಕವಾಗಿ, ಮೂಗಿಗಿಂತ ಮೂಗುತಿಯೇ ಭಾರ ಎನ್ನುವಂತಾಗಿದೆ. ನಾವು ಬಳಸುವ ವಿದ್ಯುತ್‌ಗೆ ದರ ಪಾವತಿಸಬೇಕಾದದ್ದು ಧರ್ಮ. ಆದರೆ ಇದರ ಜೊತೆಗೆ ಅನಗತ್ಯವಾಗಿರುವ ನಿಗದಿತ ಶುಲ್ಕವನ್ನೇಕೆ ಕೊಡಬೇಕು? ಇದರ ಜೊತೆಗೆ ನಾವು ವಿದ್ಯುತ್ ಸಂಪರ್ಕ ಪಡೆಯುವ ಸಂದರ್ಭದಲ್ಲಿ ಕಟ್ಟಿರುವ ವಿದ್ಯುತ್ ಡೆಪಾಸಿಟ್ ಮೊತ್ತವನ್ನೂ ಏರಿಕೆ ಮಾಡಿದ್ದು, ಅದನ್ನೂ ಪಾವತಿಸುವಂತೆ ಬಿಲ್ಲಿನ ಕೆಳಭಾಗದಲ್ಲಿ ನಮೂದಿಸಿ ಒತ್ತಡ ಹಾಕುತ್ತಿದ್ದಾರೆ. ನಾವು ವಿದ್ಯುತ್ ಸಂಪರ್ಕ ಪಡೆಯಲು ನಮ್ಮದೇ ಹಣವನ್ನು ವಿದ್ಯುತ್ ಮೀಟರ್‌ಗಾಗಿ ಪಾವತಿಸಿರುತ್ತೇವೆ ಹಾಗೂ ಇದೇ ಸಂದರ್ಭದಲ್ಲಿ ಮೀಟರ್ ಡೆಪಾಸಿಟ್ ಅನ್ನೂ ಕಟ್ಟಿಸಿಕೊಂಡಿರುತ್ತಾರೆ. ನಾವೇ ದುಡ್ಡು ಕೊಟ್ಟು ಮೀಟರ್ ಕೊಂಡ ಮೇಲೆ ಇದಕ್ಕೆ ಡೆಪಾಸಿಟ್ ಬೇರೆ ಏಕೆ ಕಟ್ಟಬೇಕು?

ನಾವು ಮನೆ ನಿರ್ಮಿಸುವ ಸಂದರ್ಭದಲ್ಲಿ ಮನೆ ನಿರ್ಮಾಣದ ಒತ್ತಡದಲ್ಲಿ ಈ ಬಗ್ಗೆ ಗಮನಹರಿಸಿರುವುದಿಲ್ಲ. ಗಮನಿಸಿದ್ದರೂ ಕೆಪಿಟಿಸಿಎಲ್‌ನವರು ವಿದ್ಯುತ್ ಸಂಪರ್ಕ ನೀಡುವುದಿಲ್ಲವಾದ್ದರಿಂದ ಅನಿವಾರ್ಯವಾಗಿ ಪಾವತಿಸಬೇಕಾಗುತ್ತದೆ. ಇಷ್ಟಾದ ಮೇಲೂ ವಿದ್ಯುತ್ ನಿಗದಿತ ಶುಲ್ಕ ಮತ್ತು ಮೀಟರ್ ಡೆಪಾಸಿಟ್ ಅನ್ನು ವರ್ಷ ವರ್ಷವೂ ಏರಿಕೆ ಮಾಡುವುದೇಕೆ? ಇದು ಗ್ರಾಹಕರಿಗೆ ಹೊರೆಯಾಗುತ್ತದೆ. ಆದ್ದರಿಂದ ಸರ್ಕಾರವು ಪ್ರತೀ ಕಿಲೊವ್ಯಾಟ್‌ಗೆ ವಿಧಿಸುವ ನಿಗದಿತ ಶುಲ್ಕವನ್ನು ರದ್ದುಪಡಿಸಲಿ ಹಾಗೂ ಗ್ರಾಹಕರಿಂದ ಪಡೆದಿರುವ ಮೀಟರ್ ಡೆಪಾಸಿಟ್ ಅನ್ನು ಗ್ರಾಹಕರಿಗೆ ಹಿಂದಿರುಗಿಸುವ ಆದೇಶ ನೀಡಲಿ. ವಿದ್ಯುತ್ ದರ ಪಾವತಿಸುವುದಷ್ಟೇ ಗ್ರಾಹಕರ ಬದ್ಧತೆ, ಅನಗತ್ಯ ದರಗಳನ್ನಲ್ಲ.

**ಮುಳ್ಳೂರು ಪ್ರಕಾಶ್**, ಮೈಸೂರು

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

# ಉಕ್ರೇನ್ ಮೇಲೆ ರಷ್ಯಾ ಆಕ್ರಮಣ
# ಅತ್ಯಾಚಾರವೂ ಆಯುಧ

• ಸುಕೃತ ಎಸ್.

‘ಯಾವುದೇ ಪುರುಷನೊಂದಿಗೆ ನಿಮಗೆ ಲೈಂಗಿಕ ಕ್ರಿಯೆ ನಡೆಸಬೇಕು ಎಂದು ಇನ್ನು ಮುಂದೆ ಅನ್ನಿಸಲೇಬಾರದು. ಆ ರೀತಿಯಲ್ಲಿ ನಿಮ್ಮ ಮೇಲೆ ಅತ್ಯಾಚಾರ ಎಸಗುತ್ತೇವೆ. ಉಕ್ರೇನ್ ರಕ್ತವನ್ನು ಹಂಚಿಕೊಂಡ ಮಗು ಇನ್ನು ಮುಂದೆ ಜನಿಸಲೇಬಾರದು’- ಇದು ಅತ್ಯಾಚಾರ ಎಸಗಿದ ರಷ್ಯಾ ಸೈನಿಕರ ಮಾತು. ಬುಚಾದಲ್ಲಿರುವ ಕಟ್ಟಡವೊಂದರ ನೆಲಮಹಡಿಯಲ್ಲಿದ್ದ 14ರಿಂದ 24 ವಯಸ್ಸಿನ 25 ಮಹಿಳೆಯರ ಮೇಲೆ ರಷ್ಯಾ ಸೈನಿಕರು ಅತ್ಯಾಚಾರ ಮಾಡಿದ್ದಾರೆ. ಇವರಲ್ಲಿ ಒಂಬತ್ತು ಮಂದಿ ಗರ್ಭಿಣಿಯರಾಗಿದ್ದಾರೆ.

ಸರ್ಕಾರಿ ಅಧಿಕಾರಿಗಳ ವಿರುದ್ಧದ ದೂರುಗಳ ತನಿಖಾಧಿಕಾರಿ ಡೆನಿಸೋವಾ ಈ ವಿವರಗಳನ್ನು ಬಿಬಿಸಿಗೆ ನೀಡಿದ್ದಾರೆ. ‘ಉಕ್ರೇನ್ ನಿರ್ನಾಮವಾಗಬೇಕು. ದೇಶದ ಪುರುಷರನ್ನು ಕೊಂದು, ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ನಡೆಸಿ, ಮುಂದಿನ ಜನಾಂಗದಲ್ಲಿ ಉಕ್ರೇನ್ ರಕ್ತ ಹರಿಯುವ ಜನರೇ ಇರಬಾರದು ಎಂಬುದು ರಷ್ಯಾ ಸೈನಿಕರ ಕಾರ್ಯತಂತ್ರ’ ಎಂದು ಅವರು ವಿವರಿಸಿದ್ದಾರೆ.

ಉಕ್ರೇನ್‌ನಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರವನ್ನು ‘ಅವಕಾಶವಾದಿ ಲೈಂಗಿಕ ದೌರ್ಜನ್ಯ’ ಎಂದು ಅಲ್ಲಿನ ಮಾನವಹಕ್ಕು ಹೋರಾಟಗಾರರು ಕರೆದಿದ್ದಾರೆ.

ರಷ್ಯಾ ಸೈನಿಕರು ಬುಚಾ ಪ್ರಾಂತ್ಯದಿಂದ ಹೊರಹೋದ ಬಳಿಕವಷ್ಟೇ ಅಲ್ಲಿನ ಮಹಿಳೆಯರು ಅನುಭವಿಸಿದ ಯಾತನೆಯು ಹೊರ ಜಗತ್ತಿಗೆ ತಿಳಿಯಿತು. ಇಲ್ಲಿನ ರಸ್ತೆಯ ಮೇಲೆ ಅರೆ ನಗ್ನ, ಅರೆ ಬೆಂದ ಸ್ಥಿತಿಯಲ್ಲಿ ಸಿಕ್ಕ ನಾಲ್ವರು ಹೆಣ್ಣುಮಕ್ಕಳ ಹೆಣಗಳ ವಿಡಿಯೊವನ್ನು ಉಕ್ರೇನ್‌ನ ರಕ್ಷಣಾ ಸಚಿವಾಲಯವು ಟ್ವಿಟರ್‌ನಲ್ಲಿ ಹಂಚಿಕೊಂಡಿತ್ತು. ಇದಾದ ಬಳಿಕ ಒಂದೊಂದೇ ಪ್ರಕರಣಗಳು ಬೆಳಕಿಗೆ ಬರತೊಡಗಿದವು.

‘ಅತ್ಯಾಚಾರದ ಬಳಿಕ ಹತ್ಯೆಗೊಳಗಾದ ಮಹಿಳೆಯರು, ಪದೇ ಪದೇ ಅತ್ಯಾಚಾರಕ್ಕೊಳಗಾದ ಹೆಣ್ಣುಮಕ್ಕಳು, ಲೈಂಗಿಕ ಗುಲಾಮಗಿರಿಗೆ ಒಳಪಟ್ಟವರು ಮತ್ತು ಅತ್ಯಾಚಾರದಿಂದ ಗರ್ಭಿಣಿಯರಾದ ಮಹಿಳೆಯರ ಫೋಟೊಗಳು ಎಲ್ಲೆಡೆ ಹರಿದಾಡುತ್ತಿವೆ. ಈ ಎಲ್ಲಾ ಚಿತ್ರಗಳೂ ‘ಅವಕಾಶವಾದಿ ಲೈಂಗಿಕ ದೌರ್ಜನ್ಯ’ದ ಕತೆಯನ್ನೇ ಹೇಳುತ್ತಿವೆ’ ಎನ್ನುತ್ತಾರೆ ಹಾರ್ವರ್ಡ್ ಕೆನಡಿ ಸ್ಕೂಲ್‌ನ ಸಾರ್ವಜನಿಕ ನೀತಿ ವಿಷಯದ ಪ್ರಾಧ್ಯಾಪಕಿ ಡಾರಾ ಕೆ ಕೊಹೆನ್.

ಹೆಂಡತಿ ಎದುರೇ ಗಂಡನನ್ನು ಕೊಂದು, ಅಲ್ಲೇ ಅತ್ಯಾಚಾರ ಮಾಡುವುದು, ಪುಟ್ಟ ಮಕ್ಕಳ ಮುಂದೆಯೇ ತಾಯಂದಿರ ಮೇಲೆ ಅತ್ಯಾಚಾರ ಮಾಡುವುದು, ಕುಟುಂಬದವರ ಮುಂದೆಯೇ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಮಾಡುವುದು, ಒಂದು ಬೀದಿಯ ನಾಲ್ಕಾರು ಮನೆಗಳಿಗೆ ನುಗ್ಗಿ ಅತ್ಯಾಚಾರ ನಡೆಸುವುದು ಉಕ್ರೇನ್‌ನ ನಗರಗಳಲ್ಲಿ ಸಾಮಾನ್ಯವಾಗಿದೆ ಎನ್ನುತ್ತಾರೆ ಅಲ್ಲಿನ ಮಾನವಹಕ್ಕುಗಳ ಹೋರಾಟಗಾರರು.

## ಕೈಗೆಟುಕದ ಆರೋಗ್ಯ ಸೇವೆ

ಯುದ್ಧ ಪ್ರಾರಂಭವಾದಾಗಿನಿಂದ ಈವರೆಗೆ ರಷ್ಯಾ ಪಡೆಗಳು ಉಕ್ರೇನ್‌ನ 31 ಆರೋಗ್ಯ ಕೇಂದ್ರಗಳ ಮೇಲೆ ದಾಳಿ ನಡೆಸಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ವರದಿ ನೀಡಿದೆ. ಈ ಎಲ್ಲದರ ಪರಿಣಾಮವು ನೇರವಾಗಿ ಮಹಿಳೆಯರ ಮೇಲಾಗಿದೆ. ಸರಿಯಾದ ಆರೋಗ್ಯ ಸೇವೆ ಸಿಗದೆ, ಗರ್ಭಿಣಿಯರಿಗೆ, ತಾಯಂದಿರಿಗೆ ಹೆಚ್ಚಿನ ನಷ್ಟವಾಗಿದೆ.

ಫೆಬ್ರುವರಿಯಿಂದ ಈಚೆಗೆ 4,300 ಹೆರಿಗೆಗಳಾಗಿವೆ. ಇನ್ನೂ 80,000 ಮಹಿಳೆಯರಿಗೆ ಮುಂದಿನ ಮೂರು ತಿಂಗಳಲ್ಲಿ ಹೆರಿಗೆ ಆಗಲಿದೆ. ಆಸ್ಪತ್ರೆಯಲ್ಲಿ, ಚೊಕ್ಕಟವಾದ ಜಾಗದಲ್ಲಿ ಆಗಬೇಕಾಗಿದ್ದ ಹೆರಿಗೆಗಳು, ಕನಿಷ್ಠ ಆರೋಗ್ಯ ಸೇವೆಯೊಂದಿಗೆ ನೆಲಮಹಡಿಗಳಲ್ಲಿ ಆಗುತ್ತಿವೆ. ಯುದ್ಧದಿಂದ ಉಂಟಾದ ಭಯದಿಂದಾಗಿ, ಅಪೌಷ್ಟಿಕತೆಯಿಂದಾಗಿ ಅವಧಿಪೂರ್ವ ಜನನಗಳು ಮೂರು ಪಟ್ಟು ಹೆಚ್ಚಾಗಿವೆ ಎಂದು ವಿಶ್ವ ಸಂಸ್ಥೆ ಹೇಳಿದೆ.

ಯುದ್ಧದ ಕಾರಣದಿಂದಾಗಿ ಸಾರ್ವಜನಿಕ ಸಾರಿಗೆ ಸ್ಥಗಿತಗೊಂಡಿದೆ. ಗರ್ಭಿಣಿಯರು, ತಾಯಂದಿರು ವೈದ್ಯರನ್ನು ಸಂಪರ್ಕಿಸಲು ಇರುವುದು ಮೊಬೈಲ್ ವಿಡಿಯೊ ಸಂವಾದ ಮಾತ್ರ. ಆದರೆ, ಹೆಚ್ಚಿನ ಜನರು ಗ್ರಾಮೀಣ ಪ್ರದೇಶಕ್ಕೆ ಸ್ಥಳಾಂತರಗೊಂಡಿರುವುದರಿಂದ ನೆಟ್‌ವರ್ಕ್ ಸಮಸ್ಯೆ ಎದುರಾಗಿದೆ. ಇದರಿಂದ ವೈದ್ಯರ ಸಂಪರ್ಕವೂ ಕಷ್ಟಸಾಧ್ಯವಾಗಿದೆ.

ಋತುಮತಿಯರಾದ ಹೆಣ್ಣುಮಕ್ಕಳಿಗೆ ತೊಂದರೆಯಾಗಿದೆ. ಉಕ್ರೇನ್‌ನಲ್ಲಿ ವಿದ್ಯುತ್ ಪೂರೈಕೆ ಸಮಸ್ಯೆಯಿಂದಾಗಿ ಶಿಬಿರಗಳಲ್ಲಿ ನೀರು ಸರಬರಾಜು ಅಸ್ತವ್ಯಸ್ತವಾಗಿದೆ. ‘ನಾವು ಉಳಿದುಕೊಂಡಿದ್ದ ಶಿಬಿರದಲ್ಲಿ ಮೂರು ದಿನ ನೀರು ಇರಲಿಲ್ಲ. ನಾನು ಋತುಮತಿಯಾಗಿದ್ದೆ. ಕುಡಿಯಲೂ ನೀರು ಸಿಗದ ಸಮಯದಲ್ಲಿ ಇದಕ್ಕಾಗಿ ಎಲ್ಲಿಂದ ನೀರು ತರುವುದು. ಮೂರು ದಿನವು ವೆಟ್‌ವೈಪ್ಸ್‌ಗಳನ್ನು ಬಳಸಿದೆ’ ಎನ್ನುತ್ತಾರೆ ಹಾರ್ಕಿವ್‌ನ ಮಹಿಳೆ.

## ವಸತಿಗಾಗಿ ಹುಡುಕಾಟ

ಸ್ಥಳಾಂತರಗೊಂಡ ಮಹಿಳೆಯರಲ್ಲಿ ಶೇ 60ರಷ್ಟು ಮಂದಿ ಈಗಲೂ ಸುರಕ್ಷಿತ ವಸತಿಗಾಗಿ ಹುಡುಕಾಟದಲ್ಲಿಯೇ ಇದ್ದಾರೆ. ಸುರಕ್ಷಿತ ವಸತಿ ಇಲ್ಲದ ಕಾರಣಕ್ಕೆ ಮಹಿಳೆಯ ಮೇಲಿನ ಲೈಂಗಿಕ ದೌರ್ಜನ್ಯ, ಮಾನವ ಕಳ್ಳಸಾಗಣೆ ನಡೆಯುವ ಅಪಾಯ ಹೆಚ್ಚಾಗಿದೆ.

ಸ್ಥಳಾಂತರಗೊಂಡವರಿಗೆ ಬಾಡಿಗೆ ಮನೆ ಪಡೆಯುವುದು ಸುಲಭವಲ್ಲ. ಪರಿಸ್ಥಿತಿಯ ದುರುಪಯೋಗ ಮಾಡಿಕೊಳ್ಳುತ್ತಿರುವ ಮನೆ ಮಾಲೀಕರು ವಲಸೆ ಬಂದವರಿಂದ ಹೆಚ್ಚಿನ ಬಾಡಿಗೆಗೆ ಬೇಡಿಕೆ ಇಡುತ್ತಿದ್ದಾರೆ. ಅಪರಿಚಿತ ಊರುಗಳಲ್ಲಿ, ಅಪರಿಚಿತರ ಮಧ್ಯೆ ವಾಸಿಸುವ ಸ್ಥಿತಿಯು ಮಹಿಳೆಯರಲ್ಲಿ ಭೀತಿ ಮೂಡಿಸಿದೆ. ರೈಲು ನಿಲ್ದಾಣಗಳಲ್ಲಿಯೇ ಉಳಿದುಕೊಂಡಿರುವ ಮಹಿಳೆಯರೂ ಇದ್ದಾರೆ.

ವಲಸಿಗ ಕುಟುಂಬಗಳಲ್ಲಿ ಕೌಟುಂಬಿಕ ದೌರ್ಜನ್ಯ ಪ್ರಕರಣಗಳು ಹೆಚ್ಚಾಗಿವೆ ಎಂದು ವಿಶ್ವಸಂಸ್ಥೆಯ ವರದಿ ಹೇಳಿದೆ. ದೌರ್ಜನ್ಯದ ವಿರುದ್ಧ ಧ್ವನಿ ಎತ್ತುವ ಸ್ಥಿತಿಯಲ್ಲಿ ಇಲ್ಲದ ಮಹಿಳೆಯರು ಏನೇ ಆದರೂ ಹೊಂದಿಕೊಂಡು ಹೋಗಬೇಕಾದ ಸ್ಥಿತಿ ನಿರ್ಮಾಣ ಆಗಿದೆ.

ಆಧಾರ: ಬಿಬಿಸಿ, ಎನ್‌ಆರ್‌ಪಿ ನ್ಯೂಸ್, ರ್‍ಯಾಪಿಡ್ ಜೆಂಡರ್ ಅನಾಲಿಸಿಸ್ ಆಫ್ ಉಕ್ರೇನ್ (ವಿಶ್ವ ಸಂಸ್ಥೆ ವರದಿ), ವಿಶ್ವ ಆರೋಗ್ಯ ಸಂಸ್ಥೆ ವರದಿ



ಉಕ್ರೇನ್‌ನಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರವನ್ನು ಖಂಡಿಸಿ ನ್ಯೂಯಾರ್ಕ್‌ನ ರಷ್ಯಾ ಕಾನ್ಸುಲೇಟ್ ಮುಂದೆ ಮೇ ತಿಂಗಳಲ್ಲಿ ನಡೆದ ಪ್ರತಿಭಟನೆಯೊಂದರ ದೃಶ್ಯ ಎಎಫ್‌ಪಿ ಚಿತ್ರ

## ಯುದ್ಧಾಪರಾಧ ಎಂದರೇನು?

ಎರಡನೇ ಮಹಾ ಯುದ್ಧದ ಸಂದರ್ಭದಲ್ಲಿ ನಾಗರಿಕರ ಮೇಲೂ ಭೀಕರವಾದ ಕ್ರೌರ್ಯ ಎಸಗಲಾಗಿದೆ. ಅಣ್ವಸ್ತ್ರ ಬಳಸಿ ಅಪಾರ ವಿನಾಶ ಮಾಡಲಾಗಿದೆ. ಸೊತ್ತುಗಳನ್ನು ನಾಶ ಮಾಡಲಾಗಿದೆ. ಇದು ಆಗ ಜಗತ್ತಿನ ಕಣ್ಣು ತೆರೆಸಿತು. ಹಾಗಾಗಿಯೇ 1949ರಲ್ಲಿ ಜಿನೀವಾದಲ್ಲಿ ನಡೆದ ಸಮಾವೇಶದಲ್ಲಿ ಒಪ್ಪಂದವೊಂದನ್ನು ಮಾಡಿಕೊಳ್ಳಲಾಗಿದೆ. ಅದರ ಪ್ರಕಾರ, ಯುದ್ಧದಲ್ಲಿ ನಾಗರಿಕರ ಹತ್ಯೆ ಮಾಡುವಂತಿಲ್ಲ. ಸಾರ್ವಜನಿಕ ವ್ಯವಸ್ಥೆಗೆ ಯಾವುದೇ ಧಕ್ಕೆ ತರುವಂತಿಲ್ಲ. ಜೈವಿಕ ಆಯುಧ ಬಳಸುವಂತಿಲ್ಲ. ಕೊಲೆ, ಅತ್ಯಾಚಾರ, ಕಳ್ಳತನ, ಗುಂಪು ಹತ್ಯೆ ಮುಂತಾದ ಅನೈತಿಕ ಕೃತ್ಯಗಳನ್ನು ಮಾಡುವಂತಿಲ್ಲ.

ಆದರೆ, ರಷ್ಯಾವು ಉಕ್ರೇನ್‌ನಲ್ಲಿ 15 ಸಾವಿರಕ್ಕೂ ಹೆಚ್ಚು ಯುದ್ಧಾಪರಾಧ ಎಸಗಿದೆ ಎಂದು ಉಕ್ರೇನ್ ಹೇಳಿದೆ. ಉಕ್ರೇನ್‌ನಲ್ಲಿ ರಷ್ಯಾ ಸೈನಿಕರು ಎಸಗಿದ ಎಲ್ಲ ಕೃತ್ಯಗಳಿಗೆ ರಷ್ಯಾ ನೇರ ಹೊಣೆ ಎಂದು ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.



ಉಕ್ರೇನ್‌ನ ಸಾಮೂಹಿಕ ಸಮಾಧಿ

‘ನಮ್ಮ ಮೇಲೆ ಅತ್ಯಾಚಾರ ಎಸಗುವುದನ್ನು ನಿಲ್ಲಿಸಿ’- ಇದು ಬೆತ್ತಲೆ ಮೈಯ ಮೇಲೆ ಉಕ್ರೇನ್ ಧ್ವಜದ ಚಿತ್ರ ಬರೆದುಕೊಂಡಿದ್ದ ಮಹಿಳೆಯೊಬ್ಬರು ಕಾನ್ ಚಿತ್ರೋತ್ಸವದಲ್ಲಿ ಕೂಗಿ ಹೇಳಿದ್ದ ಮಾತು. ರಷ್ಯಾ ವಿರುದ್ಧದ ಆಕ್ರೋಶವನ್ನು ಈ ರೀತಿ ಹೊರಹಾಕಿದ ಮಹಿಳೆಯನ್ನು ಭದ್ರತಾ ಸಿಬ್ಬಂದಿ ಹೊರಕ್ಕೆ ಕಳುಹಿಸಿದರು. ಉಕ್ರೇನ್‌ನ ಮಹಿಳೆಯರ ಸ್ಥಿತಿಯ ಬಗ್ಗೆ ಜಗತ್ತು ಮತ್ತೆ ಗಮನ ಹರಿಸುವ ಅಗತ್ಯವನ್ನು ಈ ಕೂಗು ಸಾರಿ ಹೇಳಿದೆ

**55** ಲಕ್ಷ - ನಿರಾಶ್ರಿತರು

**90%** ರಷ್ಟು - ಮಹಿಳೆಯರು ಮತ್ತು ಮಕ್ಕಳು

**77** ಲಕ್ಷ - ಆಂತರಿಕವಾಗಿ ಸ್ಥಳಾಂತರಗೊಂಡವರು

**60%** ರಷ್ಟು - ಮಹಿಳೆಯರು ಮತ್ತು ಮಕ್ಕಳು

## ಶಿಕ್ಷೆ ಆಗಲಿದೆಯೆ?

ಯುದ್ಧಾಪರಾಧಗಳ ವಿಚಾರಣೆ ನಡೆಸಲು ಅಂತರರಾಷ್ಟ್ರೀಯ ಅಪರಾಧ ವಿಚಾರಣಾ ನ್ಯಾಯಾಲಯ (ಐಸಿಸಿ) ಹಾಗೂ ಅಂತರರಾಷ್ಟ್ರೀಯ ನ್ಯಾಯಾಲಯ (ಐಸಿಜೆ) ಇವೆ. ಆದರೆ, ಇವುಗಳಿಗೆ ಇವುಗಳದ್ದೇ ಆದ ಮಿತಿಗಳೂ ಇವೆ.

ಉಕ್ರೇನ್ ಆರೋಪಿಸುತ್ತಿರುವ ಯುದ್ಧಾಪರಾಧಗಳ ಕುರಿತು ತನಿಖೆ ನಡೆಸುವುದಕ್ಕಾಗಿ ಐಸಿಸಿಯು ಸಮಿತಿಯೊಂದನ್ನು ರಚಿಸಿದೆ. ಆರೋಪಗಳು ಸಾಬೀತಾದರೆ ಆರೋಪಿಗಳನ್ನು ಶಿಕ್ಷೆಗೆ ಒಳಪಡಿಸಬಹುದು. ಆದರೆ, ಈ ನ್ಯಾಯಾಲಯಕ್ಕೆ ದೇಶವನ್ನು ಶಿಕ್ಷಿಸುವ ಹಕ್ಕಿಲ್ಲ. ಜತೆಗೆ, ತನ್ನದೇ ಪೊಲೀಸ್ ವ್ಯವಸ್ಥೆಯೂ ಇಲ್ಲ. ಆರೋಪಿಗಳ ಬಂಧನಕ್ಕೆ ಆ ದೇಶದ ಪೊಲೀಸರ ಸಹಾಯವನ್ನೇ ಇದು ಪಡೆಯಬೇಕಾಗುತ್ತದೆ.

ಅಪರಾಧ ಎಸಗಿದೆ ಎಂಬುದು ಸಾಬೀತಾದರೆ ಯಾವುದೇ ದೇಶವನ್ನು ಐಸಿಜೆ ಶಿಕ್ಷಿಸಬಹುದು. ಆದರೆ, ವ್ಯಕ್ತಿಗಳನ್ನು ಶಿಕ್ಷಿಸುವ ಹಕ್ಕು ಈ ನ್ಯಾಯಾಲಯಕ್ಕೆ ಇಲ್ಲ. ಅದರ ಜತೆಗೆ ಇನ್ನೂ ಒಂದು ಸಮಸ್ಯೆ ಇದೆ. ದೇಶ-ದೇಶಗಳ ನಡುವಣ ವಿವಾದದ ವಿಚಾರಣೆ ನಡೆಸಬೇಕಾದರೆ ಎರಡೂ ದೇಶಗಳು ಒಪ್ಪಿಗೆ ನೀಡಬೇಕಾಗುತ್ತದೆ. ಯಾವುದೇ ವಿಷಯದಲ್ಲಿ ಐಸಿಜೆ ವಿಚಾರಣೆ ನಡೆಸಬಹುದು ಎಂಬ ಸಾರ್ವತ್ರಿಕ ಒಪ್ಪಿಗೆ ಅಥವಾ ನಿರ್ದಿಷ್ಟ ಪ್ರಕರಣದ ವಿಚಾರಣೆಗೆ ಒಪ್ಪಿಗೆ ನೀಡಬಹುದು. ರಷ್ಯಾ ಈ ಎರಡರಲ್ಲಿ ಯಾವುದೇ ರೀತಿಯ ಒಪ್ಪಿಗೆಯನ್ನೂ ನೀಡಿಲ್ಲ. ಹಾಗಾಗಿ, ಐಸಿಜೆ ವಿಚಾರಣೆ ನಡೆಸುವ ಸಾಧ್ಯತೆ ಕ್ಷೀಣವಾಗಿದೆ.

15,000 ಯುದ್ಧಾಪರಾಧಗಳ ಪಟ್ಟಿಯನ್ನು ಉಕ್ರೇನ್ ಈಗಾಗಲೇ ಸಿದ್ಧಪಡಿಸಿಕೊಂಡಿದೆ. ಒಂದೊಮ್ಮೆ ಅಂತರರಾಷ್ಟ್ರೀಯ ನ್ಯಾಯಾಲಯವು ರಷ್ಯಾವನ್ನು ಶಿಕ್ಷಿಸಿದರೂ, ವಿಶ್ವ ಸಂಸ್ಥೆ ಈ ಶಿಕ್ಷೆಯನ್ನು ಜಾರಿ ಮಾಡಬೇಕು. ಆದರೆ, ರಷ್ಯಾವು ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ಕಾಯಂ ಸದಸ್ಯ ರಾಷ್ಟ್ರ. ಆದ್ದರಿಂದ ತನ್ನ ವಿರುದ್ಧದ ವಿಶ್ವ ಸಂಸ್ಥೆಯ ತೀರ್ಮಾನವನ್ನು ತನ್ನ ಪರಮಾಧಿಕಾರ ಬಳಸಿ ರಷ್ಯಾವು ತಡೆಯಬಹುದಾಗಿದೆ.

## ಜೀವಾವಧಿ ಶಿಕ್ಷೆ

ಉಕ್ರೇನ್‌ನ ವ್ಯಕ್ತಿಯನ್ನು ಹತ್ಯೆ ಮಾಡಿದ ಆರೋಪದ ಮೇಲೆ ರಷ್ಯಾದ 21 ವರ್ಷದ ಸೈನಿಕನಿಗೆ ಉಕ್ರೇನ್ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿದೆ. ಯುದ್ಧ ಪ್ರಾರಂಭವಾದ ಮೇಲೆ ರಷ್ಯಾ ಸೈನಿಕನಿಗೆ ಶಿಕ್ಷೆ ವಿಧಿಸಿದ ಮೊದಲ ಪ್ರಕರಣ ಇದು.

ವ್ಯಕ್ತಿಯೊಬ್ಬನನ್ನು ಕೊಂದು, ಆತನ ಹೆಂಡತಿಯ ಮೇಲೆ ಅತ್ಯಾಚಾರ ಎಸಗಿದ ಆರೋಪ ಹೊತ್ತ ರಷ್ಯಾ ಸೈನಿಕನನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದ್ದು, ಉಕ್ರೇನ್ ನ್ಯಾಯಾಲಯವು ವಿಚಾರಣೆ ಮುಂದುವರಿಸಿದೆ.




## ಶಿವಕಲ್ಯಾಣಕ್ಕೆ ಬ್ರಹ್ಮಸಂಧಾನ

ರುದ್ರದೇವನನ್ನು ಪತಿಯಾಗಿ ಪಡೆಯಲು ಸತೀದೇವಿಯು ಮತ್ತೆ ಅಶ್ವಯುಜ ಶುಕ್ಲ ಅಷ್ಟಮಿಯಲ್ಲಿ ಉಪವಾಸವಿದ್ದು, ದೇವದೇವನಾದ ಶಿವನನ್ನು ಭಕ್ತಿಯಿಂದ ಆರಾಧಿಸುತ್ತಾಳೆ. ನಂದಾವ್ರತವು ಮುಗಿಯುವ ನವಮಿಯ ದಿನ ಪ್ರಾತಃಕಾಲದಲ್ಲಿ ಸತೀದೇವಿ ಧ್ಯಾನಮಗ್ನಳಾಗಿರುವಾಗ ಶಿವ ಅವಳೆದುರಿಗೆ ಪ್ರತ್ಯಕ್ಷನಾಗುತ್ತಾನೆ.

ಮಹಾಶಿವ ಸರ್ವಾಂಗಸುಂದರನಾಗಿ ಸುವರ್ಣದಂತೆ ಹೊಳೆಯುವ ಶರೀರಕಾಂತಿಯಿಂದ ಬೆಳಗುತ್ತಿದ್ದ. ಐದು ಮುಖಗಳು, ಮೂರು ಕಣ್ಣುಗಳು, ಲಲಾಟದಲ್ಲಿ ಚಂದ್ರಕಲೆಯು ಪ್ರಕಾಶಿಸುತ್ತಲಿದ್ದವು. ಶಾಂತಮುದ್ರೆಯಿಂದೊಪ್ಪುತ್ತಿದ್ದ. ಅವನ ಕತ್ತು ನೀಲ ವರ್ಣವಾಗಿತ್ತು. ಆತನ ನಾಲ್ಕು ಬಾಹುಗಳಲ್ಲಿ ಒಂದು ಕೈಯಲ್ಲಿ ತ್ರಿಶೂಲ, ಇನ್ನೊಂದು ಕೈಯಲ್ಲಿ ಬ್ರಹ್ಮಕ, ಮತ್ತೊಂದು ಕೈಯಲ್ಲಿ ವರದಮುದ್ರೆ ಮತ್ತು ಮಗದೊಂದು ಕೈ ಅಭಯಮುದ್ರೆ ಪ್ರದರ್ಶಿಸುತ್ತಿತ್ತು. ಅವನ ಶರೀರ ಭಸ್ಮದಿಂದ ಕಂಗೊಳಿಸುತ್ತಿತ್ತು. ಶಿರಸ್ಸಿನಲ್ಲಿ ದೇವಗಂಗೆ ಪ್ರಕಾಶಿಸುತ್ತಿದ್ದಳು. ತುಂಬಾ ಲಾವಣ್ಯಮಯನಾಗಿ ಕೋಟಿಚಂದ್ರರಂತೆ ಪ್ರಕಾಶಿಸುತ್ತಾ ಆನಂದದಾಯಕನಾಗಿದ್ದ ಜಗದೊಡೆಯ ಶಂಕರನನ್ನು ನೋಡಿ ಸತೀದೇವಿಯು ರೋಮಾಂಚಿತಳಾದಳು. ಆನಂದೋತ್ಸಾಹದಿಂದ ಶಿವನ ಪಾದಗಳಿಗೆ ನಮಸ್ಕರಿಸಿದಳು.

ಸತೀದೇವಿ ಮಹಾತಪಸ್ಸನ್ನಾಚರಿಸಲು ಕಾರಣ ಗೊತ್ತಿದ್ದರೂ, ಅವಳ ಇಂಪಾದ ವಾಕ್ಯವನ್ನು ಕೇಳಲಿಚ್ಛೆಯಿಂದ ‘ವರವನ್ನು ಕೇಳಿಕೋ’ ಎಂದ ಶಿವ. ಆಗ ಸತೀದೇವಿಯೂ ತನ್ನ ಮನಸ್ಸಿನಲ್ಲಿದ್ದುದನ್ನು ಹೇಳಲಾರದೆ ಲಜ್ಜೆಯಿಂದ ಮಾತನಾಡದೆ ಸುಮ್ಮನೆ ನಿಂತಿದ್ದಳು. ಶಂಕರ ಮತ್ತಷ್ಟು ಸತೀದೇವಿಯನ್ನು ಕೆಣಕಲು ‘ನಿನ್ನ ಭಕ್ತಿಗೆ ಮೆಚ್ಚಿದ್ದೇನೆ. ವರವನ್ನು ಕೇಳಿಕೋ’ ಎಂದು ಪುನಃ ಹೇಳುತ್ತಾನೆ. ಸತೀದೇವಿಯು ‘ಓ ದೇವನೆ, ನಿನಗೆ ಯಾವುದು ಯುಕ್ತವಾಗಿ ತೋರುವುದೋ, ಆ ವರವನ್ನು ಅನುಗ್ರಹಿಸು’ ಎಂದು ಹೇಳುತ್ತಾಳೆ.

ಆಗ ಶಂಕರ ಹೆಚ್ಚು ಕಾಡಿಸಬಾರದೆಂದು ‘ಎಲೈ, ಸತೀದೇವಿ, ನೀನು ನನ್ನ ಭಾರ್ಯೆಯಾಗು’ ಎಂದ. ತನಗೆ ಇಷ್ಟವಾದಂತಹ ಮಾತನ್ನು ಕೇಳಿ ತುಂಬಾ ಹರ್ಷಗೊಂಡ ಸತೀದೇವಿ ಮಾತುಹೊರಡಿಸಲಾಗದೆ ಸುಮ್ಮನೆ ಕೆಲಹೊತ್ತು ನಿಂತಳು. ಮಾತಾಡಲು ಸತೀದೇವಿಗೆ ಸಂಕೋಚವಾಗಿ, ಮಂದಹಾಸ ಬೀರುತ್ತಾ ತನ್ನ ಒಪ್ಪಿಗೆಯನ್ನು ಸೂಚಿಸಿದಳು.

ಈ ಸಂದರ್ಭದಲ್ಲಿ ಶಿವ-ಸತೀದೇವಿಯರ ನಡುವೆ ಶೃಂಗಾರರಸವು ಅವರ ಮನಸ್ಸನ್ನು ಪ್ರವೇಶಿಸಿತು. ಲೋಕಸಾಮಾನ್ಯರಂತೆ ಶಂಗಾರಲೀಲೆಗಳನ್ನು ಪ್ರದರ್ಶಿಸುತ್ತ ಚಿತ್ರಾನಕ್ಷತ್ರದೊಡನಿರುವ ಚಂದ್ರನಂತೆ ಪ್ರಕಾಶಿಸಿದರು. ಸಾಂದ್ರವಾದ ಅಂಜನಖಂಡದಂತೆ ಕಪ್ಪಾದ ಶರೀರಕಾಂತಿಯಂತಿದ್ದ ಸತೀದೇವಿಯು ಶಿವನ ಬಳಿಯಲ್ಲಿ ಸ್ಫಟಿಕದಂತೆ ಶುಭ್ರವಾದ ಕಾಂತಿಯುಳ್ಳ ಚಂದ್ರನ ಬಳಿಯಲ್ಲಿರುವ ನೀಲಮೇಘರೇಖೆಯಂತೆ ಕಂಗೊಳಿಸಿದಳು. ಸತೀದೇವಿ ಸಂತೋಷದಿಂದ ‘ಶಂಕರನೆ, ನನ್ನ ತಂದೆ ಬಳಿ ಅನುಮತಿ ಪಡೆದು ನನ್ನ ಮದುವೆಯಾಗಬೇಕು’ ಎಂದು ಕೋರಿದಳು. ಶಿವನು ಹಾಗೆಯೇ ಆಗಲಿ ಎಂದು ಒಪ್ಪಿದ. ನಂತರ ಸತೀದೇವಿ ಶಂಕರನಿಗೆ ನಮಸ್ಕರಿಸಿ, ತನ್ನ ತಾಯಿಯ ಬಳಿಗೆ ಹೋದಳು.

ಇತ್ತ ಶಿವ ಸಹ ಹಿಮಾಲಯದ ತಪ್ಪಲಲ್ಲಿರುವ ತನ್ನ ಆಶ್ರಮಕ್ಕೆ ತೆರಳಿದ. ಆದರೆ ಸತೀದೇವಿಯ ವಿರಹದಿಂದ ತುಂಬಾ ಪ್ರಯಾಸದಿಂದ ಧ್ಯಾನನಿರತನಾದ. ಮನಸ್ಸು ವಿಚಲಿತವಾಗುತ್ತಿದ್ದರಿಂದ ಬ್ರಹ್ಮನನ್ನು ಸ್ಮರಿಸಿದ. ಕೂಡಲೇ ಬ್ರಹ್ಮ ತನ್ನ ಪತ್ನಿ ಸರಸ್ವತೀದೇವಿಯೊಡನೆ ಶಿವನಿರುವ ಹಿಮಾಲಯದ ತಪ್ಪಲಿಗೆ ಆಗಮಿಸಿದ. ಸರಸ್ವತಿಯೊಡನೆ ಬಂದ ಬ್ರಹ್ಮನನ್ನು ನೋಡಿ ಶಿವ ಉತ್ಸುಕತೆಯಿಂದ ಹೇಳಿದ ‘ಎಲೈ ಬ್ರಹ್ಮನೆ, ಈಗ ನಾನು ಮದುವೆಯನ್ನು ಮಾಡಿಕೊಳ್ಳಬೇಕೆಂದಿರುವೆ. ದಕ್ಷಪುತ್ರಿಯಾದ ಸತೀದೇವಿಯು ಭಕ್ತಿಯಿಂದ ನಂದಾವ್ರತವನ್ನಾಚರಿಸಿ ನನ್ನನ್ನಾರಾಧಿಸಿದಳು. ಅವಳ ಕೋರಿಕೆಯಂತೆ ಮದುವೆಯಾಗಬೇಕೆಂದಿದ್ದೇನೆ. ಆದುದರಿಂದ ನೀನೀಗ ದಕ್ಷನ ಮನೆಗೆ ಹೋಗಿ, ಅವನು ತನ್ನ ಪುತ್ರಿಯನ್ನು ನನಗೆ ಮದುವೆ ಮಾಡಿಕೊಡುವಂತೆ ಹೇಳಬೇಕು’ ಎಂದ.

ಶಿವನ ಮಾತನ್ನು ಕೇಳಿ ಆನಂದಿತನಾದ ಬ್ರಹ್ಮ ಮದುವೆಯ ಸಂಧಾನಕ್ಕಾಗಿ ದಕ್ಷಬ್ರಹ್ಮನ ಬಳಿ ಹೋಗಲು ಒಪ್ಪಿದ. ಸತೀದೇವಿಯನ್ನು ಶಿವ ಮದುವೆಯಾಗುವುದರಲ್ಲಿ ತನಗೂ ಇತರ ದೇವತೆಗಳಿಗೂ ಸಹಮತವಿದೆ ಎಂದು ತಿಳಿಸಿದ್ದಲ್ಲದೆ, ‘ದಕ್ಷಪ್ರಜಾಪತಿ ತನ್ನ ಮಗಳನ್ನು ನಿನಗೆ ಮದುವೆ ಮಾಡಿಕೊಡಲು ಉತ್ಸುಕನಾಗಿದ್ದಾನೆ. ನನ್ನ ಮದುವೆ ಸಂಧಾನ ಔಪಚಾರಿಕವಾಗಿಯಷ್ಟೇ ನಡೆಯುತ್ತದೆ. ಸತೀದೇವಿಯೊಂದಿಗೆ ನಿನ್ನ ವಿವಾಹ ನಿಶ್ಚಿತ’ ಎಂದು ಶಿವನಿಂದ ಬೀಳ್ಕೊಂಡು ಹೊರಟ.

## ರೋಮಾ: ತಾರತಮ್ಯ

ಉಕ್ರೇನ್‌ನಲ್ಲಿರುವ ರೋಮಾ ಜನಾಂಗದ ಜನರ ಸ್ಥಿತಿ ಹೀನಾಯವಾಗಿದೆ. ಒಂದೆಡೆ ಇವರು ರಷ್ಯಾ ಸೈನಿಕರಿಂದ ತಪ್ಪಿಸಿಕೊಳ್ಳಬೇಕಿದೆ. ಮತ್ತೊಂದೆಡೆ, ಉಕ್ರೇನ್ ನಾಗರಿಕರಿಂದಲೇ ತಮಗೆ ಆಗುತ್ತಿರುವ ತಾರತಮ್ಯದ ವಿರುದ್ಧ ಹೋರಾಟ ನಡೆಸಬೇಕಾಗಿದೆ. ಈ ಜನಾಂಗದ ಮಹಿಳೆಯರ ಸ್ಥಿತಿಯು ಉಕ್ರೇನ್‌ನ ಸಾಮಾನ್ಯ ಮಹಿಳೆಯರ ಸ್ಥಿತಿಗಿಂತ ಹೀನಾಯವಾಗಿದೆ. ಈ ತಾರತಮ್ಯ ಕೇವಲ ಅವರ ಜನಾಂಗದ ಕಾರಣಕ್ಕಾಗಿಯೇ ನಡೆಯುತ್ತಿದೆ.

ಊಟ, ವಸತಿ, ರಕ್ಷಣೆ, ಪರಿಹಾರ ಹಂಚಿಕೆ, ಯುದ್ಧದಿಂದ ಕಂಗೆಟ್ಟವರಿಗೆ ನೀಡಲಾಗುವ ನೆರವು ಹೀಗೆ ಎಲ್ಲದರಿಂದಲೂ ಈ ಜನಾಂಗವು ಮತ್ತು ಮುಖ್ಯವಾಗಿ ಮಹಿಳೆಯರು ವಂಚಿತರಾಗಿದ್ದಾರೆ. ಈ ಜನಾಂಗವನ್ನು ಕೇಳುವವರೇ ಇಲ್ಲ ಎನ್ನುವಂತಾಗಿದೆ.

**ಹಿನ್ನೆಲೆ:** ಇದೊಂದು ಅಲೆಮಾರಿ ಜನಾಂಗವಾಗಿದೆ. ಈ ಜನಾಂಗದ ಮೂಲ ಉತ್ತರ ಭಾರತ. ಇವರು 11ನೇ ಶತಮಾನದಲ್ಲಿ ಪರ್ಷಿಯಾಗೆ ವಲಸೆ ಹೋಗುತ್ತಾರೆ. 14ನೇ ಶತಮಾನದ ಹೊತ್ತಿಗೆ ಯುರೋಪಿನ ಹಲವು ದೇಶಗಳಲ್ಲಿ ನೆಲೆ ಕಂಡುಕೊಳ್ಳುತ್ತಾರೆ. 20ನೇ ಶತಮಾನದ ಮಧ್ಯ ಭಾಗದಲ್ಲಿ ಜಗತ್ತಿನ ಎಲ್ಲಾ ದೇಶಗಳಲ್ಲೂ ಈ ಜನಾಂಗದ ಜನರು ಕಾಣಸಿಗುತ್ತಾರೆ. ಉಕ್ರೇನ್‌ನಲ್ಲಿ ಸದ್ಯ 4 ಲಕ್ಷ ರೋಮಾ ಜನಾಂಗದವರಿದ್ದಾರೆ ಎಂದು ಅಂದಾಜಿಸಲಾಗಿದೆ.

## ಗುಂಡಣ್ಣ







## ಹೊಗಳಿಕೆಯ ಬೇಡಿ

**ಮನೆಯೊಳೋ ಮಠದೊಳೋ ಸಭೆಯೊಳೋ ಸಂತೆಯೊಳೋ |**
**ಕೊನೆಗೆ ಕಾಡೊಳೊ ಮಸಾಣದೊಳೊ ಮತ್ತೆಲ್ಲೋ ||**
**ಗಣನೆಗೇರಲಿಕೆಂದು ಜನ ತಪಿಸಿ ತೊಳಲುವುದು |**
**ನೆನೆಯದಾತ್ಮದ ಸುಖವ – ಮಂಕುತಿಮ್ಮ || 653 ||**

**ಪದ-ಅರ್ಥ:** ಗಣನೆಗೇರಲಿಕೆಂದು = ಗಣನೆಗೆ + ಏರಲಿಕೆ + ಎಂದು, ನೆನೆಯದಾತ್ಮದ = ನೆನೆಯದು + ಆತ್ಮದ.

**ವಾಚ್ಯಾರ್ಥ:** ಜನರು ಒದ್ದಾಡಿ ತೊಳಲುವುದು ಮತ್ತೊಬ್ಬರ ಮನ್ನಣೆಯನ್ನು ಪಡೆಯಲು ಅದು ಮನೆಯಲ್ಲೋ, ಮಠದಲ್ಲೋ, ಸಭೆಯಲ್ಲೋ, ಸಂತೆಯಲ್ಲೋ, ಕೊನೆಗೆ ಕಾಡು, ಸ್ಮಶಾನಗಳಲ್ಲೋ ಎಲ್ಲಿಯೂ ಆಗಬಹುದು. ಆದರೆ ಆತ್ಮದ ಸುಖವನ್ನು ನೆನೆಯುವುದಿಲ್ಲ.

**ವಿವರಣೆ:** ಕನ್ನಡದ ಹಾಸ್ಯಬ್ರಹ್ಮ ಬೀಚಿಯವರ ಸುಂದರ ಕಥೆ ‘ಸತ್ತ ಸಾಚಾಸಾಹೇಬ’. ಅದೊಂದು ಊರು. ಊರಿಗೊಬ್ಬ ಪೊಲೀಸ್ ಸಾಹೇಬ ಬಂದ. ಅವನು ಬಹಳ ಖಡಕ್ ಅಧಿಕಾರಿ ಎಂದು ಹೆಸರು ಮಾಡಿದ್ದ. ಅವನು ಬೆಂಕಿ ನವಾಬ. ಕೋಪ ಬಂದರೆ ಆತ ಹಿಡಿದು ಒಳಗೆ ಹಾಕಿ ತದುಕಿ ಬಿಡುತ್ತಾನೆ. ಮುಖ್ಯವೆಂದರೆ ಆತ ಒಂದು ಪೈಸೆ ಲಂಚ ತೆಗೆದುಕೊಳ್ಳುವವನಲ್ಲ. ಪ್ರಾಮಾಣಿಕತೆಯ ಪ್ರತಿಮೂರ್ತಿ. ಊರ ಜನರಿಗೆ ಆಶ್ಚರ್ಯ! ಪೋಲೀಸ್ ಅಧಿಕಾರಿಯಾಗಿಯೂ ಲಂಚ ಮುಟ್ಟುವುದಿಲ್ಲವೆಂದರೆ ಹೇಗೆ? ಊರಿನ ವ್ಯಾಪಾರಸ್ಥರಿಗೆ ಫಜೀತಿಯಾಯಿತು. ಪೋಲೀಸ್ ಮುಖ್ಯಸ್ಥರ ಸಹಕಾರವಿಲ್ಲದೆ ವ್ಯಾಪಾರ ಚೆನ್ನಾಗಿ ನಡೆದೀತು ಹೇಗೆ? ಸಾಹೇಬನ ಹಿನ್ನಲೆಯನ್ನೆಲ್ಲ ಕೆದಕಿ ನೋಡಿದರು. ಊಹೂಂ ಎಲ್ಲಿಯೂ ಅವನ ಅಪ್ರಾಮಾಣಿಕತೆಯ ಚಿನ್ಹೆಯೇ ಇಲ್ಲ! ಮನೆಯಲ್ಲಿ ಇರುವವರೇ ಮೂರು ಜನ. ಸಾಹೇಬ, ಹೆಂಡತಿ ಮತ್ತು ಒಬ್ಬಳೇ ಮಗಳು. ಅದೂ ಪುಟ್ಟ ಹುಡುಗಿ, ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದಾಳೆ. ಊರಲ್ಲಿ ಇದ್ದದ್ದು ಒಂದೇ ಶಾಲೆ. ಆಕೆ ಓದುವುದು ಅಲ್ಲಿಯೇ. ಆ ಶಾಲೆಯ ಅಧ್ಯಕ್ಷರು ದೊಡ್ಡ ವ್ಯಾಪಾರಸ್ಥರು.

ಮರುದಿನ ಅಧ್ಯಕ್ಷರಾದ ವ್ಯಾಪಾರಸ್ಥರು ಶಾಲೆಗೆ ಹೋಗಿ ಪ್ರಿನ್ಸಿಪಾಲ್‌ರಿಗೆ ಆದೇಶ ಕೊಟ್ಟರು. ಮುಂದಿನ ವಾರ ಎಲ್ಲ ಆಟಗಳ, ಭಾಷಣ ಸ್ಪರ್ಧೆಗಳ, ನಾಟಕಗಳ, ಪರೀಕ್ಷೆಗಳು ನಡೆಯಬೇಕು ಮತ್ತು ಸಾಹೇಬರ ಮಗಳಿಗೇ ಎಲ್ಲ ಪ್ರಥಮ ಬಹುಮಾನಗಳು ಬರಬೇಕು. ಅಂತೆಯೇ ಎಲ್ಲ ಸ್ಪರ್ಧೆಗಳು ನಡೆದವು. ಅಧ್ಯಕ್ಷರು ಹೋಗಿ ಸಾಹೇಬರನ್ನು ಕಂಡು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಬರಬೇಕೆಂದು ಆಹ್ವಾನಿಸಿದರು. ಸಾಹೇಬರು, ‘ನೋಡಿ, ನನಗೆ ಯಾವ ಕಾಣಿಕೆಯನ್ನೂ ಕೊಡಕೂಡದು, ನನ್ನನ್ನು ಹೊಗಳಬಾರದು. ಎಂದು ಎಚ್ಚರಿಕೆ ಕೊಟ್ಟರು’ ಎಲ್ಲದಕ್ಕೂ ಒಪ್ಪಿದ್ದಾಯಿತು. ಕಾರ್ಯಕ್ರಮದಲ್ಲಿ ಸಾಹೇಬರಿಗೇ ಆಶ್ಚರ್ಯ! ಆಟ, ಓಟ, ನಾಟಕ, ಭಾಷಣ, ಪರೀಕ್ಷೆ ಎಲ್ಲದರಲ್ಲೂ ತನ್ನ ಮಗಳಿಗೆ ಪ್ರಥಮ ಪ್ರಶಸ್ತಿ. ದೊಡ್ಡ ದೊಡ್ಡ ಕಪ್‌ಗಳನ್ನು ಕೊಟ್ಟಾಗಲೆಲ್ಲ ನೂರಾರು ಫೋಟೋಗಳು! ಮರುದಿನ ನಗರದ ಎಲ್ಲ ಪತ್ರಿಕೆಗಳ ಮುಖಪುಟದಲ್ಲಿ ಸಾಹೇಬರು ಮಗಳಿಗೆ ಪ್ರಶಸ್ತಿ ನೀಡುತ್ತಿರುವ ಫೋಟೋಗಳು. ಪತ್ರಿಕೆಗಳೂ ಅಲ್ಲಿಯ ಮತ್ತೊಬ್ಬ ವ್ಯಾಪಾರಸ್ಥರದೇ. ಮರುದಿನ ವ್ಯಾಪಾರಸ್ಥರೆಲ್ಲ ಸೇರಿ ನೂರಾರು ಫೋಟೋಗಳಿದ್ದ ಅಲ್ಬಂನ್ನು ತೆಗೆದುಕೊಂಡು ಸಾಹೇಬರ ಹತ್ತಿರ ಹೋದರು. ಅದನ್ನೆಲ್ಲ ನೋಡಿ, ಮಗಳ ಅದ್ಭುತ ಸಾಧನೆಯನ್ನು ಕಂಡು ಸಾಹೇಬರ ಮುಖ ಅರಳಿತು, ಹುಬ್ಬು ಸಡಲಿತು. ನಗುತ್ತ ಹೇಳಿದರು, ‘ನನ್ನಿಂದ ಏನಾದರೂ ಸಹಾಯ ಬೇಕಾದರೆ ಸಂಕೋಚ ಬೇಡ’. ಮುಂದೆ ವ್ಯಾಪಾರ ಸುಲಭವಾಯಿತು. ವ್ಯಾಪಾರಸ್ಥರು ಹೇಳಿದರು, ‘ಸತ್ತ ಸಾಚಾ ಸಾಹೇಬ’.

ಹಣಕ್ಕೆ, ಮಣಿಯದವ ಮಗಳ ಹೊಗಳಿಕೆಗೆ ಮಣಿದ. ಇದೇ ಕಗ್ಗದ ಮಾತು. ಜನ, ಮನ್ನಣೆಗೆ ಹಾತೊರೆಯುತ್ತಾರೆ. ಹಣಕ್ಕೊ, ಕೀರ್ತಿಗೋ, ಜನಪ್ರಿಯತೆಗೋ, ತೊಳಲುತ್ತಾರೆ. ಹೀಗೆ ಮನ್ನಣೆಗಾಗಿ ಬಾಯಿ ತೆರೆಯುವ, ಕೈಚಾಚುವ ಉದ್ಯೋಗದಲ್ಲಿ ತಮ್ಮ ಆತ್ಮದ ಸುಖವನ್ನು ಮರೆಯುತ್ತಾರೆ. ಆತ್ಮಸುಖ ದೊರಕುವುದು ಅಭಿಮಾನದಿಂದ ತಲೆಯೆತ್ತಿದಾಗ, ಕೈಚಾಚಿದಾಗಲ್ಲ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜೂನ್ 20, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ:** ಜ್ಯೇಷ್ಠ ಕೃಷ್ಣ ಸಪ್ತಮಿ ಗಂ. 21-02 ನಕ್ಷತ್ರ: ಪೂರ್ವಾಭಾದ್ರಾ ಗಂ. 28-35 ಯೋಗ: ಪ್ರೀತಿ ಗಂ. 08-28, ಕರಣ: ವಿಷ್ಟಿ ಗಂ. 09-35, ಮಿಥುನ ಮಾಸದ 05 ನೇ ದಿನ.
**ರಾಹುಕಾಲ:** ಬೆಳಿಗ್ಗೆ 07:30 – 09:00
**ಸೂರ್ಯೋದಯ:** 06-09 **ಸೂರ್ಯಾಸ್ತ:** 06-56
**ಮುಸ್ಲಿಂ ದಿನಾಂಕ:** 20 ಜುಲ್ಕಾಯದ್
**ಅದೃಷ್ಟ ಸಂಖ್ಯೆ:** 8, 10

**ಮೇಷ:** ವಾಣಿಜ್ಯೋದ್ಯಮ ಮಂದಿಗೆ ಇಂದು ವ್ಯವಹಾರದಲ್ಲಿ ಹೆಚ್ಚಿನ ಬಂಡವಾಳ ತೊಡಗಿಸಲು ಉತ್ತಮ ದಿನ. ನೂತನ ಯೋಜನೆ ರ್ಯಗತಗೊಳಿಸಲು ಸಿಬ್ಬಂದಿವರ್ಗ ಸಹಕರಿಸಲಿದ್ದಾರೆ.

**ವೃಷಭ:** ಎಲ್ಲ ಕೆಲಸವನ್ನು ಏಕಾಗ್ರತೆಯಿಂದ ಸಾಧಿಸಲು ಯತ್ನಿಸುವಿರಿ ಅದರ ಫಲವಾಗಿ ಯಶಸ್ಸು ಸಿಗುವುದು. ಬಹುದಿನದ ಕನಸೊಂದು ನೆರವೇರುವುದು. ಸಂಬಂಧಿಗಳು ಮತ್ತೆ ಹತ್ತಿರದವರಾಗುವರು.

**ಮಿಥುನ:** ವೈದ್ಯಕೀಯ ಖರ್ಚಿನ ಹಣವನ್ನು ಸಂಸ್ಥೆಯಿಂದ ಪಡೆದುಕೊಳ್ಳುವಂತಾಗುವುದು. ಕುಟುಂಬ ಕಲಹದಿಂದ ದೂರ ಇರಿ. ಕಾರ್ಯಕ್ಷೇತ್ರದಲ್ಲಿ ಸಹೋದ್ಯೋಗಿಗಳಿಂದ ಕಿರುಕುಳ.

**ಕರ್ಕಾಟಕ:** ಸತ್ಯನಾರಾಯಣ ಸ್ವಾಮಿಯ ಸೇವೆ ಮಾಡುವುದರಿಂದ ನಿಮ್ಮ ಜಟಿಲ ಸವಸ್ಯೆಗಳು ಕೂಡ ಸೌಹಾರ್ದಯುತವಾಗಿ ಬಗೆಹರಿಯಲಿದೆ. ದುರಾಲೋಚನೆಗಳನ್ನು ಬದಲಿಸಿಕೊಳ್ಳಿ.

**ಸಿಂಹ:** ಸಾಧು ಸಂತರ ದರ್ಶನದಿಂದ ಮನಸ್ಸಿಗೆ ಸಮಾಧಾನ. ಆಕಸ್ಮಿಕ ಧನಲಾಭದಿಂದ ಹರ್ಷ. ಆಭರಣ ವ್ಯಾಪಾರಿಗಳಿಗೆ ಹೆಚ್ಚು ವ್ಯಾಪಾರ. ಬೆಲೆ ಬಾಳುವ ವಸ್ತುಗಳು ಕಾಣೆಯಾಗಬಹುದು.

**ಕನ್ಯಾ:** ಬಂಧು-ಮಿತ್ರರ ಒಡನಾಟದಿಂದ ಸಂತೋಷ ತೋರಿಬರಲಿದೆ. ಅನಾವಶ್ಯಕ ಋಣಾತ್ಮಕ ಚಿಂತೆ ಮಾಡುವುದನ್ನು ಕಡಿಮೆ ಮಾಡಿ. ಪರೀಕ್ಷಾ ಅಧಿಕಾರಿಗಳು ನಿಮ್ಮ ಕೆಲಸ ಪರೀಕ್ಷಿಸಬಹುದು.

**ತುಲಾ:** ನಿಮಗೊಪ್ಪಿಸಿರುವ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿ ಮುಗಿಸುವಿರಿ. ಕುಟುಂಬದಲ್ಲಿ ನೂತನ ಸದಸ್ಯನ ಸೇರ್ಪಡೆ, ಮನೆ ಮಂದಿಗೆಲ್ಲ ಸಂಭ್ರಮ. ಸಾಮಾಜಿಕ ಚಟುವಟಿಕೆಯಲ್ಲಿ ಅಡ್ಡಿ.

**ವೃಶ್ಚಿಕ:** ದಿನದ ಪ್ರಾರಂಭದಲ್ಲಿ ಸೂರ್ಯ ನಾರಾಯಣನಿಗೆ ನಮಸ್ಕರಿಸುವುದರಿಂದ ಮನಸ್ಸಿನಲ್ಲಿ ಯಾವುದೇ ಗೊಂದಲ ಇರುವುದಿಲ್ಲ. ನಿಮ್ಮ ಸಾಮರ್ಥ್ಯಕ್ಕೆ ಅನುಗುಣವಾದ ಕೆಲಸಗಳು ದೊರೆಯಲಿದೆ.

**ಧನು:** ಗೃಹ ನಿರ್ಮಾಣದ ಆರಂಭಕ್ಕೆ ದಿನ ನಿಶ್ಚಯಿಸಲಿರುವಿರಿ. ಪಟ್ಟು ಬಿಡದೆ ಕೆಲಸಗಳನ್ನು ಮಾಡಿಸಿಕೊಳ್ಳುವಿರಿ. ವೃತ್ತಿ ತರಬೇತಿ ಸಂಸ್ಥೆಗಳಲ್ಲಿ ಉದ್ಯೋಗ ಸಿಗಲಿದೆ.

**ಮಕರ:** ಪ್ರಸ್ತುತ ರಾಜಕೀಯ ವಿದ್ಯಮಾನಗಳಿಂದ ಸಾಮಾಜಿಕ ಲಾಭವಾಗಲಿದೆ. ಅಧಿಕಾರ ಪಡೆದುಕೊಳ್ಳಲು ಲಾಬಿ ನಡೆಸ ಬೇಕಾಗಬಹುದು. ಕುಟುಂಬದ ಹಿರಿಯರ ಆರೋಗ್ಯ ಹದಗೆಡುವುದು.

**ಕುಂಭ:** ಮನೆಯವರೊಡನೆ ತಾಳ್ಮೆಯಿಂದ ನಡೆದುಕೊಳ್ಳಿ. ನಿಮ್ಮ ಬದುಕಿಗೆ ತಿರುವು ನೀಡುವ ಅವಕಾಶಗಳು ಬರಲಿವೆ. ಬಂದಂತಹ ಅವಕಾಶವನ್ನು ವಿವೇಚನೆಯಿಂದ ಉಪಯೋಗಿಸಿ ಕೊಳ್ಳಿ.


**ಮೀನ:** ಹೊಸ ಕೆಲಸಕ್ಕೆ ಕೈ ಹಾಕಲಿಚ್ಛಿಸಿರುವ ನಿಮ್ಮ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸಲು ಬೇಕಾಗುವ ಎಲ್ಲಾ ಕಾರ್ಯಗಳನ್ನು ಪ್ರಾರಂಭಿಸಿ. ಇನ್ನೊಬ್ಬರಿಗೆ ಮೋಸ ಮಾಡುವ ಮನಸ್ಥಿತಿ ದೂರಮಾಡಿಕೊಳ್ಳಿರಿ.

## ಪದಬಂಧ 4994

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಆ ಗ್ರಹಣ ಬಿಟ್ಟಾಗ ಮೂಸಿ ನೋಡುವಿಕೆ! (3)
2.ವರ ನಡುವಿದ್ದಾಗ ಮುಸುಕು ಹಾಕುವುದು (4)
4.ಸಾಕ್ಷರನ ಎದುರಿಗೆ ಮೂರ್ತೀಭವಿಸುವುದು! (4)
6.ಅವನ ಸಂಗಡವಿದ್ದಾಗ ನಡೆದ ಘಟನೆ (3)
7.ನೆನಪಲ್ಲೇ ಇರುವ ಕಾರಣ! (2)
9.ಕನ್ನ ಹಾಕಿ ದೋಚಿದ ಚಿನ್ನ (3)
11.ಸೂರ್ಯ ಇಲ್ಲಿ ಮೂಡಿದ್ದಾನೆ (2)
13.ಕಾವಲಿದ್ದರೂ ಎರಡಾಗಿ ಸೀಳಿದುದು! (3)
14.ಬೊಕ್ಕ ತಲೆಯವನು ಮಾಡಿರುವ ಮೋಸಗಾರಿಕೆ! (4)
16.ಮನದಲ್ಲಿರುವ ವಂಶ! (4)
17.ಮಲಗುವಿಕೆಗೊಂದು ಪರ್ಯಾಯ ಪದ (3)

**ಮೇಲಿಂದ ಕೆಳಕ್ಕೆ**
1.ಆತ್ಮ ಸಾಕ್ಷಾತ್ಕಾರಕ್ಕಾಗಿ ಮಾಡುವ ಪ್ರಯತ್ನ (5)
2.ಅಮವಾಸೆಯೆಂದು ಮೂಡಿದ ಬಯಕೆ! (2)
3.ನೆತ್ತರು ಪ್ರವಹಿಸುವುದು (5)
5.ಈತ ಕಾಪಾಡುವವನು (3)
8.ಈ ಪರಿ ಆಗಿರುವ ಬದಲಾವಣೆ (5)
10.ಕೈಯಲ್ಲಿ ಹಿಡಿದಿರುವ ಚಿಪ್ಪು (3)
12.ಲೋಹದ ಹಕ್ಕಿಯಲ್ಲಿನ ಪಯಣ (5)
15.ಮಾವನ ಮರ್ಯಾದೆಯಿದು! (2)



### 4993ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಅಜಗಜಾಂತರ 4.ತಿರುಪತಿ
5.ಗಹನ 7.ಗಣಿತ
10.ನೆಗಡಿ 12.ರಿಪೇರಿ
13.ಸರಸ್ವತಿ
15.ಪ್ರವಾಸಿಮಂದಿರ

**ಮೇಲಿಂದ ಕೆಳಕ್ಕೆ:**
1.ಅಜಗರ 2.ರತಿ
3.ಅತಿರೇಕ 6.ನಡುಮನೆ
7.ಗರಡಿ 8.ತರಕಾರಿ
9.ತಡಸಲು 11.ಹರಿಕಾರ
14.ತಿಪ್ರ

## ಸುಡೊಕು 5380

| | | | | | | | | |
|---|---|---|---|---|---|---|---|---|
| | | | 2 | | 9 | 6 | | 1 |
| | | | | | | 2 | 7 | 4 |
| 5 | 7 | 2 | 1 | | 4 | | | 8 |
| | | 4 | | 3 | | 1 | | 2 |
| 2 | 8 | | 6 | 9 | | | 4 | |
| | | 7 | | | | | 6 | 5 |
| | 5 | | | | | | | 7 |
| | | 6 | 8 | | 2 | | | |
| 4 | 2 | | | 5 | | 8 | | |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5379 ಸುಡೊಕು

| | | | | | | | | |
|---|---|---|---|---|---|---|---|---|
| 3 | 5 | 1 | 7 | 4 | 2 | 9 | 8 | 6 |
| 6 | 9 | 2 | 1 | 5 | 8 | 3 | 7 | 4 |
| 4 | 7 | 8 | 3 | 6 | 9 | 2 | 1 | 5 |
| 1 | 6 | 4 | 8 | 9 | 5 | 7 | 2 | 3 |
| 9 | 2 | 5 | 4 | 3 | 7 | 8 | 6 | 1 |
| 8 | 3 | 7 | 6 | 2 | 1 | 4 | 5 | 9 |
| 2 | 1 | 3 | 9 | 7 | 6 | 5 | 4 | 8 |
| 5 | 4 | 6 | 2 | 8 | 3 | 1 | 9 | 7 |
| 7 | 8 | 9 | 5 | 1 | 4 | 6 | 3 | 2 |



ಪ್ರಶಸ್ತಿ ವಿಜೇತ ಕರ್ನಾಟಕ ಬಾಲಕ ಮತ್ತು ಬಾಲಕಿಯರ ಥ್ರೋಬಾಲ್ ತಂಡಗಳು

# ಥ್ರೋಬಾಲ್: ಕರ್ನಾಟಕ ತಂಡಗಳಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕದ ಬಾಲಕ ಮತ್ತು ಬಾಲಕಿಯರ ತಂಡಗಳು ಆಂಧ್ರಪ್ರದೇಶದ ತೆನಾಲಿಯಲ್ಲಿ ನಡೆದ ರಾಷ್ಟ್ರೀಯ ಜೂನಿಯರ್ ಥ್ರೋಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡವು.

ಭಾನುವಾರ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಕರ್ನಾಟಕ ತಂಡ 25-13, 25-19 ರಲ್ಲಿ ಆಂಧ್ರ ಪ್ರದೇಶ ತಂಡವನ್ನು ಮಣಿಸಿತು. ಸೆಮಿಫೈನಲ್‌ನಲ್ಲಿ 25-13,25-21 ರಲ್ಲಿ ತಮಿಳುನಾಡು ತಂಡವನ್ನು ಪರಾಭವಗೊಳಿಸಿತ್ತು. ರೌಂಡ್ ರಾಬಿನ್ ಲೀಗ್ ಪಂದ್ಯಗಳಲ್ಲಿ ಕೇರಳ, ಒಡಿಶಾ ಮತ್ತು ಗುಜರಾತ್ ತಂಡಗಳನ್ನು ನೇರ ಸೆಟ್‌ಗಳಿಂದ ಸೋಲಿಸಿತ್ತು.

ಬಾಲಕಿಯರ ತಂಡ ಫೈನಲ್‌ನಲ್ಲಿ 25-15, 25-19 ರಲ್ಲಿ ತಮಿಳುನಾಡು ವಿರುದ್ಧ ಜಯ ಸಾಧಿಸಿತು. ಸೆಮಿಫೈನಲ್‌ನಲ್ಲಿ 25-22, 25-20 ರಲ್ಲಿ ಕೇರಳವನ್ನು ಸೋಲಿಸಿತ್ತು. ಇದೇ 17ರಿಂದ 19ರವರೆಗೆ ಟೂರ್ನಿ ನಡೆದಿತ್ತು.

# ಚೆಸ್: ಶ್ರೀಯಾ, ವಿವಾನ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

**ಕಲಬುರಗಿ:** ಬೆಂಗಳೂರಿನ ವಿವಾನ್ ಸಚದೇವ್ ಹಾಗೂ ಧಾರವಾಡದ ಶ್ರೀಯಾ ಆರ್. ರೇವಣಕರ ಅವರು ಕ್ರಮವಾಗಿ ಕರ್ನಾಟಕ ರಾಜ್ಯ ಮಟ್ಟದ 19 ವರ್ಷದೊಳಗಿನ ಓಪನ್ ಫಿಡೆ ರೇಟಿಂಗ್ ಚೆಸ್ ಚಾಂಪಿಯನ್‌ಷಿಪ್ ಹಾಗೂ 19 ವರ್ಷದೊಳಗಿನ ಬಾಲಕಿಯರ ಚೆಸ್ ಚಾಂಪಿಯನ್‌ಷಿಪ್ ಟೂರ್ನಿಯಲ್ಲಿ ಚಾಂಪಿಯನ್‌ಗಳಾಗಿ ಹೊರಹೊಮ್ಮಿದ್ದಾರೆ.

ಭಾನುವಾರ ಇಲ್ಲಿ ಮುಕ್ತಾಯಗೊಂಡ ಚೆಸ್ ಟೂರ್ನಿಯ ಬಾಲಕರ ವಿಭಾಗದ ಅಂತಿಮ ಹಾಗೂ 8ನೇ ಸುತ್ತಿನಲ್ಲಿ ವಿವಾನ್ ಸಚದೇವ್ ಅವರು ಕುಮಾರ ತೇಜಾ ಎಂ. ಅವರನ್ನು ಸೋಲಿಸುವ ಮೂಲಕ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ವಿವಾನ್ ಒಟ್ಟು 8 ಸುತ್ತುಗಳಲ್ಲಿ 7 ಅಂಕಗಳನ್ನು ಗಳಿಸಿದರು. ಚರಿತ್ ಭಟ್, ನಿಶಾಂತ್ ಡಿಸೋಜಾ, ಲೀಲಾಜೈ ಕೃಷ್ಣ ಎನ್., ತೇಜಸ್ ಕೆ. ಅವರು ತಲಾ 6.5 ಅಂಕಗಳನ್ನು ಗಳಿಸುವ ಮೂಲಕ 2ನೇ ಸ್ಥಾನವನ್ನು ಹಂಚಿಕೊಂಡರು.

ಬಾಲಕಿಯರ ವಿಭಾಗದ ಅಂತಿಮ ಸುತ್ತಿನಲ್ಲಿ ಶ್ರೀಯಾ ರೇವಣಕರ್ ಅವರು ಪ್ರಸಿದ್ಧಿ ಭಟ್ ಅವರನ್ನು ಪರಾಭವಗೊಳಿಸುವ ಮೂಲಕ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಶ್ರೀಯಾ 8 ಸುತ್ತಿನ ಸ್ಪರ್ಧೆಯಲ್ಲಿ 7 ಅಂಕಗಳನ್ನು ಗಳಿಸಿದರು. ಉಳಿದಂತೆ ಪ್ರಸಿದ್ಧಿ ಭಟ್, ದಿಶಾ ಯು.ಎ. ಹಾಗೂ ಮಾನಸಾ ಅವರು 6 ಅಂಕಗಳೊಂದಿಗೆ 2ನೇ ಸ್ಥಾನಗಳಿಸಿದರು.

ಇಬ್ಬರು ಚಾಂಪಿಯನ್‌ಗಳಿಗೆ ತಲಾ ₹ 4 ಸಾವಿರ ನಗದು ಹಾಗೂ ಟ್ರೋಫಿ ನೀಡಲಾಯಿತು.



ಬಾಲಕರ ವಿಭಾಗದ ಪ್ರಶಸ್ತಿ ವಿಜೇತರು: ವಿವಾನ್ ಸಚದೇವ್, ತೇಜಸ್ ಕೆ., ಚರಿತ್ ಭಟ್, ನಿಶಾಂತ್ ಡಿಸೋಜಾ

## ಟಿಕೆಟ್: ಶೇ 50ರಷ್ಟು ಹಣ ಮರುಪಾವತಿ

**ಬೆಂಗಳೂರು:** ಭಾನುವಾರ ಟಿ20 ಪಂದ್ಯದ ವೀಕ್ಷಣೆಗಾಗಿ ಪ್ರೇಕ್ಷಕರು ಖರೀದಿಸಿರುವ ಟಿಕೆಟ್‌ಗಳ ಮೊತ್ತದ ಶೇ 50ರಷ್ಟು ಹಣವನ್ನು ಮರುಪಾವತಿ ಮಾಡಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ನಿರ್ಧರಿಸಿದೆ.

'ಸಾಮಾನ್ಯವಾಗಿ ಮಳೆಯಿಂದಾಗಿ ಪಂದ್ಯಗಳು ಒಂದೂ ಎಸೆತವಿಲ್ಲದೇ ರದ್ದಾದಾಗ ಮಾತ್ರ ಪ್ರೇಕ್ಷಕರಿಗೆ ಹಣ ಮರಳಿಕೊಡುವ ನಿಯಮವಿದೆ. ಆದರೆ ಬಹಳ ಅವಧಿಯ ನಂತರ ಇಲ್ಲಿ ಟಿ20 ಅಂತರರಾಷ್ಟ್ರೀಯ ಪಂದ್ಯ ಆಯೋಜನೆಯಾಗಿತ್ತು. ನಾಡಿನ ಕ್ರಿಕೆಟ್ ಪ್ರೇಮಿಗಳೂ ಅಪಾರ ಉತ್ಸಾಹದಿಂದ ಟಿಕೆಟ್‌ಗಳನ್ನು ಖರೀದಿಸಿದ್ದರು. ಆದರೆ ಮಳೆ ಬಂದ ಕಾರಣ ಪಂದ್ಯ ನಡೆಯಲಿಲ್ಲ. ಆದರೆ ಇಲ್ಲಿ 3 ಓವರ್‌ಗಳಿಗೂ ಹೆಚ್ಚಿನ ಆಟ ನಡೆದಿತ್ತು. ನಿಯಮದ ಪ್ರಕಾರ ಹಣ ಮರಳಿಸಲು ಅವಕಾಶವಿಲ್ಲ. ಆದರೆ ಸಂಸ್ಥೆಯು ವಿಶೇಷ ನಿರ್ಣಯ ಕೈಗೊಂಡು ಶೇ 50ರಷ್ಟು ಹಣ ಮರಳಿಸಲಿದೆ' ಎಂದು ವಕ್ತಾರ ವಿನಯ್ ಮೃತ್ಯುಂಜಯ ಮತ್ತು ಕಾರ್ಯದರ್ಶಿ ಸಂತೋಷ್ ಮೆನನ್ ತಿಳಿಸಿದರು.

ಇದು ಎಲ್ಲ ಮೊತ್ತದ ಟಿಕೆಟ್‌ಗಳಿಗೂ ಅನ್ವಯವಾಗಲಿದೆ. ಮರುಪಾವತಿಯ ವಿವರಗಳನ್ನು ಶೀಘ್ರದಲ್ಲಿ ಪ್ರಕಟಿಸುತ್ತೇವೆ ಎಂದೂ ಅವರು ತಿಳಿಸಿದರು.


## 'ಎಂಟು ತಿಂಗಳು, ಆರು ನಾಯಕರು'

**ಬೆಂಗಳೂರು:** ಕಳೆದ ಎಂಟು ತಿಂಗಳುಗಳ ಅವಧಿಯಲ್ಲಿ ಭಾರತ ಕ್ರಿಕೆಟ್ ತಂಡವನ್ನು 6 ನಾಯಕರು ಮುನ್ನಡೆಸಿದ್ದಾರೆ. ಇದೊಂದು ರೀತಿ ಒಳ್ಳೆಯ ಬೆಳವಣಿಗೆ' ಎಂದು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹೇಳಿದರು.

'ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ, ಶಿಖರ್ ಧವನ್, ಕೆ.ಎಲ್. ರಾಹುಲ್, ರಿಷಭ್ ಪಂತ್, ಹಾರ್ದಿಕ್ ಪಾಂಡ್ಯ (ಮುಂಬರಲಿರುವ ಐರ್ಲೆಂಡ್ ಪ್ರವಾಸದಲ್ಲಿ ನಾಯಕತ್ವ) ಬೇರೆ ಬೇರೆ ಮಾದರಿಗಳಲ್ಲಿ ಮತ್ತು ವಿಭಿನ್ನ ಪರಿಸ್ಥಿತಿಯಲ್ಲಿ ನಾಯಕರಾಗಿ ಕಾರ್ಯನಿರ್ವಹಿಸಿದ್ದಾರೆ. ಬಯೋಬಬಲ್ ವ್ಯವಸ್ಥೆಯಲ್ಲಿ ಒತ್ತಡ ನಿರ್ವಹಣೆಗೆ ವಿರಾಮ ಪಡೆಯಲು ಇದರಿಂದ ಅನುಭವಿ ಆಟಗಾರರಿಗೆ ಸಾಧ್ಯವಾಗಿದೆ' ಎಂದು ಸ್ಟಾರ್ ಸ್ಪೋರ್ಟ್ಸ್ ಸಂದರ್ಶನದಲ್ಲಿ ರಾಹುಲ್ ತಿಳಿಸಿದರು.



ದಕ್ಷಿಣ ಆಫ್ರಿಕಾ ತಂಡದ ಹಂಗಾಮಿ ನಾಯಕ ಕೇಶವ್ ಮಹಾರಾಜ್ ಮತ್ತು ಭಾರತ ತಂಡದ ನಾಯಕ ರಿಷಭ್ ಪಂತ್ ಟ್ರೋಫಿ ಹಂಚಿಕೊಂಡರು



ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯದ ವೇಳೆ ಮಳೆ ಬಂದಾಗ ಕಂಡ ದೃಶ್ಯ –ಪ್ರಜಾವಾಣಿ ಚಿತ್ರಗಳು/ಕೃಷ್ಣಕುಮಾರ್ ಪಿ.ಎಸ್

### ಭಾರತ–ದಕ್ಷಿಣ ಆಫ್ರಿಕಾ ಟಿ20 ಕ್ರಿಕೆಟ್ ಸರಣಿ 2–2ರಿಂದ ಸಮ

# ಚಿನ್ನಸ್ವಾಮಿ ಅಂಗಣದಲ್ಲಿ ಮಳೆಯ ಚಿನ್ನಾಟ

• ಗಿರೀಶ ದೊಡ್ಡಮನಿ

**ಬೆಂಗಳೂರು:** ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ಸೇರಿದ್ದ ಕ್ರಿಕೆಟ್‌ಪ್ರೇಮಿಗಳು ಮುಂಗಾರು ಮಳೆಯ ಚಿನ್ನಾಟ ವೀಕ್ಷಿಸಿದರು.

ಇದರಿಂದಾಗಿ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಟಿ20 ಪಂದ್ಯ ವೀಕ್ಷಿಸುವ ಅವರ ಆಸೆ ಮಾತ್ರ ಈಡೇರಲಿಲ್ಲ. ಅಲ್ಲದೇ ಸರಣಿ ಗೆಲುವಿನ ಸಂಭ್ರಮ ಆಚರಿಸುವ ಅವಕಾಶ ಉಭಯ ತಂಡಗಳಿಗೂ ಸಿಗಲಿಲ್ಲ!

ಹೌದು; ಐದು ಪಂದ್ಯಗಳ ಸರಣಿಯು 2–2ರಿಂದ ಸಮಬಲಗೊಂಡಿತು. ಭಾರತದ ಆತಿಥ್ಯದಲ್ಲಿ ಕಳೆದ ಏಳು ವರ್ಷಗಳಲ್ಲಿ ನಡೆದ ಮೂರು ಸರಣಿಗಳಲ್ಲಿಯೂ ದಕ್ಷಿಣ ಆಫ್ರಿಕಾ ಸೋತಿಲ್ಲ. 2015ರಲ್ಲಿ ದಕ್ಷಿಣ ಆಫ್ರಿಕಾ 2–0ಯಿಂದ ಗೆದ್ದಿತ್ತು. 2019ರ ಸರಣಿಯು 1–1ರಿಂದ ಸಮಬಲಗೊಂಡಿತ್ತು. ಇದೀಗ ಮತ್ತೊಮ್ಮೆ ಸಮಬಲವಾಯಿತು.

ಮೂರು ವರ್ಷಗಳ ನಂತರ ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಟಿ20 ಪಂದ್ಯ ನಡೆಯಲು ವೇದಿಕೆ ಸಿದ್ಧವಾಗಿತ್ತು. ಪ್ರೇಕ್ಷಕರ ಗ್ಯಾಲರಿಗಳೂ ಸಂಪೂರ್ಣವಾಗಿ ಭರ್ತಿಯಾಗಿದ್ದವು. ಕಳೆದ ಒಂದು ವಾರದಿಂದ ಕಷ್ಟಪಟ್ಟು ಟಿಕೆಟ್‌ಗಳನ್ನು ಖರೀದಿಸಿಕೊಂಡು ಬಂದಿದ್ದ ಕ್ರಿಕೆಟ್‌ಪ್ರೇಮಿಗಳಿಗೆ ನೋಡಲು ಸಿಕ್ಕಿದ್ದು 21 ಎಸೆತಗಳ ಆಟ ಮಾತ್ರ. ಪಂದ್ಯ ರದ್ದಾದಾಗ ಭಾರತ ಎರಡು ವಿಕೆಟ್‌ಗೆ 28 ರನ್ ಗಳಿಸಿತ್ತು.

ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತ್ತು. ಇನ್ನೇನು ಭಾರತದ ಆರಂಭಿಕ ಜೋಡಿ ಕಣಕ್ಕಿಳಿಯುವ ಕೆಲವೇ ಕ್ಷಣಗಳ ಮುನ್ನ ಧಾರಾಕಾರ ಮಳೆ ಸುರಿಯಲಾರಂಭಿಸಿತು. ಆದರೆ, 20 ನಿಮಿಷಗಳಲ್ಲಿ ಸ್ಥಗಿತವಾಯಿತು.

ಇದರಿಂದಾಗಿ 7.50ಕ್ಕೆ ಮತ್ತೆ ಪಂದ್ಯ ಆರಂಭಿಸಲಾಯಿತು.

ಮೊದಲ ಓವರ್‌ನಲ್ಲಿಯೇ ಹಂಗಾಮಿ ನಾಯಕ ಕೇಶವ್ ಮಹಾರಾಜ್ ಅವರ ಎರಡು ಎಸೆತಗಳನ್ನು ಇಶಾನ್ ಕಿಶನ್ ಸಿಕ್ಸರ್‌ಗೆ ಎತ್ತಿದರು. ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂಚಲನ ಮೂಡಿತು.

ಆದರೆ, ನಂತರದ ಓವರ್‌ನಲ್ಲಿ ಲುಂಗಿ ಗಿಡಿ ಎಸೆತದಲ್ಲಿ ಇಶಾನ್ ಬೌಲ್ಡ್ ಆದರು. ನಾಲ್ಕನೇ ಓವರ್‌ನ ಎರಡನೇ ಎಸೆತದಲ್ಲಿ ಋತುರಾಜ್ ಗಾಯಕವಾಡ್ ವಿಕೆಟ್ ಅನ್ನೂ ಲುಂಗಿ ಗಿಡಿ ಕಬಳಿಸಿದರು. ಮೂರನೇ ಎಸೆತವಾಗುವಾಗಲೇ ಸಣ್ಣಗೆ ಮಳೆ ಶುರುವಾಯಿತು.

8.10ರಿಂದ ಶುರುವಾದ ಮಳೆ 9.30ಯವರೆಗೂ ಮುಂದುವರಿಯಿತು. 9.35ಕ್ಕೆ ಪಂದ್ಯ ಸ್ಥಗಿತಗೊಳಿಸಲು ಮ್ಯಾಚ್ ರೆಫರಿ ಜಾವಗಲ್ ಶ್ರೀನಾಥ್, ಅಂಪೈರ್‌ಗಳಾದ ವೀರೇಂದ್ರ ಶರ್ಮಾ ಮತ್ತು ಅನಂತ್ ಪದ್ಮನಾಭನ್ ಅವರು ತೀರ್ಮಾನಿಸಿದರು.



ಪಂದ್ಯ ರದ್ದಾದ ಹಿನ್ನೆಲೆಯಲ್ಲಿ ನಿರಾಸೆಯಲ್ಲಿ ಪ್ರೇಕ್ಷಕರು

**ಪ್ರಮುಖ ಅಂಶಗಳು**

- ಪಂದ್ಯ ವೀಕ್ಷಿಸಲು ಆಗಮಿಸಿದ್ದ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಸಿದ್ಧರಾಮಯ್ಯ ಮತ್ತು ಸಚಿವ ಅಶ್ವತ್ಥನಾರಾಯಣ
- ಸಂಜೆ ನಾಲ್ಕು ಗಂಟೆಯಿಂದಲೇ ಕ್ರೀಡಾಂಗಣ ಪ್ರವೇಶಕ್ಕೆ ಸಾಲುಗಟ್ಟಿದ್ದ ಜನ
- ಮೂರು ವರ್ಷಗಳ ನಂತರ ಬೆಂಗಳೂರಿನಲ್ಲಿ ಆಯೋಜನೆಗೊಂಡಿದ್ದ ಅಂತರರಾಷ್ಟ್ರೀಯ ಟಿ20 ಪಂದ್ಯ
- ಮಧ್ಯಮವೇಗಿ ಭುವನೇಶ್ವರ್ ಕುಮಾರ್‌ಗೆ ಸರಣಿಶ್ರೇಷ್ಠ ಗೌರವ
- ಪಂದ್ಯದಲ್ಲಿ ನಡೆದಿದ್ದು ಕೇವಲ 16 ನಿಮಿಷಗಳ ಆಟ

# ಹಾಕಿ: ಭಾರತ ತಂಡಗಳಿಗೆ ನಿರಾಸೆ

**ರಾಟರ್‌ಡ್ಯಾಮ್ (ಪಿಟಿಐ):** ಭಾರತ ಪುರುಷ ಮತ್ತು ಮಹಿಳಾ ತಂಡಗಳು ಎಫ್‌ಐಎಚ್ ಪ್ರೊ ಹಾಕಿ ಲೀಗ್ ಟೂರ್ನಿಯಲ್ಲಿ ಸೋಲು ಅನುಭವಿಸಿದವು.

ಪುರುಷರ ತಂಡದವರು ನೆದರ್ಲೆಂಡ್ಸ್ ವಿರುದ್ಧದ ಎರಡನೇ ಲೆಗ್ ಪಂದ್ಯದಲ್ಲಿ ಭಾನುವಾರ 1–2 ಗೋಲುಗಳಿಂದ ಪರಾಭವಗೊಂಡರು. ಇದ ರಿಂದ ಪ್ರಶಸ್ತಿ ಗೆಲ್ಲುವ ಅವಕಾಶಕಳೆದುಕೊಂಡರು. ಎಲ್ಲ 16 ಪಂದ್ಯಗಳನ್ನು ಆಡಿದ ಭಾರತ 30 ಪಾಯಿಂಟ್‌ಗಳೊಂದಿಗೆ 3ನೇ ಸ್ಥಾನ ಗಳಿಸಿತು. ನೆದರ್ಲೆಂಡ್ಸ್ 35 ಪಾಯಿಂಟ್ಸ್ ಹೊಂದಿದ್ದು, ಇನ್ನೂ ಎರಡು ಪಂದ್ಯಗಳು ಬಾಕಿ ಯಿರುವಂತೆಯೇ ಪ್ರಶಸ್ತಿ ಖಚಿತಪಡಿಸಿಕೊಂಡಿತು.ಪಂದ್ಯ ಆರಂಭವಾದ 30 ಸೆಕೆಂಡುಗಳಲ್ಲೇ ಅಭಿಷೇಕ್ ಗೋಲು ಗಳಿಸಿ ಭಾರತಕ್ಕೆ ಮುನ್ನಡೆ ತಂದಿತ್ತರು. ಆದರೆ ಮರುಹೋರಾಟ ನಡೆಸಿದ ನೆದರ್ಲೆಂಡ್ಸ್ ತಂಡ ಜಿಪ್ ಜಾನ್ಸೆನ್ (6) ಮತ್ತು ಜೊರಿಟ್ ಕ್ರೂನ್ (44) ಅವರ ಗೋಲುಗಳ ನೆರವಿನಿಂದ ಜಯ ಸಾಧಿಸಿತು.

**ಮಹಿಳೆಯರಿಗೆ ಸೋಲು:** ಒಂದು ಗೋಲಿನ ಮುನ್ನಡೆ ಸಾಧಿಸಿದ್ದರೂ ಪಂದ್ಯದ ಮೇಲಿನ ಹಿಡಿತ ಕೈಬಿಟ್ಟ ಭಾರತ ಮಹಿಳಾ ತಂಡದವರು ಅರ್ಜೆಂಟಿನಾ ಎದುರು 2–3ರಿಂದ ಸೋತರು

# ಬ್ಯಾಸ್ಕೆಟ್‌ಬಾಲ್: ಭಾರತಕ್ಕೆ 5ನೇ ಸ್ಥಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭಾರತ ಬಾಲಕರ ತಂಡದವರು ದೋಹಾದಲ್ಲಿ ನಡೆದ ಫಿಬಾ 16 ವರ್ಷದೊಳಗಿನವರ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಐದನೇ ಸ್ಥಾನ ಪಡೆದುಕೊಂಡರು.

ಐದು ಮತ್ತು ಆರನೇ ಸ್ಥಾನವನ್ನು ನಿರ್ಧರಿಸಲು ಭಾನುವಾರ ನಡೆದ ಪಂದ್ಯದಲ್ಲಿ ಭಾರತ 90–80 ರಲ್ಲಿ ಕೊರಿಯಾ ತಂಡವನ್ನು ಪರಾಭವಗೊಳಿಸಿತು.

ಮೊದಲ ಕ್ವಾರ್ಟರ್‌ನಿಂದಲೇ ಮೇಲುಗೈ ಸಾಧಿಸಿದ ಭಾರತ ಅದನ್ನು ಕೊನೆಯವರೆಗೂ ಕಾಪಾಡಿಕೊಂಡಿತು. ವಿರಾಮದ ವೇಳೆಗೆ 71–53 ರಲ್ಲಿ ಮುನ್ನಡೆ ಪಡೆದಿತ್ತು. ಕೊನೆಯ ಅವಧಿಯಲ್ಲಿ ಕೊರಿಯಾ ಮರುಹೋರಾಟ ನಡೆಸಿದರೂ, ಭಾರತ ಎಚ್ಚರಿಕೆಯ ಆಟವಾಡಿ 10 ಪಾಯಿಂಟ್‌ಗಳಿಂದ ಪಂದ್ಯವನ್ನು ಜಯಿಸಿತು. 29 ಪಾಯಿಂಟ್ಸ್ ಗಳಿಸಿದ ಲೋಕೇಂದ್ರ ಸಿಂಗ್ 'ಟಾಪ್ ಸ್ಕೋರರ್' ಎನಿಸಿಕೊಂಡರು. ಜೈದೀಪ್ ರಾಥೋಡ್ 20, ಹರ್ಷ ದಾಗರ್ 19 ಹಾಗೂ ಕುಶಾಲ್ ಸಿಂಗ್ 18 ಪಾಯಿಂಟ್ ಗಳಿಸಿದರು.

## ಟೇಬಲ್ ಟೆನಿಸ್: ಯಶಸ್ವಿನಿಗೆ ಕಂಚು



ಯಶಸ್ವಿನಿ

**ಬೆಂಗಳೂರು:** ಕರ್ನಾಟಕದ ಯಶಸ್ವಿನಿ ಘೋರ್ಪಡೆ ಕೇರಳದ ಅಲೆಪ್ಪಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಯೂತ್ ಮತ್ತು ಜೂನಿಯರ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

19 ವರ್ಷದೊಳಗಿನವರ ಬಾಲಕಿಯರ ಸೆಮಿಫೈನಲ್ ಹಣಾಹಣಿಯಲ್ಲಿ ಯಶಸ್ವಿನಿ 4-11, 7-11, 9-11, 10-12ರಿಂದ ತಮಿಳುನಾಡಿನ ಮಣಿ ನಿತ್ಯಾಶ್ರೀ ಎದುರು ಸೋತರು.

## ಸೈಕ್ಲಿಂಗ್: ಭಾರತಕ್ಕೆ ಮತ್ತೆ ಎಂಟು ಪದಕ

**ನವದೆಹಲಿ (ಪಿಟಿಐ):** ಏಷ್ಯನ್ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಉತ್ತಮ ಪ್ರದರ್ಶನ ಮುಂದುವರಿಸಿದ ಭಾರತ ತಂಡ, ಮತ್ತೆ ಎಂಟು ಪದಕಗಳನ್ನು ಗೆದ್ದುಕೊಂಡಿತು.

41ನೇ ಸೀನಿಯರ್, 28ನೇ ಜೂನಿಯರ್ ಏಷ್ಯನ್ ಟ್ರ್ಯಾಕ್ ಮತ್ತು 10ನೇ ಪ್ಯಾರಾ ಟ್ರ್ಯಾಕ್ ಸೈಕ್ಲಿಂಗ್‌ನಲ್ಲಿ ಭಾರತ ಎರಡು ದಿನಗಳಲ್ಲಿ ಒಟ್ಟು 18 ಪದಕಗಳನ್ನು ಜಯಿಸಿದೆ.

ಭಾರತದ ಸ್ಪರ್ಧಿಗಳು ಭಾನುವಾರ 1 ಚಿನ್ನ, 3 ಬೆಳ್ಳಿ ಹಾಗೂ 4 ಕಂಚಿನ ಪದಕಗಳನ್ನು ಪಡೆದುಕೊಂಡರು. ಒಟ್ಟು 12 ವಿಭಾಗಗಳಲ್ಲಿ ಫೈನಲ್ ನಡೆದವು.

ಜೂನಿಯರ್ ವಿಭಾಗದಲ್ಲಿ ಪೂಜಾ ಡನೋಲೆ ಅವರು 2:31.277 ಸಮಯದೊಂದಿಗೆ ಮೂರನೇ ಸ್ಥಾನ ಪಡೆದರಲ್ಲದೆ, ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು (2:37.410) ಅವರು ಉತ್ತಮಪಡಿಸಿಕೊಂಡರು. ಟ್ರ್ಯಾಕ್ ಸೈಕ್ಲಿಸ್ಟ್ ಮಯೂರಿ 500 ಮೀ. ಟೈಮ್ ಟ್ರಯಲ್‌ನಲ್ಲಿ ಕಂಚು ಜಯಿಸಿದರು.

## ಬ್ಯಾಸ್ಕೆಟ್‌ಬಾಲ್: ಸಿನ್ಸಿನಾಟಿಕ್ಸ್, ನ್ಯಾಷನಲ್ಸ್ ಮೈಸೂರು ಜಯಭೇರಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಿನ್ಸಿನಾಟಿಕ್ಸ್ ಮತ್ತು ನ್ಯಾಷನಲ್ಸ್ ಮೈಸೂರು ತಂಡಗಳು ಸಿ. ರಂಗರಾಜನ್ ಸ್ಮಾರಕ ರಾಜ್ಯ ಸಿ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪಂದ್ಯಗಳಲ್ಲಿ ಜಯ ಗಳಿಸಿದವು.

ಭಾನುವಾರ ಇಲ್ಲಿ ನಡೆದ ಹಣಾಹಣಿಯಲ್ಲಿ ಆಫಾಶ್ ಗಳಿಸಿದ 22 ಪಾಯಿಂಟ್ಸ್ ನೆರವಿನಿಂದ ಸಿನ್ಸಿನಾಟಿ 68–45ರಿಂದ ಸ್ಪಾರ್ಟನ್ಸ್ ನಂಜನಗೂಡು ಎದುರು ಗೆದ್ದಿತು. ಸುಮನ್ ದಾಖಲಿಸಿದ 24 ಪಾಯಿಂಟ್ಸ್ ಬಲದಿಂದ ನ್ಯಾಷನಲ್ಸ್ ಮೈಸೂರು 56–35ರಿಂದ ಯಂಗ್ ಬುಲ್ಸ್ ತಂಡವನ್ನು ಮಣಿಸಿತು.

ಇನ್ನುಳಿದ ಪಂದ್ಯಗಳಲ್ಲಿ ಅಪ್ಪಯ್ಯ ಬಿ.ಸಿ. 54–41ರಿಂದ ಒಮೆಗಾ ಬಿ.ಸಿ. ಹಾಸನ ಎದುರು, ಮಿರಾಕಲ್ ಬಿ.ಸಿ. 56–48ರಿಂದ ವೈಸಿಬಿಸಿ ಬಳ್ಳಾರಿ ವಿರುದ್ಧ, ವಿಜಯನಗರ ಬಿ.ಸಿ. ಮೈಸೂರು 48–29ರಿಂದ ಬಾಗಲಕೋಟೆ ಬಿ.ಸಿ. ಎದುರು ಗೆದ್ದವು.

**ಸಂಕ್ಷಿಪ್ತ ಸುದ್ದಿ**

## ವಿಶ್ವ ಈಜು: ಡ್ರೆಸೆಲ್‌ಗೆ 15ನೇ ಚಿನ್ನದ ಪದಕ



ಕೆಲೆಬ್ ಡ್ರೆಸೆಲ್

**ಬುಡಾಪೆಸ್ಟ್, ಹಂಗರಿ (ಎಎಫ್‌ಪಿ):** ಅಮೆರಿಕದ ಕೆಲೆಬ್ ಡ್ರೆಸೆಲ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 15ನೇ ಚಿನ್ನದ ಪದಕ ಗಳಿಸಿದರು.

ಭಾನುವಾರ ಇಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನ ಪುರುಷರ 50 ಮೀಟರ್ಸ್ ಬಟರ್‌ಫ್ಲೈನಲ್ಲಿ ಅವರು 22.57 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಇಟಲಿಯ ನಿಕೊಲೊ ಮಾರ್ಟಿನೆಂಗಿ 100 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ, ಅಮೆರಿಕದ ಅಲೆಕ್ಸ್ ವಾಲ್ಷ್ ಮಹಿಳೆಯರ 200 ಮೆಡ್ಲೆ ಮತ್ತು ಟೊರಿ ಹಸ್ಕೆ 100 ಮೀ. ಬಟರ್‌ಫ್ಲೈನಲ್ಲಿ ಚಿನ್ನದ ಪದಕಗಳಿಗೆ ಕೊರಳೊಡ್ಡಿದರು

## ಪುತ್ರನಿಗೆ ಹೆಸರಿಟ್ಟ ಯುವರಾಜ್

**ನವದೆಹಲಿ:** ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಯುವರಾಜ್ ಸಿಂಗ್ ಅವರು ತಮ್ಮ ಮಗನಿಗೆ 'ಓರಿಯನ್ ಕೀಚ್ ಸಿಂಗ್' ಎಂದು ಹೆಸರಿಟ್ಟಿದ್ದಾರೆ.

ಈ ವಿಷಯವನ್ನು ಟ್ವಿಟರ್‌ನಲ್ಲಿ ಬಹಿರಂಗಪಡಿಸಿರುವ ಅವರು, 'ಓರಿಯನ್ ಕೀಚ್ ಸಿಂಗ್‌ಗೆ ಈ ಜಗತ್ತಿಗೆ ಸ್ವಾಗತ' ಎಂದು ಬರೆದಿದ್ದಾರೆ. ಪತ್ನಿ ಹೆಜೆಲ್ ಕೀಚ್ ಹಾಗೂ ಮಗನ ಜತೆಗಿರುವ ಚಿತ್ರವನ್ನೂ ಅವರು ಟ್ವಿಟರ್‌ನಲ್ಲಿ ಹಾಕಿದ್ದಾರೆ.

## ತ್ರಿಪುರಾ ತಂಡದತ್ತ ಸಹಾ ಚಿತ್ತ

**ಕೋಲ್ಕತ್ತ (ಪಿಟಿಐ):** ಬಂಗಾಳ ಕ್ರಿಕೆಟ್ ಸಂಸ್ಥೆಯೊಂದಿಗೆ (ಸಿಎಬಿ) ಮುನಿಸಿಕೊಂಡಿರುವ ವಿಕೆಟ್ ಕೀಪರ್ ಬ್ಯಾಟರ್ ವೃದ್ಧಿಮಾನ್ ಸಹಾ ಅವರು ತ್ರಿಪುರಾ ರಾಜ್ಯದ ಪರ ಆಡಲು ತಯಾರಿ ನಡೆಸಿದ್ದಾರೆ.

'ತ್ರಿಪುರಾ ತಂಡದ ಆಟಗಾರನಾಗುವ ಜತೆಯಲ್ಲಿ ಸಲಹೆಗಾರನ ಜವಾಬ್ದಾರಿಯನ್ನೂ ನಿರ್ವಹಿಸಲು ಅವರು ಬಯಸಿದ್ದಾರೆ. ಈ ಸಂಬಂಧ ಈಗಾಗಲೇ ತ್ರಿಪುರಾ ಕ್ರಿಕೆಟ್ ಸಂಸ್ಥೆಯ ಅಧಿಕಾರಿಗಳ ಜತೆ ಮಾತುಕತೆ ನಡೆಸಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ತ್ರಿಪುರಾ ತಂಡ ಸೇರಬೇಕಾದರೆ ಅವರಿಗೆ ಮೊದಲು ಸಿಎಬಿ ಹಾಗೂ ಬಿಸಿಸಿಐನಿಂದ ನಿರಾಕ್ಷೇಪಣಾ ಪತ್ರ ಸಿಗಬೇಕಿದೆ. ಆ ಬಳಿಕವೇ ಮುಂದಿನ ಹೆಜ್ಜೆ ಇಡಲು ಸಾಧ್ಯ' ಎಂದಿದ್ದಾರೆ. ಈ ಬೆಳವಣಿಗೆಯ ಬಗ್ಗೆ ಸಹಾ ಅವರು ಪ್ರತಿಕ್ರಿಯೆಗೆ ಲಭ್ಯವಾಗಿಲ್ಲ.

37 ವರ್ಷದ ಸಹಾ, ಐಪಿಎಲ್ ಟೂರ್ನಿಯಲ್ಲಿ ಗುಜರಾತ್ ಟೈಟನ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.



ಫೈನಲ್‌ನಲ್ಲಿ ಗೆದ್ದ ವಿಕ್ಟರ್ ಆಕ್ಸೆಲ್ಸೆನ್ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

## ಬ್ಯಾಡ್ಮಿಂಟನ್: ವಿಕ್ಟರ್‌ಗೆ ಪ್ರಶಸ್ತಿ

**ಜಕಾರ್ತ (ಎಎಫ್‌ಪಿ):** ವಿಶ್ವದ ಅಗ್ರ ರ್‍ಯಾಂಕ್‌ನ ಆಟಗಾರ, ಡೆನ್ಮಾರ್ಕ್‌ನ ವಿಕ್ಟರ್ ಆಕ್ಸೆಲ್ಸೆನ್ ಅವರು ಇಂಡೊನೇಷ್ಯಾ ಸೂಪರ್ ಸೀರಿಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಅವರು 21-9, 21-10 ರಲ್ಲಿ ಚೀನಾದ ಜಾವೊ ಜುನ್ ಅವರನ್ನು ಮಣಿಸಿದರು. ಎರಡೂ ಗೇಮ್‌ಗಳಲ್ಲಿ ಶಿಸ್ತಿನ ಆಟವಾಡಿದ ಆಕ್ಸೆಲ್ಸೆನ್, ಕೇವಲ 38 ನಿಮಿಷಗಳಲ್ಲಿ ಜಯ ಸಾಧಿಸಿ ಇಲ್ಲಿ ತಮ್ಮ ಸತತ ಎರಡನೇ ಕಿರೀಟ ಮುಡಿಗೇರಿಸಿಕೊಂಡರು.

ಪ್ರಮುಖ ಆಟಗಾರರಿಗೆ ಆಘಾತ ನೀಡಿ ಫೈನಲ್ ಪ್ರವೇಶಿಸಿದ್ದ ಜಾವೊ ಆಕ್ರಮಣಕಾರಿ ಆಟಕ್ಕೆ ಮುಂದಾಗಿದ್ದು ಮುಳುವಾಗಿ ಪರಿಣಮಿಸಿತು. ಮೇಲಿಂದ ಮೇಲೆ ಸ್ವಯಂಕೃತ ತಪ್ಪುಗಳನ್ನು ಮಾಡಿ, ಸೋಲಿನ ಹಾದಿ ಹಿಡಿದರು.

**ಜು ಯಿಂಗ್ ಚಾಂಪಿಯನ್:** ತೈವಾನ್‌ನ ತಾಯ್ ಜು ಯಿಂಗ್, ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು. ಫೈನಲ್‌ನಲ್ಲಿ ಅವರು 21-23, 21-6, 21-5 ರಲ್ಲಿ ಚೀನಾದ ವಾಂಗ್ ಜಿ ಯಿ ವಿರುದ್ಧ ಗೆದ್ದರು.

ಪುರುಷರ ಡಬಲ್ಸ್‌ನಲ್ಲಿ ಚೀನಾದ ಚೆನ್ ಲಿಯು ಯು–ಯು ಉ ಕ್ಸುವಾನ್, ಮಹಿಳೆಯರ ಡಬಲ್ಸ್‌ನಲ್ಲಿ ಜಪಾನ್‌ನ ಮತ್ಸುಯಮ ನಮಿ– ಶಿದಾ ಚಿಹರು, ಮಿಶ್ರ ಡಬಲ್ಸ್‌ನಲ್ಲಿ ಚೀನಾದ ವಿ ಜೆಂಗ್ ಸಿ– ಕ್ವಿಯಾಂಗ್ ಹುವಾಂಗ್ ಯಾ ಜೋಡಿ ಪ್ರಶಸ್ತಿ ಗೆದ್ದುಕೊಂಡಿತು



ಕೇಂದ್ರ ಸರ್ಕಾರ ಶಿಕ್ಷಣದಲ್ಲಿ ಯೋಗ ಕಲಿಕೆ ಕಡ್ಡಾಯಗೊಳಿದೆ. ರಾಜ್ಯದ ಕೆಲವು ಶಿಕ್ಷಣ ಸಂಸ್ಥೆಗಳು ಯೋಗ ಕಲಿಕೆಯ ವಿವಿಧ ಕೋರ್ಸ್‌ಗಳನ್ನು ಆರಂಭಿಸಿವೆ. ನಾಳಿನ (ಜೂನ್ 21) ವಿಶ್ವಯೋಗ ದಿನದ ಹಿನ್ನೆಲೆಯಲ್ಲಿ ಎಲ್ಲೆಲ್ಲಿ ಯಾವ ಕೋರ್ಸ್‌ಗಳಿವೆ ತಿಳಿಯೋಣ ಬನ್ನಿ.

# ಯೋಗ ಕಲಿಕೆಗೆ ಹಲವು ಕೋರ್ಸ್‌ಗಳು

ಗುರುರಾಜ್ ಎಸ್. ದಾವಣಗೆರೆ




ಭಾರತೀಯ ಯೋಗಾಸನದ ಮಹತ್ವವನ್ನು ಗಮನಿಸಿದ ವಿಶ್ವಸಂಸ್ಥೆ, ಜೂನ್ 21 ಅನ್ನು 'ಅಂತರರಾಷ್ಟ್ರೀಯ ಯೋಗದಿನ'ವೆಂದು ಘೋಷಿಸಿತು. ಅಲ್ಲಿವರೆಗೆ ವಿಶ್ವದ ಕೆಲವೇ ರಾಷ್ಟ್ರಗಳಿಗೆ ಪರಿಯಚವಾಗಿದ್ದ ಭಾರತದ ಯೋಗಾಸನ ವಿಶ್ವದ ಇನ್ನಷ್ಟು ಭಾಗಗಳಿಗೆ ವಿಸ್ತರಿಸಿತು.

ಇಂಥ ಹಲವು ಬೆಳವಣಿಗೆಗಳ ನಂತರ ಭಾರತ ಸರ್ಕಾರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ 'ಯೋಗವನ್ನು ಕ್ರೀಡೆ ಎಂದು ಪರಿಗಣಿಸಿ ಶಿಕ್ಷಣದ ಪ್ರತಿ ಹಂತದಲ್ಲೂ ಅದನ್ನು ಕಡ್ಡಾಯಗೊಳಿಸುವ ಇರಾದೆ ಹೊಂದಿದೆ. ಯೋಗದ ಮಹತ್ವವನ್ನರಿತ ಅನೇಕ ಶಿಕ್ಷಣ ಸಂಸ್ಥೆಗಳು ತಮ್ಮ ಕಾಲೇಜುಗಳಲ್ಲಿ ಸರ್ಕಾರ – ವಿವಿಗಳಿಂದ ಅಂಗೀಕೃತವಾದ ಯೋಗದ ಹಲವು ಹಂತ-ಬಗೆಯ ಕೋರ್ಸ್‌ಗಳನ್ನು ಪ್ರಾರಂಭಿಸಿವೆ ಸರ್ಟಿಫಿಕೇಟ್ ಕೋರ್ಸ್‌ಗಳಿಂದ ಪಿ.ಎಚ್‌ಡಿ ಪದವಿವರೆಗೂ ಯೋಗ ಕಲಿಸುವ ಕಾಲೇಜುಗಳೂ ಇವೆ. ಬೆಂಗಳೂರು ಕೇಂದ್ರ ವಿವಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ತನ್ನ ಪದವಿ ಕೋರ್ಸ್‌ನಲ್ಲಿ ಯೋಗ ಕಲಿಕೆಯನ್ನು ಕಡ್ಡಾಯಗಳಿಸಿದೆ. ಇವುಗಳ ಜೊತೆಗೆ ಇನ್ನು ಯಾವ ಕೋರ್ಸ್‌ಗಳಿವೆ, ನೋಡೋಣ ಬನ್ನಿ.

## ಯೋಗ ವಿವಿಯಲ್ಲಿ..

ಬೆಂಗಳೂರು ಸಮೀಪದ ಆನೇಕಲ್‌ನಲ್ಲಿರುವ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ಡೀಮ್ಡ್ ವಿಶ್ವವಿದ್ಯಾಲಯ ಪೂರ್ಣ ಪ್ರಮಾಣದ ಯೋಗ ವಿವಿಯಾಗಿದ್ದು ವಿಶ್ವದಾದ್ಯಂತ 30 ಶಾಖೆಗಳನ್ನು ಹೊಂದಿದೆ. ಇಲ್ಲಿ ಯೋಗ ಇನ್‌ಸ್ಟ್ರಕ್ಟರ್ ಕೋರ್ಸ್‌ನಿಂದ ಹಿಡಿದು ಪಿಎಚ್.ಡಿವರೆಗೆ ಶಿಕ್ಷಣ ನೀಡಲಾಗುತ್ತದೆ. ಯೋಗ ವಿಜ್ಞಾನ ಮತ್ತು ಪ್ರಕೃತಿ ಚಿಕಿತ್ಸೆಯ ಪದವಿಯಲ್ಲದೆ ವೈದ್ಯರಿಗಾಗಿಯೇ 'ಯೋಗ ಥೆರಪಿ ಓರಿಯಂಟೇಶನ್ ಟ್ರೇನಿಂಗ್' (YTOT) ಎಂಬ ಕೋರ್ಸ್ ಕಲಿಸುತ್ತದೆ.

## ಎಸ್ಸೆಸ್ಸೆಲ್ಸಿ- ಪಿಯುಸಿ ನಂತರದ ಕೋರ್ಸ್‌ಗಳು

- ಫೌಂಡೇಷನ್ ಕೋರ್ಸ್ ಇನ್ ಯೋಗ
- ಅಡ್ವಾನ್ಸ್ಡ್ ಕೋರ್ಸ್ ಇನ್ ಯೋಗ

**ಪಿಜಿ ಡಿಪ್ಲೊಮಾ ಕೋರ್ಸ್**
- ಯೋಗ ಆ್ಯಂಡ್ ಹೋಲಿಸ್ಟಿಕ್ ಹೆಲ್ತ್
- ಯೋಗ ಥೆರಪಿ
- ಯೋಗ - ನ್ಯಾಚುರೋಪತಿ
- ಯೋಗಿಕ್ ಸೈನ್ಸ್
- ಯೋಗ ಆ್ಯಂಡ್ ಆಲ್ಟರ್‌ನೇಟ್ ಥೆರಪಿ

**ಡಿಪ್ಲೊಮಾ ಕೋರ್ಸ್**
- ಯೋಗ ಎಜುಕೇಶನ್
- ಯೋಗ ಟೀಚರ್ ಟ್ರೈನಿಂಗ್
- ಯೋಗ ಆ್ಯಂಡ್ ಹೆಲ್ತ್ ಎಜುಕೇಶನ್
- ಯೋಗ ಆ್ಯಂಡ್ ಫಿಸಿಕಲ್ ಎಜುಕೇಶನ್
- ಯೋಗ ಆ್ಯಂಡ್ ಹ್ಯೂಮನ್ ಸೈನ್ಸ್

**ಪದವಿ ಕೋರ್ಸ್‌ಗಳು**
- ಬಿಎ (ಯೋಗ ಆ್ಯಂಡ್ ನ್ಯಾಚುರೋಪತಿ)
- ಬಿಎ (ಯೋಗ ಶಾಸ್ತ್ರ)
- ಬಿ.ಎಸ್ಸಿ. (ಯೋಗ ಆ್ಯಂಡ್ ಎಜುಕೇಶನ್)
- ಬಿ.ಎಸ್ಸಿ.(ಯೋಗ -ಮ್ಯಾನೇಜ್‌ಮೆಂಟ್)
- ಬಿ.ಎಸ್ಸಿ. (ಯೋಗ -ಕಾನ್ಶಿಯಸ್‌ನೆಸ್)

**ಪಿಜಿ ಕೋರ್ಸ್‌ಗಳು**
- ಯೋಗ ಆ್ಯಂಡ್ ಹೆಲ್ತ್
- ಯೋಗ ಆ್ಯಂಡ್ ನ್ಯಾಚುರೋಪತಿ
- ಯೋಗಿಕ್ ಸೈನ್ಸ್ – ಹೋಲಿಸ್ಟಿಕ್ ಹೆಲ್ತ್
- ಯೋಗ ಆ್ಯಂಡ್ ಮ್ಯಾನೇಜ್‌ಮೆಂಟ್
- ಯೋಗ ಆ್ಯಂಡ್ ಜರ್ನಲಿಸಂ
- ಯೋಗ ಆ್ಯಂಡ್ ಕೌನ್ಸೆಲಿಂಗ್

**ಸರ್ಟಿಫಿಕೇಟ್ ಕೋರ್ಸ್**
- ಯೋಗ ಅಂಡ್ ನ್ಯಾಚುರೋಪತಿ
- ಫಿಸಿಯೋಥೆರಪಿ ಅಂಡ್ ಯೋಗಥೆರಪಿ
- ಯೋಗ ಎಜುಕೇಶನ್

## ಯಾವ ರೀತಿ ಉದ್ಯೋಗ?

ಯೋಗ ಕೋರ್ಸ್‌ಗಳನ್ನು ಪೂರೈಸಿದವರಿಗೆ, ಯೋಗ ತರಬೇತುದಾರ, ಯೋಗ ಶಿಕ್ಷಕ, ಯೋಗ ಥೆರಪಿಸ್ಟ್, ಯೋಗ ಆ್ಯಂಡ್ ನ್ಯಾಚುರೋಪತಿ ರಿಸರ್ಚ್ ಆಫೀಸರ್, ಯೋಗ ಏರೋಬಿಕ್ ಇನ್‌ಸ್ಟ್ರಕ್ಟರ್, ಪರ್ಸನಲ್ ಯೋಗ ತರಬೇತುದಾರ.. ಹೀಗೆ ಹಲವು ಉದ್ಯೋಗಗಳಿವೆ.

## ಎಲ್ಲೆಲ್ಲಿ ಉದ್ಯೋಗ?

ಖಾಸಗಿ ಹಾಗೂ ಸರ್ಕಾರಿ ಶಾಲೆಗಳು, ಜಿಮ್‌ಗಳು, ಪ್ರಕೃತಿ ಚಿಕಿತ್ಸಾ ಕೇಂದ್ರಗಳು, ಆಸ್ಪತ್ರೆಗಳು, ರೆಸಾರ್ಟ್‌ಗಳು, ಹೌಸಿಂಗ್ ಸೊಸೈಟಿಗಳು, ಸರ್ಕಾರಿ ಸ್ವಾಮ್ಯದ ಕ್ರೀಡಾಶಾಖೆಗಳು, ಕ್ರೀಡಾ ತರಬೇತಿ ಸಂಸ್ಥೆಗಳು, ಐಟಿ ಕಂಪನಿಗಳು ಆರ್ಮಿ ಪಬ್ಲಿಕ್ ಸ್ಕೂಲ್‌ಗಳು ಮತ್ತು ವಿದೇಶಾಂಗ ಇಲಾಖೆಗಳಲ್ಲಿ ಉದ್ಯೋಗಾವಕಾಶಗಳಿವೆ.

## ಸರ್ಕಾರದ ಪ್ರಮಾಣ ಪತ್ರ

ಕೇಂದ್ರ ಸರ್ಕಾರ ಸ್ಥಾಪಿಸಿರುವ 'ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾ' - ಸಂಸ್ಥೆಯು ಯೋಗ ತರಬೇತುದಾರರಿಗೆ ನಾಲ್ಕು ಹಂತದ ಶ್ರೇಣಿಗಳಾದ ತರಬೇತುದಾರ, ಶಿಕ್ಷಕ, ಗುರು ಹಾಗೂ ಆಚಾರ್ಯ ಎಂಬ ಪ್ರಮಾಣ ಪತ್ರಗಳನ್ನು ನೀಡುತ್ತದೆ. ಇವರು ವಿಶ್ವದ ಮೂಲೆ ಮೂಲೆಯಲ್ಲಿರುವ ಭಾರತದ ವಿದೇಶಾಂಗ ಇಲಾಖೆಯ ದೂತಾವಾಸದಲ್ಲಿ ಕೆಲಸ ನಿರ್ವಹಿಸಲು ಅರ್ಹರಾಗಿರುತ್ತಾರೆ. ವಿಶ್ವದ ಇತರ ಭಾಗಗಳ ಬೇಡಿಕೆಯನ್ನು ಗಮನಿಸಿರುವ ಭಾರತ ಸರ್ಕಾರ ಯೋಗ ಕಲಿಸುವುದಕ್ಕೆ ಬರುವವರ ಕೌಶಲ್ಯ ಪರೀಕ್ಷಿಸಿ ಪ್ರಮಾಣ ಪತ್ರ ನೀಡುವ ವ್ಯವಸ್ಥೆ ಮಾಡಿದೆ.

ಅಂದ ಹಾಗೆ, ಭಾರತದ ಯಾವುದೇ ಊರುಗಳಲ್ಲಿ ತರಬೇತುದಾರರು ನಡೆಸುವ ಯೋಗ ತರಬೇತಿ ಕೇಂದ್ರಗಳ ಆದಾಯಕ್ಕೆ ಯಾವುದೇ ರೀತಿಯ ತೆರಿಗೆ ಇರುವುದಿಲ್ಲ.

**ಕೋರ್ಸ್ ಎಲ್ಲೆಲ್ಲಿ ಲಭ್ಯ?**

ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವ ವಿದ್ಯಾಲಯ, ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯ, ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವ ವಿದ್ಯಾಲಯ, ಉಡುಪಿಯ ಶಾರದಾ ಕಾಲೇಜು, ಬೆಳಗಾವಿಯ ಕೆಎಲ್‌ಇ ಕಾಲೇಜ್ ಆಫ್ ನ್ಯಾಚುರೋಪತಿ ಅಂಡ್ ಯೋಗಿಕ್ ಸೈನ್ಸ್, ಬೆಂಗಳೂರು ವಿಶ್ವವಿದ್ಯಾಲಯ, ಧಾರವಾಡದ ಕರ್ನಾಟಕ ವಿವಿ, ಮಂಗಳೂರು ವಿವಿಯ ವಿವಿಧ ಕಾಲೇಜುಗಳಲ್ಲಿ ಯೋಗ ಕಲಿಸುವ ಕೋರ್ಸ್‌ಗಳಿವೆ.


ಮೈಸೂರಿನ 'ಸಮ್ಯಕ್' ಯೋಗ, ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜು, ಮೂಡಬಿದಿರೆಯ ಆಳ್ವಾಸ್ ಕಾಲೇಜ್ ಆಫ್ ನ್ಯಾಚುರೋಪತಿ ಆ್ಯಂಡ್ ಯೋಗ, ಉಜಿರೆಯ ಎಸ್‌ಡಿಎಂ ಕಾಲೇಜ್ ಆಫ್ ನ್ಯಾಚುರೋಪತಿ ಅಂಡ್ ಯೋಗಿಕ್ ಸೈನ್ಸ್, ಬೆಂಗಳೂರಿನ ಹೆಬ್ಬಾಳದ ವಿವೇಕಾನಂದ ಸ್ಕೂಲ್ ಆಫ್ ಯೋಗ ಅಲ್ಲದೇ ದೆಹಲಿಯ ಮೊರಾರ್ಜಿ ದೇಸಾಯಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಯೋಗ, ಮುಂಬೈನ ಸಾಂತಾಕ್ರೂಜ್ ಬಳಿಯ ಯೋಗ ಇನ್‌ಸ್ಟಿಟ್ಯೂಟ್, ಹರಿದ್ವಾರದ ದೇವ ಸಂಸ್ಕೃತಿ ವಿಶ್ವವಿದ್ಯಾಲಯ, ಭುವನೇಶ್ವರದ ಇನ್‌ಸ್ಟಿಟ್ಯೂಟ್ ಆಫ್ ಯೋಗಿಕ್ ಸೈನ್ಸ್ ಅಂಡ್ ರಿಸರ್ಚ್ ಮತ್ತು ಗುಜರಾತ್ ವಿವಿಗಳಲ್ಲಿ ಯೋಗದ ಹಲವು ಕೋರ್ಸ್‌ಗಳನ್ನು ಕಲಿಸಲಾಗುತ್ತದೆ.

ಗಮನಿಸಿ: ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ ಎಜುಕೇಶನ್ ಶಿಕ್ಷಕ ತರಬೇತಿಯ ಡಿ.ಇಡಿ, ಬಿ.ಇಡಿ ಮತ್ತು ಎಂ.ಇಡಿ – ಈ ಮೂರು ಹಂತಗಳಲ್ಲಿ ಯೋಗ ಶಿಕ್ಷಣವನ್ನು ಪಠ್ಯಕ್ರಮದ ಭಾಗವನ್ನಾಗಿಸಿದೆ.

**ಹೆಚ್ಚಿನ ಮಾಹಿತಿಗೆ:** https://svyasa.edu.in, https://samyakyoga.org, https://kswu.ac.in ಸಂಪರ್ಕಿಸಬಹುದು.

## ಬಿಎಸ್ಸಿ(ಅರಣ್ಯ) ನಂತರ ಮುಂದೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

**1. ನಾನು ದ್ವಿತೀಯ ಪಿಯುಸಿ ಪರೀಕ್ಷೆ ಬರೆದಿದ್ದೇನೆ. ಬಿಎಸ್‌ಸಿ (ಅರಣ್ಯ) ಮಾಡಬೇಕೆಂದುಕೊಂಡಿರುವೆ. ಆದರೆ ಕೆಲವರು ಇದರಲ್ಲಿ ಭವಿಷ್ಯವಿಲ್ಲ ಎನ್ನುತ್ತಿದ್ದಾರೆ. ಈ ಪದವಿ ನಂತರ ಸಿಗಬಹುದಾದ ಹುದ್ದೆಗಳ ಬಗ್ಗೆ ತಿಳಿಸಿ.**

**ಚಿನ್ಮಯ್,** ಮಂಡ್ಯ

ನೀವು ಬಿ.ಎಸ್ಸಿ(ಅರಣ್ಯ) ಪದವಿಯ ಪೂರ್ಣಗೊಳಿಸಿದ ನಂತರ, ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಆರ್‌ಎಫ್‌ಒ ಹುದ್ದೆಯನ್ನು ಪಡೆದುಕೊಳ್ಳಬಹುದು. ಆರ್‌ಎಫ್‌ಒ ಹುದ್ದೆಗೆ ಪದವಿ ಪರೀಕ್ಷೆಯಲ್ಲಿ ಶೇ 50 ಅಂಕಗಳಿಸಿರ ಬೇಕು. ಕರ್ನಾಟಕ ಅರಣ್ಯ ಇಲಾಖೆಗೆ ಅರ್ಜಿ ಸಲ್ಲಿಸಿದ ನಂತರ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು. ಇದಾದ ನಂತರ ದೇಹದಾರ್ಢ್ಯತೆ, ವೈದ್ಯಕೀಯ ಮತ್ತು ದೈಹಿಕ ಕ್ಷಮತೆ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕು. ಈ ಎಲ್ಲಾ ಪರೀಕ್ಷೆಗಳ ಆಧಾರದ ಮೇಲೆ ನೇಮಕಾತಿಯಾಗುತ್ತದೆ. ಡಿಆರ್‌ಎಫ್‌ಒ ಹುದ್ದೆಗೆ ಪಿಯುಸಿ ಪರೀಕ್ಷೆಯ ನಂತರ ಅರ್ಹತೆ ಸಿಗುತ್ತದೆ. ನೇಮಕಾತಿ ಪ್ರಕ್ರಿಯೆ, ಎರಡು ಹುದ್ದೆಗಳಿಗೂ ಸಮಾನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://kfdrecruitment.in/

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

### ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಿ.

ಚೆಸ್ ಒಲಿಂಪಿಯಾಡ್‌ನಲ್ಲಿ ಇದೇ ಮೊದಲ ಬಾರಿ ಆಯೋಜನೆ: ಪ್ರಧಾನಿ ಮೋದಿ ಚಾಲನೆ

# 75 ನಗರಗಳಲ್ಲಿ ಜ್ಯೋತಿಯಾತ್ರೆ ಸಂಚಾರ

ನವದೆಹಲಿ (ಪಿಟಿಐ): ಚೆಸ್ ಒಲಿಂಪಿಯಾಡ್‌ನಲ್ಲಿ ಇದೇ ಮೊದಲ ಬಾರಿ ಆಯೋಜಿಸಿರುವ ಕ್ರೀಡಾ ಜ್ಯೋತಿ ಯಾತ್ರೆಗೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಚಾಲನೆ ನೀಡಿದರು.

44ನೇ ಚೆಸ್ ಒಲಿಂಪಿಯಾಡ್ ತಮಿಳುನಾಡಿನ ಮಹಾಬಲಿಪುರಂನಲ್ಲಿ ಜುಲೈ 28 ರಿಂದ ಆಗಸ್ಟ್ 10ರ ವರೆಗೆ ನಡೆಯಲಿದೆ. ಅಂತರರಾಷ್ಟ್ರೀಯ ಚೆಸ್ ಸಂಸ್ಥೆ (ಫಿಡೆ) ಇದೇ ಮೊದಲ ಬಾರಿಗೆ ಚೆಸ್ ಒಲಿಂಪಿಯಾಡ್‌ನಲ್ಲಿ ಒಲಿಂಪಿಕ್ ಮಾದರಿಯಲ್ಲಿ ಜ್ಯೋತಿಯಾತ್ರೆ ಪರಿಚಯಿಸಿದೆ.

ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಫಿಡೆ ಅಧ್ಯಕ್ಷ ಅರ್ಕೇದಿ ದೊರ್ಕೊವಿಚ್ ಅವರು ಕ್ರೀಡಾ ಜ್ಯೋತಿಯನ್ನು ಪ್ರಧಾನಿಗೆ ಹಸ್ತಾಂತರಿಸಿದರು. ಪ್ರಧಾನಿ ಅದನ್ನು ಗ್ರ್ಯಾಂಡ್‌ಮಾಸ್ಟರ್ ವಿಶ್ವನಾಥನ್ ಆನಂದ್‌ಗೆ ನೀಡುವುದರೊಂದಿಗೆ ಯಾತ್ರೆಗೆ ಚಾಲನೆ ಲಭಿಸಿತು. ಜ್ಯೋತಿಯಾತ್ರೆ 40 ದಿನಗಳಲ್ಲಿ 75 ನಗರಗಳಲ್ಲಿ ಸಾಗಿ, ಚೆನ್ನೈ ಸಮೀಪದ ಮಹಾಬಲಿಪುರಂ ತಲುಪಲಿದೆ. ಪ್ರತಿ ತಾಣದಲ್ಲೂ ಆಯಾ ರಾಜ್ಯದ ಗ್ರ್ಯಾಂಡ್‌ಮಾಸ್ಟರ್‌ಗಳು ಜ್ಯೋತಿಯನ್ನು ಸ್ವೀಕರಿಸಲಿದ್ದಾರೆ. ಲೆಹ್, ಶ್ರೀನಗರ, ಜೈಪುರ, ಸೂರತ್, ಮುಂಬೈ, ಭೋಪಾಲ್, ಪಟ್ನಾ, ಕೋಲ್ಕತ್ತ, ಗ್ಯಾಂಗ್ಟಕ್, ಹೈದರಾಬಾದ್, ಬೆಂಗಳೂರು, ತ್ರಿಶೂರ್, ಪೋರ್ಟ್‌ಬ್ಲೇರ್ ಮತ್ತು ಕನ್ಯಾಕುಮಾರಿ ನಗರಗಳಲ್ಲಿ ಯಾತ್ರೆ ಸಾಗಲಿದೆ.



ಚೆಸ್ ಒಲಿಂಪಿಯಾಡ್ ಕ್ರೀಡಾ ಜ್ಯೋತಿಯಾತ್ರೆಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು. ಅನುರಾಗ್ ಠಾಕೂರ್, ವಿಶ್ವನಾಥನ್ ಆನಂದ್, ಕೊನೇರು ಹಂಪಿ, ಅರ್ಕೇದಿ ದೊರ್ಕೊವಿಚ್ ಇದ್ದಾರೆ

**ಮುಖ್ಯಾಂಶಗಳು**

- ಜುಲೈ 28 ರಿಂದ ಆ.10ರ ವರೆಗೆ ಒಲಿಂಪಿಯಾಡ್
- ಮಹಾಬಲಿಪುರಂನಲ್ಲಿ ಆಯೋಜನೆ
- ಕಾರ್ಯಕ್ರಮದಲ್ಲಿ ಆನಂದ್, ಹಂಪಿ ಭಾಗಿ

100 ವರ್ಷಗಳ ಇತಿಹಾಸ ಹೊಂದಿರುವ ಚೆಸ್ ಒಲಿಂಪಿಯಾಡ್‌ಗೆ ಭಾರತ ಆತಿಥ್ಯ ವಹಿಸುತ್ತಿರುವುದು ಇದೇ ಮೊದಲು. 188 ದೇಶಗಳು ಈ ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿವೆ.

**ಚೆಸ್‌ಗೆ ದೊರೆತ ಗೌರವ:** 'ಚೆಸ್ ಒಲಿಂಪಿಯಾಡ್‌ನ ಮೊಟ್ಟಮೊದಲ ಜ್ಯೋತಿಯಾತ್ರೆಗೆ ಭಾರತದಲ್ಲಿ ಚಾಲನೆ ಲಭಿಸಿದೆ. ನಮ್ಮ ದೇಶ ಇದೇ ಮೊದಲ ಬಾರಿಗೆ ಈ ಪ್ರತಿಷ್ಠಿತ ಟೂರ್ನಿಗೆ ಆತಿಥ್ಯ ವಹಿಸಿದೆ. ಚೆಸ್ ಕ್ರೀಡೆಯ ಹುಟ್ಟೂರು ಎನಿಸಿರುವ ಈ ನಾಡು, ಪ್ರಮುಖ ಟೂರ್ನಿಯನ್ನು ಆಯೋಜಿಸುತ್ತಿರುವುದು ಹೆಮ್ಮೆಯ ಸಂಗತಿ. ಇದು ಭಾರತಕ್ಕೆ ಮಾತ್ರವಲ್ಲ, ಚೆಸ್ ಕ್ರೀಡೆಗೆ ದೊರೆತ ಗೌರವ' ಎಂದು ಪ್ರಧಾನಿ ಹೇಳಿದರು.

ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಬಾಕ್ಸಿಂಗ್: ಲಾಲ್ಬಿಯಾಕಿಮಗೆ ನಿರಾಸೆ

ದುಬೈ (ಪಿಟಿಐ): ಭಾರತದ ಬಾಕ್ಸರ್ ಲಾಲ್ಬಿಯಾಕಿಮ ಅವರು ಡಬ್ಲ್ಯುಬಿಸಿ ಏಷ್ಯನ್ ಬಾಕ್ಸಿಂಗ್ ಕೌನ್ಸಿಲ್‌ನ ಲೈಟ್ ಫ್ಲೈವೇಟ್ ವಿಭಾಗದ ಕಿರೀಟಕ್ಕಾಗಿ ನಡೆದ ಹೋರಾಟದಲ್ಲಿ ಸೋಲು ಅನುಭವಿಸಿದರು.


ದುಬೈ ವರ್ಲ್ಡ್ ಟ್ರೇಡ್ ಸೆಂಟರ್‌ನಲ್ಲಿ ಶನಿವಾರ ರಾತ್ರಿ ನಡೆದ 10 ಸುತ್ತುಗಳ ಪೈಪೋಟಿಯಲ್ಲಿ ಅವರು ಫಿಲಿಪ್ಪೀನ್ಸ್‌ನ ಜೇಸನ್ ವೇಸನ್ ಕೈಯಲ್ಲಿ ಪರಾಭವಗೊಂಡರು.

ವೃತ್ತಿಪರ ಬಾಕ್ಸಿಂಗ್‌ನಲ್ಲಿ ಮಿಜೋರಾಂನ ಬಾಕ್ಸರ್‌ಗೆ ಎದುರಾದ ಮೊದಲ ಸೋಲು ಇದು. ಈ ಹಿಂದಿನ ನಾಲ್ಕು ಹೋರಾಟಗಳಲ್ಲಿ ಅವರು ಜಯ ಸಾಧಿಸಿದ್ದರು. ಡಬ್ಲ್ಯುಬಿಸಿ ಬಾಕ್ಸಿಂಗ್‌ನಲ್ಲಿ ಜೇಸನ್‌ಗೆ ದೊರೆತ ಸತತ 10ನೇ ಗೆಲುವು ಇದು.

## ಕೆನಡಿಯನ್ ಗ್ರ್ಯಾನ್‌ಪ್ರಿ: ಮ್ಯಾಕ್ಸ್ ಮಿಂಚು

ಮಾಂಟ್ರಿಯಲ್ (ಎಪಿ): ರೆಡ್‌ಬುಲ್ ಚಾಲಕ, ನೆದರ್ಲೆಂಡ್ಸ್‌ನ ಮ್ಯಾಕ್ಸ್ ವರ್ಸ್ಟಾಪನ್ ಕೆನಡಿಯನ್ ಫಾರ್ಮುಲಾ ಒನ್ ಗ್ರ್ಯಾನ್ ಪ್ರಿ ರೇಸ್‌ನಲ್ಲಿ ಪೋಲ್ ಪೊಸಿಷನ್ ಪಡೆದಿದ್ದಾರೆ.

ಹಾಲಿ ಚಾಂಪಿಯನ್ ಮ್ಯಾಕ್ಸ್ ಮಳೆಯ ನಡುವೆಯೂ ಮಿಂಚಿದರು. ಈ ಋತುವಿನಲ್ಲಿ 2ನೇ ಬಾರಿ ಈ ಸಾಧನೆ ಮಾಡಿದರು.


ಮ್ಯಾಕ್ಸ್ ವರ್ಸ್ಟಾಪನ್

ಮ್ಯಾಕ್ಸ್ 1 ನಿಮಿಷ 21.299 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಅಲ್ಪೈನ್ ತಂಡದ ಫರ್ನಾಂಡೊ ಅಲೊನ್ಸೊ ಮತ್ತು ಕಾರ್ಲೊಸ್ ಸೇಂಜ್ ಜೂನಿಯರ್ (ಫೆರಾರಿ) ಕ್ರಮವಾಗಿ 2 ಮತ್ತು 3ನೇ ಸ್ಥಾನ ಗಳಿಸಿದರು.



## ಸ್ಕ್ವಾಷ್: ಅನಾಹತ್‌ಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಯುವ ಸ್ಪರ್ಧಿ ಅನಾಹತ್ ಸಿಂಗ್ ಅವರು ಥಾಯ್ಲೆಂಡ್‌ನ ಪಟ್ಟಾಯದಲ್ಲಿ ನಡೆದ ಏಷ್ಯನ್ ಜೂನಿಯರ್ ಸ್ಕ್ವಾಷ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದರು.


ಅನಾಹತ್ ಸಿಂಗ್

ಭಾನುವಾರ ನಡೆದ ಬಾಲಕಿಯರ 15 ವರ್ಷದೊಳಗಿನ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಅನಾಹತ್ 3–0 ರಲ್ಲಿ ಹಾಂಗ್‌ಕಾಂಗ್‌ನ ವೊಂಗ್ ಎನಾ ಅವರನ್ನು ಮಣಿಸಿದರು.

14 ವರ್ಷದ ಅನಾಹತ್ ಟೂರ್ನಿಯುದ್ದಕ್ಕೂ ಪ್ರಭಾವಿ ಪ್ರದರ್ಶನ ನೀಡಿ, ಯಾವುದೇ ಗೇಮ್ ಕಳೆದುಕೊಳ್ಳದೆ ಫೈನಲ್ ಪ್ರವೇಶಿಸಿದ್ದರು. ಸೆಮಿಫೈನಲ್‌ನಲ್ಲಿ ಅವರು 3–0ರಲ್ಲಿ ಮಲೇಷ್ಯಾದ ವಿಟ್ನಿ ಇಸಾಬೆಲ್‌ಗೆ ಆಘಾತ ನೀಡಿದ್ದರು.

ಅನಾಹತ್ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಇದುವರೆಗೆ ಎಂಟು ಪ್ರಶಸ್ತಿ ಜಯಿಸಿದ್ದಾರೆ. ಯುಎಸ್ ಜೂನಿಯರ್ ಮತ್ತು ಬ್ರಿಟಿಷ್ ಜೂನಿಯರ್ ಓಪನ್‌ನಲ್ಲಿ ಚಾಂಪಿಯನ್ ಆದ ಭಾರತದ ಮೊದಲ ಆಟಗಾರ್ತಿ ಎಂಬ ಶ್ರೇಯ ಅವರಿಗಿದೆ.

## ಅಂತರ ಜಿಲ್ಲಾ ಫುಟ್‌ಬಾಲ್: ಡ್ರಾ ಪಂದ್ಯದಲ್ಲಿ ದಕ್ಷಿಣ ಕನ್ನಡ– ಬೆಳಗಾವಿ

ಬೆಂಗಳೂರು: ದಕ್ಷಿಣ ಕನ್ನಡ ಮತ್ತು ಬೆಳಗಾವಿ ತಂಡಗಳು ಇಲ್ಲಿ ನಡೆಯುತ್ತಿರುವ ಕೆಎಸ್‌ಎಫ್‌ಎ ಅಂತರ ಜಿಲ್ಲಾ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಸಮಬಲ ಸಾಧಿಸಿದವು.

ಭಾನುವಾರ ನಡೆದ ಪಂದ್ಯದಲ್ಲಿ ಬೆಳಗಾವಿ– ದಕ್ಷಿಣ ಕನ್ನಡ ನಡುವಣ ಪಂದ್ಯ 1–1ರಿಂದ ಡ್ರಾ ಆಯಿತು. ದಕ್ಷಿಣ ಕನ್ನಡ ಪರ ಫರಾಜ್ ಅಹಮದ್ ಮತ್ತು ಬೆಳಗಾವಿ ತಂಡಕ್ಕಾಗಿ ಪ್ರದ್ಯುಮ್ನ್ ಬೊಕಡೆ ಗೋಲು ಗಳಿಸಿದರು.

**ಯಂಗ್‌ಸ್ಟಾರ್ಸ್‌ಗೆ ಭರ್ಜರಿ ಜಯ:** ನಂದಿತಾ ಬಾಲಾಜಿ ಗಳಿಸಿದ ಎರಡು ಗೋಲುಗಳ ಬಲದಿಂದ ಯಂಗ್‌ಸ್ಟಾರ್ಸ್ ಎಫ್‌ಸಿ ತಂಡವು ಕೆಎಸ್‌ಎಫ್‌ಎ ಬಿ ಡಿವಿಷನ್ ಮಹಿಳಾ ಲೀಗ್‌ನಲ್ಲಿ ಭರ್ಜರಿ ಜಯ ಗಳಿಸಿತು. ಭಾನುವಾರ ನಡೆದ ಪಂದ್ಯದಲ್ಲಿ 5–1ರಿಂದ ಬೆಂಗಳೂರು ಕ್ಯಾಥೊಲಿಕ್ ಎಫ್‌ಸಿಯನ್ನು ಮಣಿಸಿತು.

ವಿಜೇತ ತಂಡದ ನಂದಿತಾ (4, 15ನೇ ನಿಮಿಷ), ವಿಸ್ಮಯಾ ಎಂ. (10ನೇ ನಿ.), ಭುವಿ ಸತೀಶ್ (20ನೇ ನಿ.) ಮತ್ತು ಜಿಮುಶ್ರೀ ಎಸ್. (35ನೇ ನಿ.) ಕಾಲ್ಚಳಕ ತೋರಿದರು. ಕ್ಯಾಥೊಲಿಕ್ ಪರ ದೇವಯಾನಿ (9ನೇ ನಿ.) ಗೋಲು ಹೊಡೆದರು.

ಇನ್ನುಳಿದ ಪಂದ್ಯಗಳಲ್ಲಿ ಲೆಜೆಂಡ್ಸ್ ಡಿ ಸ್ಪೋರ್ಟಿಂಗ್ ಬೆಂಗಳೂರು 2–0ಯಿಂದ ವಿಲಿಯಮ್ ವಿಮೆನ್ಸ್ ಎಫ್‌ಸಿ ಎದುರು, ಜಿಆರ್‌ಕೆ ಗ್ಲಿಟರಿಂಗ್ ಸ್ಟಾರ್ಸ್ ಎಫ್‌ಸಿ 1–0ಯಿಂದ ಅಲ್ಕೆಮಿ ಇಂಟರ್‌ನ್ಯಾಷನಲ್ ಎದುರು, ಟೆಕ್ನಿಕೊ ಫುಟ್‌ಬಾಲ್ ಫೌಂಡೇಷನ್ 1–0ಯಿಂದ ಬೆಂಗಳೂರು ಯುನೈಟೆಡ್ ಎದುರು ಗೆದ್ದವು.